ಅಚಲ

ತಿಂಗಳ ಪತ್ರಿಕೆ

ಫೆಬ್ರವರಿ, ಮಾರ್ಚ್ : 2001



ಮಾನಸ

ತಿಂಗಳ ಪತ್ರಿಕೆ

ಸಂಪುಟ : 18 ಸಂಚಿಕೆ : 2

ಫೆಬ್ರವರಿ, ಮಾರ್ಚ್ : 2001

ವಿಳಾಸ
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **4-00** ರೂ.
ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಉದಾರೀಕರಣ, ಖಾಸಗೀಕರಣಗಳ ಮೂಲಕ ಪ್ರಾರಂಭವಾದ ಜಾಗತೀಕರಣದ ಪರಿಣಾಮವು ಎಲ್ಲಾ ಕ್ಷೇತ್ರಗಳಲ್ಲೂ ಪ್ರತ್ಯಕ್ಷವಾಗಿ ಕಾಣಲಾರಂಭಿಸಿದೆ. ಜಾಗತೀಕರಣವೆಂಬುದು ವಿಶ್ವವನ್ನೇ ಒಂದು ಗ್ರಾಮವನ್ನಾಗಿಸುವುದು ಸುಳ್ಳು ಅದೊಂದು ಸಂಚೆಂದು ಸಾಬೀತಾಗಿದೆ. ದೇಶದ ನೆಲ, ಜಲ, ಸಂಪನ್ಮೂಲ, ಜನರ ಶ್ರಮ ಶಕ್ತಿಯನ್ನು ಅಗ್ಗದ ಬೆಲೆಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಹರಾಜು ಹಾಕಲು ಸರ್ಕಾರಗಳು (ಸಂಚು) ಪೈಪೋಟಿ ನಡೆಸುತ್ತಿವೆ. ಖಾಸಗೀಕರಣದ ಅಬ್ಬರದಲ್ಲಿ ಸಮಾನತೆ, ಸಾಮಾಜಿಕ ನ್ಯಾಯಗಳು, ಅರ್ಥ ಕಳೆದುಕೊಂಡು ಮಹಿಳೆಯರ, ದಲಿತರ, ಬಡವರ, ಸ್ಥಿತಿ ದಿನೇ ದಿನೇ ಶೋಚನೀಯವಾಗುತ್ತಿದೆ.

ಸದ್ಯದ ಹೈಟೆಕ್, ಸೂಪರ್ ಆರ್ಥಿಕ ಮಾದರಿಗೆ ಪೂರಕವಾದ ವಿದ್ಯಾಭ್ಯಾಸ, ತಾಂತ್ರಿಕ ಕೌಶಲ್ಯವಿಲ್ಲದ ಮಹಿಳೆಯರು ಅಭದ್ರತೆಯ ಸ್ಥಿತಿಯಲ್ಲಿದ್ದಾರೆ. ಆದರೆ, ಈ ಸೂಪರ್ ಆರ್ಥಿಕ ಮಾದರಿಗಳು ಪುರುಷ ಪ್ರಧಾನತೆಯಲ್ಲಿ ಸಿಕ್ಕಿಕೊಂಡು, ಪ್ರತಿಭಟಿಸಲು ಹಿಂಜರಿಯುವ ಮಹಿಳೆಯರ ಸ್ವಭಾವ, ದುಡಿಮೆಯನ್ನು ನಯವಾಗಿ ಬಳಸಿಕೊಂಡು ಲಾಭ ಮಾಡಿಕೊಳ್ಳುತ್ತಿವೆ.

ಮಹಿಳೆಯರ ಆರ್ಥಿಕತೆ, ಆರ್ಥಿಕ ಚಟುವಟಿಕೆಗಳು ಸಾಮಾಜಿಕ ಅಗತ್ಯತೆ ಹೊಂದಿವೆಯಲ್ಲದೆ, ಆರ್ಥಿಕ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುತ್ತವೆ. ಆರ್ಥಿಕ ಚಿಂತನೆಯಲ್ಲಿ ಲಿಂಗಾಧಾರಿತ ಗ್ರಹಿಕೆ ಇಲ್ಲದಿರುವುದರಿಂದ ಮಹಿಳೆಯರ ದುಡಿಮೆ, ನಗಣ್ಯವಾಗಿದೆ. ಈಗ ಮಹಿಳೆಯರ ಶ್ರಮವನ್ನು ಗುರುತಿಸಲೇಬೇಕಾದ ಅನಿವಾರ್ಯತೆ ಉಂಟಾಗಿದೆ. ಇತ್ತೀಚಿನ ಜನಗಣತಿ ಕಾರ್ಯಕ್ರಮದಲ್ಲಿ ಮಹಿಳೆಯರ ಮನೆಯೊಳಗಿನ ದುಡಿತವನ್ನು ಸೇರಿಸಿರುವುದು ಒಂದು ಉದಾಹರಣೆಯಾಗಿದೆ.

ಬೃಹತ್ ಆರ್ಥಿಕ ಮಾದರಿಗಳ ವಿರುದ್ಧ ನಡೆಯುತ್ತಿರುವ ಚಳುವಳಿಯಲ್ಲಿ, ಪರಿಸರ, ಆದಿವಾಸಿ ಚಳುವಳಿಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಈ ಮೂಲಕ ಮಹಿಳಾ ಆರ್ಥಿಕತೆ ಒಂದು ಪರ್ಯಾಯ ಭಾಗವಾಗಬಹುದೆಂದು ಸಾಬೀತು ಪಡಿಸಿದ್ದಾರೆ. ಸಮಾನತೆಯಲ್ಲಿ ನಂಬಿಕೆ ಇರುವ ಎಲ್ಲಾ ಪ್ರಗತಿಪರ, ಜನಪರ ಚಳುವಳಿಗಳೂ ಒಗ್ಗೂಡಿ ಜಾಗತೀಕರಣದ ವಿರುದ್ಧ ಹೋರಾಡಬೇಕಾಗಿರುವ ತುರ್ತಿದೆ. ಏಕೆಂದರೆ ಒಂದು ಈಸ್ಟ್ ಇಂಡಿಯಾ ಕಂಪೆನಿಯಲ್ಲ ಸಾಲು ಸಾಲು ಬಹುರಾಷ್ಟ್ರೀಯ ಕಂಪೆನಿಗಳನ್ನು ಒದ್ದೋಡಿಸಬೇಕಾಗಿದೆ.

715 ವಸ್ತುಗಳನ್ನು ನಿರಾಯಾಸವಾಗಿ ದೇಶದ ಮಾರುಕಟ್ಟೆಯೊಳಗಡೆ ಬರಲು ಆಮದು ನಿರ್ಬಂಧಗಳನ್ನು ರದ್ದು ಮಾಡಿರುವ ಕೇಂದ್ರ ಸರ್ಕಾರದ ಆಮದು ರಫ್ತು ನೀತಿಯನ್ನು ಮಾನಸ ವಿರೋಧಿಸುತ್ತದೆ.

○ *ಸಂಪಾದಕೀಯ ಮಂಡಳಿ*

ಜಾಗತೀಕರಣವೆಂಬ ಉರುಳಿನಲ್ಲಿ ಮಹಿಳೆ

"ಜಗತ್ತನ್ನೇ ಒಂದು ಹಳ್ಳಿಯನ್ನಾಗಿಸುವ, ಮೇಲು ನೋಟಕ್ಕೆ ಸುಂದರವೆನಿಸುವ ಪರಿಕಲ್ಪನೆಯೇ ಜಾಗತೀಕರಣ". ಜಾಗತೀಕರಣದ ಅಗತ್ಯವಿರುವುದು ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳಿಗೆ,ಮೊದಲನೇ ದೇಶಗಳೆಂದು ಕರೆಸಿಕೊಳ್ಳುವ ರಾಷ್ಟ್ರಗಳಿಗೆ. ಈ ದೇಶಗಳು ಒಂದುಗೂಡಿ ಹೇರುತ್ತಿರುವ ಆರ್ಥಿಕ ನೀತಿಗಳನ್ನು ಬಡರಾಷ್ಟ್ರಗಳು ಮೂರನೇ ಜಗತ್ತಿನ ರಾಷ್ಟ್ರಗಳು ಒಪ್ಪಿಕೊಳ್ಳಲೇಬೇಕಾಗುವಂತಹ ಅನಿವಾರ್ಯ ಸಂದರ್ಭವನ್ನು ಜಾಗತಿಕ ಮಟ್ಟದಲ್ಲಿ ಹುಟ್ಟುಹಾಕಲಾಗುತ್ತಿದೆ. ಅಭಿವೃದ್ಧಿ ಹೊಂದದ ಈ ರಾಷ್ಟ್ರಗಳು ಅಂತರಾಷ್ಟ್ರೀಯ ಒತ್ತಡಕ್ಕೆ ಮಣಿದು ತಮ್ಮ ದೇಶದ ಬಾಗಿಲನ್ನು ಧಾರಾಳವಾಗಿ ತೆಗೆಯುತ್ತಿವೆ. ಇದರ ಪರಿಣಾಮ ಘೋರವಾದುದು, ಅಭಿವೃದ್ಧಿ ಹೊಂದುತ್ತಿರುವ, ರಾಷ್ಟ್ರಗಳು ಜಾಗತೀಕರಣದ ಬಿರುಗಾಳಿಗೆ ಸಿಕ್ಕು ಸಂಪೂರ್ಣವಾಗಿ ನೆಲಕಚ್ಚುತ್ತಿರುವ ನಿದರ್ಶನಗಳು ಈಗಾಗಲೇ ನಮ್ಮ ಕಣ್ಣು ಮುಂದಿವೆ. ಆರ್ಥಿಕ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಪರಾವಲಂಬಿಯಾಗುವ ಈ ದೇಶಗಳು ಕ್ರಮೇಣ, ಜಾಗತೀಕ ಮಟ್ಟದ ಎಲ್ಲಾ ಸ್ವರೂಪದ ಒತ್ತಡಗಳಿಗೂ ಮಣಿಯಬೇಕಾಗುತ್ತದೆ.

ಜಾಗತೀಕರಣದ ಪ್ರಭಾವದಿಂದಾಗಿ ಶ್ರೀಮಂತ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು ಹಿಂದುಳಿದ ರಾಷ್ಟ್ರಗಳ ನೈಸರ್ಗಿಕ ಸಂಪತ್ತನ್ನು ಯಾವುದೇ ಎಗ್ಗಿಲ್ಲದೆ ಲೂಟಿ ಹೊಡೆಯುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳು ವಿಧಿಸುವ ಷರತ್ತುಗಳನ್ನು ದೇಶ ವಿರೋಧಿ ಯಾಗಿದ್ದರೂ, ಜನಪರವಾಗಿಲ್ಲದಿದ್ದರೂ, ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳಲಾಗುತ್ತಿದೆ. ಸ್ಥಳೀಯ ಜನತೆಯ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿ, ಬಹುರಾಷ್ಟ್ರೀಯ ಕಂಪನಿಗಳ ಚೇಲಾಗಳಂತೆ ಸರ್ಕಾರಗಳು ವರ್ತಿಸುತ್ತಿವೆ.

ಬೀಸುತ್ತಿರುವ ಜಾಗತೀಕರಣದ ಅಲೆಯಿಂದಾಗಿ ಖಾಸಗೀಕರಣದ ಪರಿಕಲ್ಪನೆಯು ಎಲ್ಲಾ ರಂಗವನ್ನು ಪ್ರವೇಶಿಸುತ್ತಿದೆ. 'ಖಾಸಗೀ' ಎಂಬ ಪರಿಕಲ್ಪನೆಯು ಸಮಾಜವಾದ, ಸಾಮಾಜಿಕ ನ್ಯಾಯ, ಜನಮುಖಿ, ಸಾಮಾಜಿಕ ಭದ್ರತೆ ಮುಂತಾದ ಬೇರು ಬಿಡುತ್ತಿದ್ದ ಆಲೋಚನೆಗಳನ್ನು ಬೇರು ಸಹಿತ ಕಿತ್ತುಹಾಕುತ್ತಿವೆ. ಖಾಸಗಿ ವಲಯದ ಮುಖ್ಯ ಉದ್ದೇಶ ಲಾಭ. ಶ್ರೀಮಂತರು ಶ್ರೀಮಂತರಾಗುತ್ತಲೇ, ಸಂಪನ್ಮೂಲಗಳ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸುತ್ತಾರೆ. ಬಡವರು ಮತ್ತಷ್ಟು ಬಡವರಾಗುತ್ತಾ, ನಿರ್ಗತಿಕರಾಗುತ್ತಾರೆ. ಅವರ ಶ್ರಮ ಶಕ್ತಿಯು ಅದಕ್ಕಿರಬೇಕಾದ 'ಮೌಲ್ಯ'ವನ್ನು ಕಳೆದುಕೊಳ್ಳುತ್ತಿದೆ. ಮುಕ್ತ ಮಾರುಕಟ್ಟೆ, ಉದಾರೀಕಣದ ನೀತಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಸ್ವಾಗತವನ್ನು ನೀಡುತ್ತಿರುವುದರಿಂದ ಸಾರ್ವಜನಿಕ ಬೃಹತ್ ಉದ್ದಿಮೆಗಳು ನೆಲಕಚ್ಚುತ್ತಿವೆ. ಕಂಪ್ಯೂಟರೀಕರಣ, ಸ್ವಯಂ ನಿವೃತ್ತಿ ಯೋಜನೆ, ಮುಂತಾದವುಗಳನ್ನು ಒತ್ತಾಯವಾಗಿ ಜನರ ಮೇಲೆ ಹೇರಲಾಗುತ್ತಿದೆ.

ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಲಾಗದ ಸಣ್ಣ ಕೈಗಾರಿಕೆಗಳು ಗಾಬರಿ ಹುಟ್ಟಿಸುವ ಪ್ರಮಾಣದಲ್ಲಿ ಮುಚ್ಚುತ್ತಿವೆ. ಕರ್ನಾಟಕ ರಾಜ್ಯದಲ್ಲಿ 2.56 ದಶಲಕ್ಷ ಸಣ್ಣ ಕೈಗಾರಿಕೆಗಳಲ್ಲಿ 30%ರಷ್ಟು ಸಣ್ಣ ಕೈಗಾರಿಕೆಗಳು ಈಗಾಗಲೇ ಮುಚ್ಚಿವೆ. ಬಹುಪಾಲು ಸರಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಈಗಾಗೇ ರೋಗಗ್ರಸ್ಥವೆಂದು ಘೋಷಿಸಲಾಗಿದೆ. ಬೃಹತ್ ಉದ್ದಿಮೆಗಳಲ್ಲಿ, ಕೈಗಾರಿಕೆಗಳಲ್ಲಿ, ಸಣ್ಣ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಕೆಲಸ ಕಳೆದುಕೊಂಡು ಅವರ ಕುಟುಂಬಗಳು ಬೀದಿಪಾಲಾಗುತ್ತಿವೆ.

ಜಾಗತೀಕರಣ, ಉದಾರೀಕರಣ, ಮುಕ್ತ ಆರ್ಥಿಕ ನೀತಿಯಿಂದ ದೂಳೀಪಟ ಆಗುತ್ತಿರುವವರು ರೈತರು. ನಮ್ಮ ದೇಶದಲ್ಲಿ ಕೃಷಿಯನ್ನು ಅವಲಂಭಿಸಿದ ಶೇ. 90%ರಷ್ಟು ಜನತೆ, ಅಸಹಾಯಕರಾಗಿ, ಆತ್ಮಹತ್ಯೆಯಂತಹ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ, ವಾಣಿಜ್ಯ ಬೆಳೆಗಳ ಪ್ರಾಧಾನ್ಯತೆ, 'ಕುಲಾಂತರಿ' ಬೀಜಗಳ ಹಾವಳಿ, ರಾಸಾಯನಿಕ ಗೊಬ್ಬರಗಳ ಅಬ್ಬರ, ಕಂಪನಿಗಳ ಲಾಭ ಕೋರ ಧೋರಣೆಯಿಂದಾಗಿ ರೈತರು ತತ್ತರಿಸುತ್ತಿದ್ದಾರೆ.

ಕೃಷಿ ಹಾಗೂ ಮಹಿಳೆ

ಜಾಗತೀಕರಣದ ಪ್ರಭಾವದಿಂದ ಕೃಷಿ ಕ್ಷೇತ್ರದಲ್ಲಿ ಸಂಪೂರ್ಣವಾದ ಬದಲಾವಣೆ ಉಂಟಾಗಿದೆ. ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದ ರೈತರು ಹೆಚ್ಚು ಲಾಭದ ದೃಷ್ಟಿಯಿಂದ ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದಾರೆ. ವಾಣಿಜ್ಯ ಬೆಳೆಗಳಿಗೆ ಮಾರುಹೋಗಿರುವ ರೈತರು ತುಂಡು ಭೂಮಿಯಲ್ಲಿ ವ್ಯವಸಾಯ ಮಾಡುವುದನ್ನು ನಿಲ್ಲಿಸಿದ್ದಾರೆ. ತಮ್ಮ ತುಂಡು ಭೂಮಿಯಲ್ಲಿ ರಾಗಿ, ಭತ್ತ, ತರಕಾರಿ, ಕುಟುಂಬ

ನಿರ್ವಹಣೆಗೆ ಅಗತ್ಯವಾದುದನ್ನು ಬೆಳೆಯುತ್ತಿದ್ದ ಸಂದರ್ಭದಲ್ಲಿ ಇದನ್ನು ಸಂಪೂರ್ಣವಾಗಿ ಮಹಿಳೆಯೇ ನಿರ್ವಹಿಸುತ್ತಿದ್ದುದನ್ನು ಕಾಣಬಹುದು. ಆಕೆ ಆ ತುಂಡು ಜಮೀನಿನ ಉಸ್ತುವಾರಿ ನೋಡಿಕೊಳ್ಳುವುದರ ಜೊತೆ ಜೊತೆಯಲ್ಲಿಯೇ ಕೈಮುಟ್ಟಿ ದುಡಿಯುತ್ತಿದ್ದಳು. ಸಂಪೂರ್ಣ ಕುಟುಂಬವನ್ನು ನಿರ್ವಹಿಸುತ್ತಿದ್ದಳು. ವಾಣಿಜ್ಯ ಬೆಳೆಯ ಪ್ರಭಾವದಿಂದಾಗಿ ಸಣ್ಣ ಹಿಡುವಳಿದಾರರು, ಅದರಲ್ಲೂ ವಿಶೇಷವಾಗಿ ಹಿಂದುಳಿದ, ವರ್ಗದ ಪರಿಶಿಷ್ಟ ವರ್ಗದ, ದಲಿತ ಕುಟುಂಬದ ರೈತರು ತಮ್ಮ ಜಮೀನನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ಭೂಹೀನರಾಗುತ್ತಿದ್ದಾರೆ. ಕೆಲವರು ಜಮೀನು ಮಾರಿ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ತಮ್ಮ ಭೂಮಿಯನ್ನು ಕಳೆದುಕೊಂಡ ಇವರು ಕೂಲಿಕಾರರಾಗಿ ಜೀವನ ಮಾಡುತ್ತಿದ್ದಾರೆ. ಸಾಲ ತೀರಿಸಲಾಗದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕುಟುಂಬ ನಿರ್ವಹಣೆಯ ಜವಾಬ್ದಾರಿ ಸಂಪೂರ್ಣವಾಗಿ ಮಹಿಳೆಯರ ಮೇಲೆ ಬೀಳುತ್ತಿದೆ. ಪುರುಷರ ಬೇಜವಾಬ್ದಾರಿ, ಪುರುಷರ ಪ್ರಾಧಾನ್ಯತೆಯಿಂದಾಗಿ ಈ ರೈತ ಮಹಿಳೆಯರು ದುಪ್ಪಟ್ಟು ಶೋಷಣೆಗೆ ಒಳಗಾಗುತ್ತಾರೆ. ಬೆಂಗಳೂರಿಗೆ ವಲಸೆ ಬಂದಿರುವ ಬೀದರ, ಗುಲ್ಬರ್ಗಾ, ರಾಯಚೂರು ಕಡೆಯ ರೈತ ಜನರು ಕಟ್ಟಡ ಕೆಲಸ, ಟಾರ್ ಹಾಕುವ ಕೆಲಸವನ್ನು ಪುರುಷರು - ಹೆಂಗಸರು ಸಮಾನವಾಗಿ ಮಾಡುತ್ತಾರೆ. ಬೆಳಿಗ್ಗೆಯಿಂದ ಮೈಮುರಿದು ದುಡಿಯುವ ಈ ಜನರಲ್ಲಿ ಸಂಜೆಯಾದ ಕೂಡಲೇ, ಹೆಂಗಸರು ಆಯ್ದುತಂದ ಸೌದೆ ಹಚ್ಚಿ ಅಡಿಗೆ ಮಾಡತೊಡಗಿದರೆ, ಗಂಡಸರು ಕುಡಿಯುವುದು, ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಭೂಹೀನರಾಗುವ ರೈತರ ಕುಟುಂಬದಲ್ಲಿ ಕೃಷಿ ಕಾರ್ಮಿಕರಲ್ಲಿ, ಪುರುಷರಿಗೆ ಸರಿಯಾದ ಕೆಲಸವಿಲ್ಲದೆ, ಕುಡಿತದ ಚಟಕ್ಕೆ ಬಲಿಯಾಗುತ್ತಿರುವುದು, ಹೆಂಡತಿಯೇ ಕೂಲಿನಾಲಿ ಮಾಡಿ ಕುಟುಂಬದ ಜವಾಬ್ದಾರಿಯನ್ನು ಹೊರುವುದು ಅನಿವಾರ್ಯ ವಾಗುತ್ತಿದೆ. ಕೃಷಿಭೂಮಿ ಕೈಜಾರಿ ಹೋಗುವುದರಿಂದ ಭೂಮಿಯ ಮೇಲೆ, ಆಹಾರದ ಮೇಲೆ ಇದ್ದ ಅಲ್ಪ ಸ್ವಲ್ಪ ನಿಯಂತ್ರಣವೂ ಸ್ತ್ರೀಯರ ಕೈಯಿಂದ ಜಾರಿ ಹೋಗುತ್ತಿದೆ. ಕೊಳ್ಳುವ ಶಕ್ತಿಯನ್ನು ಕಳೆದುಕೊಳ್ಳುವ ಸ್ತ್ರೀಯರು ಇರುವ ಕಡಿಮೆ ಆಹಾರ ಪ್ರಮಾಣದಲ್ಲಿ ಗಂಡಸರು, ಮಕ್ಕಳಿಗೆ ಬಡಿಸಿ, ಆಕೆಗೆ ಉಳಿಯುವುದು ಕೇವಲ ನೆಪಮಾತ್ರ.

ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯದ ಜೊತೆ ಜೊತೆಯಲ್ಲಿಯೇ ಹೈನುಗಾರಿಕೆಯನ್ನು ರೈತರು ಅವಲಂಬಿಸಿರುವುದು ಕಂಡುಬರುತ್ತದೆ. ಸಹಕಾರಿ ಸಂಘದ ಮೂಲಕ ಹೈನುಗಾರಿಕೆಯನ್ನು ಅವಲಂಬಿಸದ್ದ ರೈತ ಕುಟುಂಬಗಳು ಇಂದು ಸಂಕೀರ್ಣವಾದ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಸಣ್ಣ ರೈತರ, ಮಹಿಳೆಯರೇ ನಿರ್ವಹಿಸುವ ಕುಟುಂಬಗಳು, ಹೈನುಗಾರಿಕೆಯನ್ನೇ ಅವಲಂಬಿಸಿಬೇಕಾದ ಪರಿಸ್ಥಿತಿಯು ಅನಿವಾರ್ಯವಾಗಿ ಉಂಟಾಗುತ್ತಿದೆ. ಹೈನುಗಾರಿಕೆಯಲ್ಲಿ ಗ್ರಾಮೀಣ ಮಹಿಳೆಯರು ಮಹತ್ವದ ಪಾತ್ರವನ್ನು ವಹಿಸುತ್ತಿದ್ದು, ಕರ್ನಾಟಕದಲ್ಲಿ ಸುಮಾರು 700 ಸಹಕಾರ ಸಂಘಗಳನ್ನು ಮಹಿಳೆಯರೇ ನಿರ್ವಹಿಸುತ್ತಿರುವುದು ಗಮನೀಯ ಅಂಶ. ಆದರೆ, ಮಹಿಳೆಯರು ಸ್ಥಳೀಯ ಸಂದರ್ಭದಲ್ಲಿ ಎದುರಿಸಬೇಕಾದ, ಪುರುಷರ ಹಸ್ತಕ್ಷೇಪ, ರಾಜಕೀಯ, ಹಲವಾರು ಸಮಸ್ಯೆಗಳೊಂದಿಗೆ ಸಹಕಾರಿ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶ, ಮಹಿಳೆಯರು ಇಟ್ಟ ಹೆಜ್ಜೆಗೆ ತಡೆಯನ್ನುಂಟು ಮಾಡುತ್ತದೆ. ಕೇಂದ್ರ ಸರ್ಕಾರ ಖಾಸಗೀ ಸಂಸ್ಥೆಗಳಿಗೆ ಪರವಾನಗಿ ನೀಡಿರುವುದರಿಂದ ಇದುವರೆಗೂ, ಸ್ತ್ರೀಯರಿಗೆ ಆದಾಯದ ಮೂಲವಾಗಿದ್ದ ಈ ಹೈನುಗಾರಿಕೆ, ದೂಳೀಪಟವಾಗಿ ಬಿಡುತ್ತದೆ.

ವಾಣಿಜ್ಯ ಬೆಳೆಗಳಿಗೆ ಮಾರುಹೋದ ಕರ್ನಾಟಕದ ರೈತರು ಪುಷ್ಪ ಉದ್ಯಮದಿಂದ ಹೆಚ್ಚು ಲಾಭ ಗಳಿಸಿಕೊಳ್ಳುವ ಜಾಗತೀಕರಣದ ಹುನ್ನಾರಕ್ಕೆ ಬಲಿಯಾಗಿದ್ದಾರೆ. ಆಧುನಿಕ ತಾಂತ್ರಿಕತೆಯನ್ನು ಬಳಸಿ, ರಫ್ತು ಉದ್ದೇಶದಿಂದ ಹೂಗಳನ್ನು ದೊಡ್ಡ ರೈತರು ಹಾಗು ಸಣ್ಣ ರೈತರು ಬೆಳೆಯಲು ತೊಡಗಿದರು. ಕರ್ನಾಟಕದ ಸುಮಾರು ಇಪ್ಪತ್ತು ಜಿಲ್ಲೆಗಳಲ್ಲಿ ವಾಣಿಜ್ಯದ ಉದ್ದೇಶದಿಂದ ಹೂಗಳನ್ನು ಬೆಳೆಯಲಾಗುತ್ತಿದೆ. ಸುಮಾರು 19,656 ಹೆಕ್ಟೇರ್ ಭೂಮಿಯಲ್ಲಿ ವಿವಿಧ ಜಾತಿಯ ಹೂಗಳನ್ನು ಬೆಳೆಯಲಾಗುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರ ಲಗ್ಗೆ ಹಾಕಲು ಸೂಕ್ತವಾದ ದೇಶವಾಗಿದೆ. ಲಾಭ ನೇರವಾಗಿ ವಿದೇಶಿ ಕಂಪನಿಗಳಿಗೆ ಹೋಗುತ್ತಿದೆ. ಈ ಹೈಟೆಕ್ ಉದ್ಯಮವನ್ನು ಹಳ್ಳಿಗಳಲ್ಲಿ ಸಣ್ಣ ರೈತರು, ತುಂಡು ಭೂಮಿಯ ಮಾಲಿಕರು, ಮಹಿಳೆಯರು ಮಾಡಲು ಸಾಧ್ಯವಿಲ್ಲದ ಕಾರಣ, ತಮ್ಮ ಜಮೀನುಗಳನ್ನು ದೊಡ್ಡ ರೈತರಿಗೆ ಮಾರಿಕೊಂಡಿರುವುದು ಕಂಡುಬರುತ್ತದೆ. ಹೀಗೆ ತಾವು ಆಹಾರವನ್ನು ಬೆಳೆಯುವ ಜಮೀನನ್ನು ಮಾರಿಕೊಂಡ ಕುಟುಂಬದ ಮಹಿಳೆಯರು ಕೂಲಿಕಾರರಾಗಿ ಇಂತಹ ಉದ್ಯಮದಲ್ಲಿ ದುಡಿಯುತ್ತಿರುವುದು ಕಂಡುಬರುತ್ತಿದೆ. ಇಂತಹ ಪುಷ್ಪ ಘಟಕಗಳಲ್ಲಿ ದುಡಿಯುವ ಕಾರ್ಮಿಕರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವವರು ಮಹಿಳೆಯರು ಅದರಲ್ಲೂ ವಿಶೇಷವಾಗಿ ದಲಿತ ಮಹಿಳೆಯರು. ಪುಷ್ಪ ಘಟಕಗಳಲ್ಲಿ ದುಡಿಯುವ ಅರ್ಧದಷ್ಟು ಕಾರ್ಮಿಕರು ತಮ್ಮ ತುಂಡು ಜಮೀನನ್ನು ಆ ಘಟಕಗಳಿಗೆ ಮಾರಿಕೊಂಡವರು.

ಇಲ್ಲಿಯು ಮಹಿಳೆಯರನ್ನು ಅಗ್ಗದ ಶ್ರಮಜೀವಿಗಳೆಂದೇ ಪರಿಗಣಿಸಲಾಗುತ್ತಿದೆ. ದಿನಗೂಲಿಯ ಆಧಾರದ ಮೇಲೆಯೇ ಮಹಿಳೆಯನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಇವರ ಕೆಲಸವನ್ನು ಖಾಯಂ ಮಾಡುವುದಿಲ್ಲ. ಕಾರ್ಮಿಕರಿಗೆ ದೊರಕುವ ಯಾವುದೇ ಸೌಲಭ್ಯ ಇವರಿಗೆ ದೊರಕುವುದಿಲ್ಲ. ದಿನಕ್ಕೆ 25 ರಿಂದ 50 ರೂ. ಕೂಲಿ ಪಡೆಯುವ ಇವರಿಗೆ ರಜೆಯ ಸೌಲಭ್ಯವಿರುವುದಿಲ್ಲ. ಕೀಟನಾಶಕಗಳ ಸಂಪರ್ಕದಿಂದ, ಈ ಮಹಿಳೆಯರು ಕ್ಯಾನ್ಸರ್ ಹಾಗೂ ನರಗಳ ದೌರ್ಬಲ್ಯದಿಂದ ನರಳುವ ಸಾಧ್ಯತೆಯಿದ್ದರೂ, ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳು, ಕರ್ನಾಟಕದ ಕೃಷಿ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದರಿಂದ, ಗ್ರಾಮೀಣ ಪ್ರದೇಶದ ಮಹಿಳೆಯರ ಸ್ಥಿತಿಯು ಶೋಚನೀಯ ಹಂತವನ್ನು ತಲುಪುತ್ತಿದೆ. ಮೂಲಭೂತ ಸೌಲಭ್ಯಗಳಿಂದ ಮಹಿಳೆಯರು ವಂಚಿತ ರಾಗುತ್ತಿದ್ದಾರೆ. ಆಸ್ಪತ್ರೆಯ ಕೊರತೆ, ಅನಕ್ಷರತೆ, ಬಡತನ, ಪೌಷ್ಟಿಕಾಂಶದ ಕೊರತೆ, ಪುರುಷಾಧಿಪತ್ಯದ ಹಿಡಿತ ಮುಂತಾದವುಗಳಿಂದ ಸ್ತ್ರೀಯರ ಸ್ಥಿತಿ ದಯನೀಯವಾಗಿದೆ. ಸ್ವತಂತ್ರ ಬಂದು ನಮ್ಮ ದೇಶಕ್ಕೆ ಇಷ್ಟು ವರ್ಷಗಳಾದರೂ, ಪುರುಷರ ಹಾಗೂ ಮಹಿಳೆಯರ ನಡುವೆ ಸಮಾನವೇತನವನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಕೂಲಿ ಎಂಬುದನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ. ಈ ಅಸಮಾತೆಯನ್ನು ತೊಡೆದು ಹಾಕಲು ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಕಾನೂನುಗಳು ಕೇವಲ ಪುಸ್ತಕದಲ್ಲಿ ದೂಳಿಡಿಯುತ್ತಿವೆ. ಆದರೆ, ಬಹುರಾಷ್ಟ್ರೀಯ ಕಂಪನಿಗಳನ್ನು ನಮ್ಮ ದೇಶಕ್ಕೆ ಆಹ್ವಾನಿಸುವಾಗ, ಅವುಗಳಿಗೆ ಬೇಕಾದ ಸೌಲಭ್ಯಗಳನ್ನು ಮುಕ್ತವಾಗಿ ಮಾಡಿಕೊಡುತ್ತಿರುವುದು ಸರ್ಕಾರದ ಹಿತಾಸಕ್ತಿ ಯನ್ನು ಎತ್ತಿತೋರಿಸುತ್ತಿದೆ. ಗ್ರಾಮೀಣ ಜನರ ಹಿತಾಸಕ್ತಿ ಯನ್ನು ಕಾಪಾಡುವುದಕ್ಕಿಂತ ಮುಖ್ಯವಾಗಿ ಸರ್ಕಾರ, ವಿದೇಶಿ ಕಂಪನಿಗಳ ಜೊತೆ ಶಾಮೀಲಾಗುತ್ತಿವೆ.

ಕೈಗಾರಿಕೆ ಹಾಗೂ ಮಹಿಳೆ

ಜಾಗತೀಕರಣದ ದಾಳಿಗೆ ತುತ್ತಾಗುತ್ತಿರುವ ಇನ್ನೊಂದು ಮಹತ್ತರ ಕ್ಷೇತ್ರ ಕೈಗಾರಿಕಾ ಕ್ಷೇತ್ರ. ಮುಕ್ತ ಆರ್ಥಿಕ ನೀತಿ, ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದಾಗಿ, ದೊಡ್ಡ ದೊಡ್ಡ ಸಾರ್ವಜನಿಕ ಕೈಗಾರಿಕೆಗಳು ಮುಚ್ಚುತ್ತಿರುವುದು ಆಘಾತಕಾರಿ ಅಂಶ. ಎನ್.ಜಿ.ಎಫ್. ನಂತಹ ಭಾರಿ ಉದ್ಯಮದೊಂದಿಗೆ ಐದು ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಮುಚ್ಚುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಸರ್ಕಾರ ಸ್ವಯಂ ನಿವೃತ್ತಿ ಯೋಜನೆಯನ್ನು ಕಡ್ಡಾಯವಾಗಿ ಹೇರುತ್ತಿದೆ. ಸಣ್ಣ ಕೈಗಾರಿಕೆಗಳು ಜಗತ್ತಿನ ಬಹುರಾಷ್ಟ್ರೀಯ ಕಂಪನಿಯೊಂದಿಗೆ ತನ್ನ ವಸ್ತುಗಳನ್ನು ಮಾರಾಟ ಮಾಡಲು ಪೈಪೋಟಿ ನಡೆಸಬೇಕಾಗಿದೆ. ಪೈಪೋಟಿ ನಡೆಸಲಾಗದ ಸಣ್ಣ ಕೈಗಾರಿಕೆಗಳು ಮುಚ್ಚುತ್ತಿವೆ. ರಾಜ್ಯದಲ್ಲಿನ 2.56 ದಶಲಕ್ಷ ಸಣ್ಣ ಕೈಗಾರಿಕೆಗಳಲ್ಲಿ 30% ಸಣ್ಣ ಕೈಗಾರಿಕೆಗಳು ಮುಚ್ಚಿವೆ.

ಒಟ್ಟು ದುಡಿಯುವ ಮಹಿಳೆಯರಲ್ಲಿ ಶೇ. 95ರಷ್ಟು ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಜಾಗತೀಕರಣದ ಬಿರುಗಾಳಿಗೆ ಮುಚ್ಚುವ ಕಾರ್ಖಾನೆಗಳಿಂದಾಗಿ, ಅಸಂಖ್ಯಾತ ಅಸಂಘಟಿತ ಮಹಿಳಾ ಕಾರ್ಮಿಕರು ಕೆಲಸ ಕಳೆದುಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ.

ಖಾಸಗಿಯವರು ಹೆಚ್ಚು ಲಾಭವನ್ನು ಪಡೆಯಬೇಕೆಂದರೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲೇಬೇಕಾಗುತ್ತದೆ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಅನುಸರಿಸುವ ಮುಖ್ಯ ವಿಧಾನವೆಂದರೆ 'ಅಗ್ಗದ ಶ್ರಮ'. ಅಗ್ಗದ ಶ್ರಮವೆಂದರೆ ಅನಕ್ಷರಸ್ಥ ಮಹಿಳೆಯರು ಹಾಗೂ ಮಕ್ಕಳು. ಹಾಗಾಗಿ ಜಾಗತೀಕರಣದ ನೇರ ಪರಿಣಾಮಕ್ಕೊಳಗಾಗುವವರು ಮಹಿಳೆಯರು. ದುಡಿಯುವ ಸ್ತ್ರೀಯರ ಅಗ್ಗದ ಶ್ರಮಶಕ್ತಿಯನ್ನು ಮುಕ್ತ ಮಾರುಕಟ್ಟೆಯು ಶೋಷಿಸುತ್ತದೆ. ಜಾಗತೀಕರಣಗೊಂಡ ಆರ್ಥಿಕ ನೀತಿಯಿಂದಾಗಿ ಯಾವುದೇ ರೀತಿಯ ನಿರ್ಬಂಧನೆ, ನಿರ್ಬಂಧ, ನಿಯಂತ್ರಣಗಳನ್ನು ಹೇರಲು ಸರ್ಕಾರಗಳು ವಿಫಲವಾಗುತ್ತಿವೆ. ಮಹಿಳೆಯರ ಅಗ್ಗದ ದುಡಿಮೆ ಬಹುರಾಷ್ಟ್ರೀಯ, ಖಾಸಗೀ ಕಂಪನಿಗಳ ನಿವ್ವಳ ಲಾಭವಾಗಿ ಪರಿವರ್ತನೆ ಹೊಂದುತ್ತದೆ. ಇದು ಬೇರೆ ದೇಶದ ವಿಶೇಷವಾಗಿ ಶ್ರೀಮಂತ ರಾಷ್ಟ್ರಗಳ ಬಂಡವಾಳವಾಗಿ ಪರಿವರ್ತಿತವಾಗುತ್ತದೆ. ಅನಕ್ಷರಸ್ಥರಾದ, ಹೆಚ್ಚು ವಿದ್ಯಾಭ್ಯಾಸ ಮಾಡಲಾಗದ ಮಹಿಳೆಯರ ಮುಂದಿರುವ ಉದ್ಯೋಗದ ಆಯ್ಕೆ, ಸಣ್ಣ ಕೈಗಾರಿಕೆಗಳು. ಅವು ನೀಡುವ ತಾತ್ಕಾಲಿಕ ಉದ್ಯೋಗಗಳನ್ನು ಅವರು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅವರಿಗೆ ಯಾವುದೇ ರೀತಿಯ ಭದ್ರತೆಯನ್ನು ನೀಡಲಾಗುವುದಿಲ್ಲ. ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರಿಗೆ ಹೆಚ್ಚಿನ ಉದ್ಯೋಗ ಅವಕಾಶವಿದೆಯೆಂಬ ವಾದವನ್ನು ಮುಂದಿಡಲಾಗುತ್ತಿದೆ. ಈ ಕುಟಿಲ ನೀತಿಯ ಹಿಂದಿರುವ ಉದ್ದೇಶವನ್ನು ನಾವು ಗಮನಿಸಬೇಕಾಗುತ್ತದೆ. ಅವರ ಶ್ರಮ ಅಗ್ಗದ ಶ್ರಮ. ಪುರುಷರಿಗೆ ಹೋಲಿಸಿದರೆ ಅವರು ಮೃದು ಸ್ವಭಾವದವರು ಯೂನಿಯನ್ ಮೊದಲಾದ ಚಟುವಟಿಕೆಯಲ್ಲಿ ಅವರು ಭಾಗವಹಿಸುವುದಿಲ್ಲ. ಕೌಟುಂಬಿಕ ಜವಾಬ್ದಾರಿಗಳು ಹಾಗೂ ಒತ್ತಡಗಳು ಅವರನ್ನು

ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸದಂತೆ, ದೂರವಿಡುತ್ತದೆ. ಇದರಿಂದಾಗಿ ಆಡಳಿತ ವರ್ಗಕ್ಕೆ ಪೂರಕವಾದ ಸನ್ನಿವೇಷ ಸೃಷ್ಟಿಯಾಗುತ್ತದೆ. ರಫ್ತು ಮಾಡುವ ಕೈಗಾರಿಕೆಗಳಲ್ಲಿ ಮದುವೆಯಾಗಿರುವ ಮಹಿಳೆಯರಿಗೆ ಕೆಲಸ ಸಿಗುವುದು ದುಸ್ತರವಾಗುತ್ತಿದೆ. ಕೆಲಸಕ್ಕೆ ಸೇರುವ ಮೊದಲೇ ಆಕೆ ಅದನ್ನು ದೃಢಪಡಿಸಬೇಕಾಗುತ್ತದೆ. ಒಂದು ಪಕ್ಷ ಮೊದಲೇ ಮದುವೆಯಾಗಿದ್ದರೆ ಆಕೆ ಕಡ್ಡಾಯವಾಗಿ ಜನನ ನಿಯಂತ್ರಣ ಕ್ರಮವನ್ನು ಅನುಸರಿಸಬೇಕಾಗುತ್ತದೆ.

ವಿದೇಶಿ ಕಂಪನಿಗಳಿಗೆ ನೀಡುವ ವಿಶೇಷ ರಿಯಾಯತಿಗಳಿಂದಾಗಿ ಕಾರ್ಮಿಕ ವರ್ಗದ ಮಹಿಳೆಯರಿಗೆ ಯಾವುದೇ ರಕ್ಷಣೆ ಇಲ್ಲದೆ ಹೋಗುತ್ತದೆ. ಖಾಯಂ ಕೆಲಸವೆಂಬುದೇ ಇವರ ಪಾಲಿಗಿಲ್ಲ. ದಿನಗೂಲಿ ಆಧಾರಿತ ವೇತನವನ್ನು ಇವರು ಪಡೆಯಬೇಕಾಗುತ್ತದೆ. ಆಡಳಿತ ವರ್ಗದ ಮರ್ಜಿಗೆ ಒಳಗಾಗಿ ದುಡಿಯಬೇಕಾಗುತ್ತದೆ. ಕೆಲಸವಿಲ್ಲವೆಂದು ತೆಗೆದು ಹಾಕಿದಾಗ ಪ್ರತಿಭಟನೆಯಿಲ್ಲದೆ ಹೊರ ಬರಬೇಕಾಗುತ್ತದೆ. ಇನ್ನೂ ಅಗ್ಗದ ವೇತನದ ಕೆಲಸವನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇಂತಹ ಕೈಗಾರಿಕೆಗಳಲ್ಲಿ ದುಡಿಯುವ ಅನಕ್ಷರಸ್ಥ ಹೆಣ್ಣು ಮಕ್ಕಳಿಗೆ ಯಾವುದೇ ರೀತಿಯ ರಕ್ಷಣೆ ಇರುವುದಿಲ್ಲ. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಬಾಲಕಿಯರ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಾ ಹೋಗುತ್ತಿದೆ. 15 ರಿಂದ 25 ವರ್ಷ ವಯಸ್ಸಿ ಹೆಣ್ಣುಮಕ್ಕಳು ಇಂತಹ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದುಡಿಯುತ್ತಿದ್ದಾರೆ. ಎಲೆಕ್ಟ್ರಾನಿಕ್ಸ್ ನಂತಹ ಉದ್ಯಮದಲ್ಲಿ ಇವರು 15 ರಿಂದ 18 ಗಂಟೆಗಳ ಕಾಲ ದುಡಿಯುತ್ತಿದ್ದಾರೆ. ಏಕಾಗ್ರತೆಯಿಂದ ದುಡಿಯಬೇಕಾದ ಇಂತಹ ಹೆಣ್ಣುಮಕ್ಕಳು ತಮ್ಮ ಕಣ್ಣಿನ ದೃಷ್ಟಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಸಣ್ಣ ಕೈಗಾರಿಕೆಗಳು ಮುಚ್ಚಿದಾಗ, ಅಥವಾ ಕಾರ್ಮಿಕರ ಸಂಖ್ಯೆ ಹೆಚ್ಚಾದಾಗ, ಸಮಸ್ಯೆಯನ್ನು ಎದುರಿಸುವವರು ಮಹಿಳೆಯರು ಹಾಗಾಗಿ ಹೆಣ್ಣುಮಕ್ಕಳಲ್ಲಿ ನಿರುದ್ಯೋಗದ ಸಮಸ್ಯೆಯೂ ತೀವ್ರವಾಗಿ ಹೆಚ್ಚುತ್ತಿದೆ. ಅವರು ಮನೆಯ ಕೆಲಸದ ಹೊರೆಯೊಂದಿಗೆ ಮನೆಯ ನಾಲ್ಕು ಗೋಡೆಯ ಸೀಮಿತ ಪರಿಧಿಯಲ್ಲಿ ಉತ್ಪಾದನೆಗೆ ತೊಡಗುವುದು ಅನಿವಾರ್ಯವಾಗಿದೆ. ಹೆಚ್ಚು ಹೆಚ್ಚು ಮಹಿಳೆಯರು ಮನೆಯಲ್ಲಿದ್ದೆ, ಉತ್ಪಾದನೆ ಮಾಡುವ ಕೆಲಸಗಳಿಗೆ ಮೊರೆ ಹೋಗುವುದು ಅನಿವಾರ್ಯವಾಗುತ್ತಿದೆ. ಬಿಡಿಭಾಗಗಳನ್ನು ಮನೆಗೆ ತಂದು ಜೋಡಿಸುವುದು, ಮನೆಗೆ ಹಪ್ಪಳದ ಹಿಟ್ಟು ತಂದು ಹೊಸೆಯುವುದು, ಅಗರಬತ್ತಿ ಮುಂತಾದ ಕೆಲಸಗಳನ್ನು ಮಹಿಳೆಯರು ಮಾಡಬೇಕಾಗುತ್ತದೆ. ಈ ಉತ್ಪಾದನಾ ಕೆಲಸಗಳು ಕೌಟುಂಬಿಕ ವಲಯದಲ್ಲಿ ಬರುವುದರಿಂದ, ಪುರುಷ, ಸ್ತ್ರೀಯರ ಉತ್ಪಾದನೆಗೆ, ಅವರ ಶ್ರಮಕ್ಕೆ ಬೆಲೆ ನೀಡುವುದಿಲ್ಲ. ಆಕೆಯ ಉತ್ಪಾದನೆಯ ಕೆಲಸ ಮನೆಗೆಲಸದ ಭಾಗವಾಗುವುದರಿಂದ ಆಕೆಯ ಮೇಲಿನ ಹೊರೆ ಹೆಚ್ಚುತ್ತಾ ಹೋಗುತ್ತದೆ. ಆಕೆಯ ದುಡಿಮೆ ಉತ್ಪಾದನೆಯ ವ್ಯಾಖ್ಯಾನದಲ್ಲಿ ಬರುವುದೇ ಇಲ್ಲ. ಆಕೆ ಪಿತೃಪ್ರಧಾನತೆಯ ಎಲ್ಲ ಸಂಕೋಲೆಗಳಿಂದ ಬಂಧಿತಳಾಗುತ್ತಾಳೆ. ಮನೆಗೆಲಸ ಮಕ್ಕಳ ಪಾಲನೆ ಪೋಷಣೆಯ ಜೊತೆ ಜೊತೆಯಲ್ಲಿಯೇ ಆದಾಯ ತರುವ ಕೆಲಸವನ್ನು ಆಕೆ ಮಾಡುತ್ತಿದ್ದರೂ ಆಕೆಯ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯನ್ನು ನೋಡಲಾಗುವುದಿಲ್ಲ. ಬದಲಾಗಿ ಆಕೆಯ ಮೇಲೆ ಮತ್ತಷ್ಟು ಹೊರೆಯನ್ನು ಹೊರಿಸಿರುವುದನ್ನು ನೋಡಬಹುದು. ಗೃಹ ಆಧಾರಿತ ಉತ್ಪಾದನಾ ಕೆಲಸಗಳು ಮೇಲುನೋಟಕ್ಕೆ ತತ್‌ತಕ್ಷಣಕ್ಕೆ ಪ್ರಯೋಜನಕಾರಿಯಾದ ಉತ್ಪಾದನಾ ಪ್ರಕ್ರಿಯೆ ಎಂದು ಕಂಡುಬರುತ್ತಿದೆ. ಸ್ತ್ರೀಯರ ಶ್ರಮ ಕಣ್ಣಿಗೆ ಕಾಣಿಸದೆ, ನಾಲ್ಕು ಗೋಡೆಗೆ ಸೀಮಿತವಾಗುವುದರಿಂದ ಅಗೋಚರವಾಗುತ್ತದೆ. ಸ್ತ್ರೀಯರು ತಮ್ಮ ಹಕ್ಕುಗಳಿಗಾಗಿ ಸಂಘಟನೆಯಾಗಲು ಸಾಧ್ಯವಾಗುವುದಿಲ್ಲ. ಈ ಸ್ವರೂಪದ ಕೆಲಸದಿಂದ ಮಹಿಳೆಯರಿಗೆ ಮನೆಗೆಲಸ, ಕುಟುಂಬಕ್ಕೆ ಹೆಚ್ಚು ಸಮಯವನ್ನು ನೀಡಲು ಸಾಧ್ಯವಾಗುತ್ತಿದೆಯೆಂಬ ವಾದವನ್ನು ಮುಂದಿಡಲಾಗುತ್ತಿದೆ. ಆಧರೆ, ಇದು ಸ್ತ್ರೀಯರ ಹೊರೆಯನ್ನು ದ್ವಿಗುಣ ಮಾಡುವುದಲ್ಲದೆ, ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುತ್ತದೆ. ಅವರ ಸಂಪ್ರದಾಯಿಕ ಪಾತ್ರವನ್ನು ಬಲಗೊಳಿಸುತ್ತದೆ. ಉದಾಹರಣೆಗೆ ಫಿಲಿಪೈನ್ಸ್‌ನಲ್ಲಿ ಆಹಾರವನ್ನು ಪೊಟ್ಟಣಗಳಲ್ಲಿ ಮಾರುವ, ಭಾರತದಲ್ಲಿ ಮನೆಯಲ್ಲಿಯೇ ಹೈನುಗಾರಿಕೆಯನ್ನು ಮಾಡುವ ಇವುಗಳನ್ನು ಸ್ತ್ರೀಯರ ಉದ್ಯಮಶೀಲತೆಯೆಂಬ ಹಣೆಪಟ್ಟಿಯನ್ನು ಹಚ್ಚಿ ಅತಿಶಯೋಕ್ತಿಯಿಂದ ವರ್ಣಿಸಲಾಗುತ್ತದೆ. ಆದರೆ ಇದು ನಿರುದ್ಯೋಗದ ಪ್ರಮಾಣ ಹಾಗೂ ಸ್ತ್ರೀಯರ ಸಂಪ್ರದಾಯಿಕ ಅಡುಗೆ ಮಾಡುವ ಪಾತ್ರವನ್ನು ಹೆಚ್ಚುಗಾರಿಕೆಯಿಂದ "ಅಭಿವೃದ್ಧಿಯೆಂಬ" ವ್ಯಾಖ್ಯಾನದ ಚೌಕಟ್ಟಿನಲ್ಲಿ ಕೂರಿಸಲಾಗಿದೆ.

75 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಬೀಡಿ ಉದ್ದಿಮೆಯಲ್ಲಿ ದುಡಿಯುತ್ತಿದ್ದಾರೆ. ಕೃಷಿ ಹಂತದಲ್ಲಿ, ಬೀಡಿ ಕಾರ್ಖಾನೆಗಳಲ್ಲಿ, ಮನೆಗಳಲ್ಲಿ, ವಿವಿಧ ಹಂತದಲ್ಲಿ ಬೀಡಿ ಉದ್ದಿಮೆಯಲ್ಲಿ ಕಾರ್ಮಿಕರು ತೊಡಗಿರುವುದು ಕಂಡುಬರುತ್ತದೆ. ಆದರೆ, ಈ ಬೃಹತ್ ಉದ್ಯಮದ ಹಡಗು ಇಂದು ಜಾಗತೀಕರಣದ ದಾಳಿಗೆ ತುತ್ತಾಗಿ ಮುಳುಗುತ್ತಿದೆ. ಈ ಉದ್ಯಮವನ್ನು ಅವಲಂಭಿಸಿರುವ ಬಹುಪಾಲು ಮಹಿಳೆಯರು ಇಂದು ಕೆಲಸ ಕಳೆದುಕೊಂಡು

ಬೀದಿಪಾಲಾಗುತ್ತಾರೆ. ನಮ್ಮ ದೇಶದ ತಂಬಾಕು ಕ್ಷೇತ್ರದಲ್ಲಿ ಇಂದು ಬಹುರಾಷ್ಟ್ರೀಯ ಕಂಪನಿಗಳು ಬಂಡವಾಳವನ್ನು ಹೂಡುತ್ತಿವೆ. ಇದರ ಜೊತೆಗೆ ಅಮೇರಿಕ ಭಾರತದಲ್ಲಿ ತಯಾರಾಗುವ ಬೀಡಿಗಳ ರಫ್ತಿಗೆ 'ಬಾಲಕಾರ್ಮಿಕರು' ತಯಾರಿಸುತ್ತಾರೆ ಎಂಬ ಕಾರಣಕ್ಕೆ ನಿಷೇಧವನ್ನು ಹೇರಿದೆ. ಈ ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳೆಯರು ಕೆಲಸ ಕಳೆದುಕೊಂಡು ನಿರುದ್ಯೋಗಿ ಗಳಾಗುವುದರ ಜೊತೆಯಲ್ಲಿ ಕುಟುಂಬಗಳು ಬೀದಿ ಪಾಲಾಗುತ್ತವೆ. ಮೂರನೇ ಜಗತ್ತಿನ ರಾಷ್ಟ್ರಗಳು ಮಾಡುವ ಸಾಲವನ್ನು ಆ ದೇಶದ ಜನಸಂಖ್ಯೆ ಯೊಂದಿಗೆ ತಳುಕು ಹಾಕಲಾಗುತ್ತದೆ. ಮೂರನೇ ಜಗತ್ತಿನ ರಾಷ್ಟ್ರಗಳ ಜನಸಂಖ್ಯೆಯನ್ನು ನಿಯಂತ್ರಿಸಲು ಮಹಿಳೆಯರನ್ನು ಬಲಿಪಶುಗಳನ್ನಾಗಿ ಮಾಡಿಕೊಳ್ಳಲಾಗುತ್ತದೆ. ಜನನ ನಿಯಂತ್ರಣ, ಕುಂಟುಬ ಕಲ್ಯಾಣದ ಹೆಸರಿನಲ್ಲಿ ಸ್ತ್ರೀಯರ ಮೇಲೆ ವಿವಿಧ ರೀತಿಯ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಮೊದಲ ದೇಶಗಳಲ್ಲಿ ನಿಷೇಧಗೊಂಡ ಔಷಧಿಗಳನ್ನು ಮೂರನೇ ಜಗತ್ತಿನ ಬಡಮಹಿಳೆಯರ ಮೇಲೆ ಹೇರಲಾಗುತ್ತಿದೆ. ಐಯುಡಿ ಇದಕ್ಕೆ ಒಂದು ಮುಖ್ಯ ಉದಾಹರಣೆ. ಬಹುರಾಷ್ಟ್ರೀಯ ಔಷಧಿ ಕಂಪನಿಗಳ ವಿವಿಧ ರೀತಿಯ ಪ್ರಯೋಗಕ್ಕೆ ನೇರವಾಗಿ ಬಡದೇಶದ ಮಹಿಳೆಯರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಜಾಗತೀಕರಣದ ಪ್ರಭಾವವನ್ನು ಮಹಿಳೆಯರ ಬದುಕಿನ ಎಲ್ಲಾ ಆಯಾಮದಲ್ಲೂ ನೋಡಬಹುದು. ಜಾಹೀರಾತು ಕಂಪನಿಗಳು ಸ್ತ್ರೀಯರನ್ನು ಭೋಗದ ವಸ್ತುವನ್ನಾಗಿ ಚಿತ್ರಿಸಿ ಮಾರಾಟ ಮಾಡುತ್ತಿವೆ. ವಾಣಿಜ್ಯ, ಗ್ರಾಹಕ ಸಂಸ್ಕೃತಿಗೆ ಸ್ತ್ರೀಯರು ಸಹ ಸರಕಾಗುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ವಸ್ತುವಿನ ಮಾರಾಟಕ್ಕಾಗಿ ವಿವಿಧ ರೀತಿಯ ವ್ಯಾಪಾರಿ ಗಿಮಕ್‌ಗಳನ್ನು ಬಳಸುತ್ತಾರೆ. ಈ ಗ್ರಾಹಕ ಸಂಸ್ಕೃತಿಯ ಪ್ರಮುಖ ಗಿರಾಕಿಗಳು ಮಧ್ಯಮ ವರ್ಗದ ಸ್ತ್ರೀಯರು. ಜನರಲ್ಲಿ ಇಲ್ಲದ ಅಗತ್ಯಗಳನ್ನು ಸೃಷ್ಟಿಸಲು ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗುತಿದೆ.

ಪೈಪೋಟಿ ಖಾಸಗೀಕರಣದ ಬೀಜತತ್ವ. ಆರ್ಥಿಕವಾಗಿ, ಸಾಮಾಜಿಕವಾಗಿ, ಅಜಗಜಾಂತರ ಮಟ್ಟದಲ್ಲಿ ಹಿಂದುಳಿದ ಮಹಿಳೆಯರು, ಹಿಂದುಳಿದ ವರ್ಗದ, ದಲಿತ ಜನಾಂಗದವರು ಈ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸ್ಪರ್ಧಿಸಲಾಗದೆ, ಎಲ್ಲಿರುವರೋ, ಅಲ್ಲೇ ಇರಬೇಕಾಗುತ್ತದೆ. ಈ ಅಸಮರ್ಥತೆ ಯಿಂದಾಗಿ, ಅವರಿಗೆ ಆಯ್ಕೆಯ ಪ್ರಶ್ನೆಯೇ ಬರುವುದಿಲ್ಲ.

ಜಾಗತೀಕರಣದ ಪ್ರಭಾವದಿಂದಾಗಿ ನಮ್ಮ ದೈನಂದಿನ ಜೀವನದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಆಯಾಮದಲ್ಲಿ ಬದಲಾವಣೆಯ ಆಯಾಮವನ್ನು ಕಾಣಬಹುದು ಎಂಬ ವಾದವನ್ನು ಮುಂದಿಡಲಾಗುತ್ತಿದೆ. ಈ ವಾದವನ್ನು ಮಹಿಳೆಯರ ಹಾಗೂ ಹಿಂದುಳಿದ ಜಾತಿ ಹಾಗೂ ವರ್ಗದವರ ಬದಲಾವಣೆಯ ವಿಚಾರದಲ್ಲಿ ಹೆಚ್ಚು ಒತ್ತಿಹೇಳಲಾಗುತ್ತಿದೆ. ಉದಾ: ಕುಟುಂಬಕ್ಕೆ ಮಹಿಳೆಯರು ತರುವ ಆದಾಯ ಅಗತ್ಯವಾದುದರಿಂದ ಮಹಿಳೆಯರು ದುಡಿಯುವುದು ಅನಿವಾರ್ಯವಾಗುತ್ತದೆ. ಇದನ್ನು ಮಹಿಳೆಯರಿಗೆ ದುಡಿಯುವ ಅವಕಾಶ ಲಭ್ಯವಾಗಿದೆಯೆಂದು ಸಹ ವ್ಯಾಖ್ಯಾನಿಸ ಬಹುದು. ಆದರೆ ನಿಜ ಅರ್ಥದಲ್ಲಿ ಇದು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನೀಡುವುದರ ಬದಲಾಗಿ ಅವರ ಮೇಲಿನ ಹೊರೆಯನ್ನು ದುಪ್ಪಟ್ಟುಗೊಳಿಸಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ತೊಡಗಿಸುವುದು ಒಂದು ಬೋಗಸ್ ಘೋಷಣೆಯಾಗಿದೆ. ರಾಷ್ಟ್ರೀಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸ್ತ್ರೀಯರನ್ನು ತಯಾರು ಮಾಡುವ ಪ್ರಕ್ರಿಯೆಯು ಬಹುರಾಷ್ಟ್ರೀಯ ಕಂಪನಿಯ ಹಾಗೂ ಸ್ಥಳೀಯ ಬಂಡವಾಳ ಶಾಹಿಗಳ ಹಿತಾಸಕ್ತಿಯನ್ನು ಕಾಯುವ ಉದ್ದೇಶ ಮಾತ್ರ ಆಗಿದೆ.

ಜಾಗತೀಕರಣ, ಮುಕ್ತ ಆರ್ಥಿಕ ನೀತಿ ಹಾಗೂ ಖಾಸಗೀಕರಣದಲ್ಲಿ ಸರ್ಕಾರದ ಪಾತ್ರ ಕಡಿಮೆಯಾಗುತ್ತಾ ಬರುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ, ದೊಡ್ಡ ದೊಡ್ಡ ಖಾಸಗೀ ಕಂಪನಿಗಳಿಗೆ ಸರ್ಕಾರಗಳು ಸಂಪೂರ್ಣವಾಗಿ ತಲೆಬಾಗುತ್ತಿವೆ. ಸರ್ಕಾರವನ್ನು ನಡೆಸುವ ಸೂತ್ರಧಾರರು ಇವರಾಗಿದ್ದಾರೆ. ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಬಹುಪಾಲು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಗೊಳಿಸುತ್ತಿರುವುದು, ನಷ್ಟದ ಹೆಸರಿನಲ್ಲಿ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಯವರಿಗೆ ವಹಿಸಿಕೊಡುತ್ತಿರು ವುದರಿಂದ, ದುರ್ಬಲ ವರ್ಗದವರ ಹಿತಾಸಕ್ತಿಯನ್ನು ರಕ್ಷಿಸುವ ಕಾರ್ಯಕ್ರಮಗಳನ್ನು ಕಡಿಮೆ ಮಾಡುವುದರ ಜೊತೆಯಲ್ಲಿ ಅವುಗಳ ನಿರ್ವಹಣೆಯನ್ನು ಖಾಸಗೀ ವಲಯದವರಿಗೆ ವಹಿಸಕೊಡುತ್ತಿರುವುದು ಕಂಡುಬರುತ್ತಿದೆ. ಸಮುದಾಯ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ನೀಡುವ ಅನುದಾನ, ರೈತರಿಗೆ ನೀಡುತ್ತಿದ್ದ ರಿಯಾಯತಿ, ಮುಂತಾದವುಗಳನ್ನು ಸಂಪೂರ್ಣವಾಗಿ ಕಡಿತಗೊಳಿಸಲಾಗಿದೆ. ಮೂಲಭೂತ ಸೌಲಭ್ಯಗಳಿಂದ ಬಡಮಹಿಳೆಯರು ವಂಚಿತರಾಗುತ್ತಿದ್ದಾರೆ.

ಸರ್ಕಾರ ತನ್ನ ನಿಯಂತ್ರಣವನ್ನು ಇಟ್ಟುಕೊಳ್ಳಬೇಕಾದ ಕ್ಷೇತ್ರದಿಂದ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ.

ದುರ್ಬಲವರ್ಗ ವಿಶೇಷವಾಗಿ ಮಹಿಳೆಯರನ್ನು ತಲುಪಬೇಕಾದ ಕ್ಷೇತ್ರದಿಂದ ಸಂಪೂರ್ಣವಾಗಿ ಹಿಂತೆಗೆಯುತ್ತಿದೆ. ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿ ಯೋಜನೆಯ ಹಲವಾರು ಕಾರ್ಯಕ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಿಕೊಡುವುದರ ಮೂಲಕ ಸರ್ಕಾರ ತಮ್ಮ ಅಸಮರ್ಥತೆಯನ್ನು ಪ್ರದರ್ಶಿಸುತ್ತಿದೆ. ಅಂಗನವಾಡಿಯನ್ನು ಶಾಸಗೀಕರಣಗೊಳಿಸುವ ಪ್ರಯತ್ನವನ್ನು ಸಹ ಮಾಡ ಲಾಗುತ್ತಿದೆ. ಗ್ರಾಮೀಣ ಜನತೆಗೆ ಸಾಮಾಜಿಕ ನ್ಯಾಯದ ಆಧಾರದ ಮೇಲೆ ನೀಡುತ್ತಿದ್ದ ಐ.ಆರ್.ಡಿ.ಪಿ. ಸಾಲ ಯೋಜನೆಯನ್ನು, ವ್ಯಕ್ತಿಗಳಿಗೆ ನೀಡುತ್ತಿದ್ದ ಸಾಲ ಸೌಲಭ್ಯದ ಯೋಜನೆಗಳನ್ನು, ಸರ್ಕಾರ ಈಗಾಗಲೇ ಸ್ಥಗಿತಗೊಳಿಸಿದೆ. ಡ್ವಾಕ್ರಾ ಯೋಜನೆ ಈಗ ಸಂಪೂರ್ಣವಾಗಿ ವಿಫಲವಾಗಿರುವುದು ಸಾಬೀತಾಗಿದೆ. ಡ್ವಾಕ್ರಾ ಗುಂಪುಗಳನ್ನು ಸ್ವಸಹಾಯ ಗುಂಪುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಸರ್ಕಾರದ ನಿಯಂತ್ರಣವಿಲ್ಲದ ಈ ಯೋಜನೆಯ ಜಾರಿಯಲ್ಲಿ ಸ್ಥಳೀಯ ರಾಜಕೀಯ ವ್ಯಕ್ತಿಗಳು, ಪಿತೃಪ್ರಧಾನ ಹಿತಾಸಕ್ತಿಗಳು ತೀವ್ರವಾಗಿ ಕೆಲಸ ಮಾಡುವುದರಿಂದ, ಪುರುಷರ ನಿಯಂತ್ರಣ ಹೊಂದುವ ಸಾಧ್ಯತೆಗಳು ಸೂಚನೆಗಳು ಕಂಡುಬರುತ್ತಿವೆ.

ಈ ಸ್ಥಳೀಯ ಶಕ್ತಿಗಳನ್ನು ಹಾಗೂ ಪಿತೃಪ್ರಧಾನ ನಾಯಕತ್ವವನ್ನು ಒಟ್ಟೊಟ್ಟಿಗೆ ಪ್ರಶ್ನೆ ಮಾಡುವುದು ಅಮಾಯಕ ಮುಗ್ಧ ಮಹಿಳೆಯರಿಗೆ ಸಂಕೀರ್ಣವಾದ ಸಂದಿಗ್ಧತೆ ಉಂಟುಮಾಡುತ್ತದೆ. ಆಕೆ ಸಹಜವಾಗಿ ಯಾರದೋ ಕೈಗೊಂಬೆಯಾಗುವುದು ಅನಿವಾರ್ಯವಾಗುತ್ತದೆ. ICDS ಕಾರ್ಯಕ್ರಮಗಳನ್ನು ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಿಕೊಡುತ್ತಿರುವುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

"ಅಮರ್ತ್ಯ ಸೇನ್‌ರವರ ಪ್ರಕಾರ ಅಭಿವೃದ್ಧಿಯೆಂದರೆ, ಆಹಾರ, ಆರೋಗ್ಯ, ಅಕ್ಷರ, ಇವು ಜನರಿಗೆ ದೊರೆಯಬೇಕು ಇದನ್ನು ಪಡೆಯುವ ಶಕ್ತಿ ಎಲ್ಲಾ ಜನರಿಗೆ ಇರಬೇಕು. ಅಭಿವೃದ್ಧಿ ಮಾನವ ಮುಖಿಯಾಗಿರಬೇಕು. ಜನಮುಖಿ, ಲಿಂಗಸಮಾನವೂ ಆದ ಈ ಅಭಿವೃದ್ಧಿಯ ಕಲ್ಪನೆಯು ವ್ಯಕ್ತಿವಾದಿಯೂ ಆಗಿರುತ್ತದೆ. ಇಲ್ಲಿ ಸರ್ಕಾರ ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗುತ್ತದೆ. ಅಕ್ಷರ, ಆರೋಗ್ಯ, ಆಹಾರವನ್ನು ಕೆಳವರ್ಗದ ಜನರಿಗೆ ತಲುಪಿಸುವಲ್ಲಿ ಸರ್ಕಾರದ ಪಾತ್ರ ಮಹತ್ವವಾದುದು."

ಆದರೆ ಜಾಗತೀಕರಣ ಸಮಷ್ಟಿಗಿಂತ ವ್ಯಕ್ತಿಗೆ ಪ್ರಾಧಾನ್ಯತೆ ನೀಡುತ್ತಿದೆ. ವ್ಯಕ್ತಿಯನ್ನು ಸಮುದಾಯದಿಂದ ಬೇರ್ಪಡಿಸುವ ಪ್ರಯತ್ನವನ್ನು ಜಾಗತೀಕರಣ ಮಾಡುತ್ತದೆ. ಜಾಗತೀಕರಣ ಮಹಿಳೆಯರ ಮೇಲೆ ಬೀರುವ ಪರಿಣಾಮವನ್ನು ಪ್ರಸ್ತುತ ಆರ್ಥಿಕ, ರಾಜಕೀಯ ಹಿನ್ನಲೆಯಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಪ್ರಸ್ತುತ ಸಾಮಾಜಿಕ ರಚನೆಯಲ್ಲಿ 'ಮಹಿಳಾ ಸಶಕ್ತತೆ'ಗೆ ಕರೆನೀಡುವುದು ಮಹಿಳೆಯರ ಮೇಲೆ ನೆಗೆಟೀವ್ ಆದ ಪರಿಣಾಮವನ್ನು ಬೀರುತ್ತದೆ. ನಿರ್ಣಯಗಳಲ್ಲಿ ಭಾಗವಹಿಸದಿರುವ, ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುವುದು ನಡೆಯುತ್ತಲೇ ಇದೆ. ಸ್ತ್ರೀಯರಿಗೆ ಅಧಿಕಾರ ಎಂದು ಹೇಳುತ್ತಲೇ ಅವರು ಅಧಿಕಾರ ಹೀನವಾಗಿ ಉಳಿಯುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಹಿಳಾ ಅಧ್ಯಯನ ಮಾಡಿದ ಮಹಿಳಾ ತಜ್ಞರನ್ನು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹೆಚ್ಚು ಸಂಬಳ ಹಾಗೂ ಸೌಲಭ್ಯಗಳನ್ನು ನೀಡಿ ಆಕರ್ಷಿಸಲಾಗುತ್ತದೆ. ಇವರನ್ನು ಮಹಿಳಾ ಜಾಗೃತಿ ಕಾರ್ಯಕ್ರಮದಲ್ಲಿ ತೊಡಗಿಸಿ ಕೊಳ್ಳಲಾಗಿದೆ. ಇವರು ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ಇದು ಕೇವಲ ತೇಪೆಹಾಕುವ ಕೆಲಸ. ಮೂಲಭೂತ ಪ್ರಶ್ನೆಯನ್ನು ಮರೆಮಾಡುತ್ತದೆ.

ಜಾಗತೀಕರಣದ ಪರಿಣಾಮ ಸಾಂಸ್ಕೃತಿಕ ರಂಗದ ಮೇಲೂ ಬೀರುತ್ತಿದೆ. ಹಿಂದುತ್ವ ಮಾದರಿಯ ಸಾಂಸ್ಕೃತಿಕ ಜಾಗತೀಕರಣ ಮಹಿಳೆಯರನ್ನು ಮತ್ತಷ್ಟು ಹಿಂದಕ್ಕೆ ತಳ್ಳುತ್ತಿದೆ. ಇದು ಒಂದು ನಿರ್ದಿಷ್ಟ ಮಾದರಿಯ ಪಾತ್ರವನ್ನೂ ಮಹಿಳೆಯರಿಂದ ನಿರೀಕ್ಷೆ ಮಾಡುತ್ತದೆ.

●

○ ರಾಜೇಶ್ವರಿ ಹೆಚ್.ಎಸ್.

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಜಾಗತೀಕರಣದ ಪರಿಣಾಮಗಳು

ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜಿಸ್‌ನಲ್ಲಿ CPI(M.L.) ಪಕ್ಷದವರು ದಿನಾಂಕ 7-01-2001ರಂದು ಜಾಗತೀಕರಣ ಕುರಿತು ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಮೇಲೆ ಜಾಗತೀಕರಣದಿಂದ ಆಗುತ್ತಿರುವ ಪರಿಣಾಮ ಹಾಗು ಅದನ್ನು ಹೇಗೆ ವಿರೋಧಿಸಬೇಕೆಂದನ್ನು ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದು ಅನುಭವವಿರುವ ಗಣ್ಯರು ಮಾತನಾಡಿದರು. ರೈತ ಸಂಘದ ಪುಟ್ಟಣ್ಣಯ್ಯನವರು ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಕಾರ್ಮಿಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನ್ಯಾಷನಲ್ ಲಾ ಸ್ಕೂಲಿನಲ್ಲಿ ರಿಜಿಸ್ಟ್ರಾರ್ ಆಗಿರುವ ಬಾಬು ಮ್ಯಾಥ್ಯೂಸ್ ಅವರು, ದಲಿತರು ಮತ್ತು ಜಾಗತೀಕರಣಕ್ಕೆ ಸಂಬಂಧಪಟ್ಟಂತೆ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಗಂಗಾಧರ ಮೂರ್ತಿಯವರೂ ಮಾತನಾಡಿದರು. ಜಾಗತೀಕರಣ ಕುರಿತಂತೆ ಕ್ರಿಯಾಶೀಲ ಪ್ರತಿಕ್ರಿಯೆಯನ್ನು ಸಮಾಜವಾದಿ ಚಳುವಳಿಯ ಗೋಪಾಲಕೃಷ್ಣ ಅವರು ನೀಡಿದರು. CPI (ML)ನ ಕೇಂದ್ರ ಸಮಿತಿ ಸದಸ್ಯ ಶಂಕರ್ ಅವರು ರಾಜಕೀಯ ಪ್ರತಿಕ್ರಿಯೆ ನೀಡಿದರು. ಆ ಸಭೆಯ ವರದಿಯನ್ನು, ಮುಂದೆ ಶ್ರೀ ಪುಟ್ಟಣ್ಣಯ್ಯನವರನ್ನು ಮಾನಸದವರು ಭೇಟಿಯಾಗಿ ಮಾತನಾಡಿದ್ದನ್ನು ಒಟ್ಟಾಗಿ ಸಂಗ್ರಹಿಸಿ ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.

ಜಾಗತೀಕರಣ ಮತ್ತು ರೈತರು

ಕರ್ನಾಟಕ ರಾಜ್ಯ ರೈತಸಂಘದ ಪುಟ್ಟಣ್ಣಯ್ಯನವರು, ಜಾಗತೀಕರಣ ಹೇಗೆ ರೈತರ ಬದುಕನ್ನು ನಾಶಮಾಡುತ್ತಿದೆ ಎಂಬುದನ್ನು ಕುರಿತು ಮಾತನಾಡಿದರು.

ಜಾಗತೀಕರಣ ಏಡ್ಸ್‌ರೋಗವಿದ್ದಂತೆ. ಒಂದು ಕ್ಷೇತ್ರವನ್ನೂ ಬಿಡದೆ ಎಲ್ಲ ಕ್ಷೇತ್ರಗಳಿಗೂ ಹಬ್ಬತೊಡಗಿದೆ. ರೈತರು ಅದರ ಪರಿಣಾಮಕ್ಕೆ ಬಲಿಯಾಗುತ್ತಿದ್ದಾರೆ. ಬೇಸಾಯವೆಂದರೆ ದೇಶದ ಆಹಾರ ಭದ್ರತೆ ಎಂದರ್ಥ. ಜನರು ಆರೋಗ್ಯವಾಗಿದ್ದರೆ ದುಡಿಯಲು ಸಾಧ್ಯ. ದೇಹದ ಆರೋಗ್ಯಕ್ಕೆ ನಾವು ತಿನ್ನುವ ಆಹಾರ ತುಂಬಾ ಮುಖ್ಯ. ಅಪೌಷ್ಟಿಕತೆಯಿಂದ ಅನಾರೋಗ್ಯ ಉಂಟಾಗುತ್ತೆ. ಜಾಗತೀಕರಣ ಶಿಸ್ತನ್ನು ಮೀರಿ ಪರಿಣಾಮ ಬೀರುತ್ತಿದೆ. ಇದು ನಮ್ಮ ಪಾರ್ಲಿಮೆಂಟ್‌ಗಾಗಲಿ, ಶಾಸನ ಸಭೆಗಳಿಗಾಗಲಿ ಅರಿವಾಗುತ್ತಿಲ್ಲ. ಹೊಸ ಆರ್ಥಿಕ ನೀತಿ ಜಾರಿಗೊಳಿಸಿದ ಪಿ.ವಿ. ನರಸಿಂಹರಾವ್ ಅವರು ಈ ದೇಶದ ಅತ್ಯಂತ ಕರಾಳ ಪ್ರಧಾನಮಂತ್ರಿ ಎನ್ನಬಹುದು. ವೈಜ್ಞಾನಿಕ ಕೃಷಿ ನೀತಿ ಇಲ್ಲದೆ ರೈತರು ಸಾಯುವ ಪರಿಸ್ಥಿತಿ ಬಂದಿದೆ. ವೈಜ್ಞಾನಿಕ ಕೃಷಿನೀತಿ ಎಂದರೆ ವೈಜ್ಞಾನಿಕ ಬೆಲೆನೀತಿ, ವೈಜ್ಞಾನಿಕ ಬೇಸಾಯ ನೀತಿ ಎಂದು. ಸರಿಯಾದ ಬೆಲೆ ನೀತಿಯೇ ನಮ್ಮಲ್ಲಿ ಇಲ್ಲ. ಉದಾಹರಣೆಗೆ ಕಾಫಿ ಬೆಳೆಗಾರರು, ಕಾರ್ಮಿಕರನ್ನೆ ತೆಗೆದುಕೊಳ್ಳಬಹುದು. ಚೆರಿ (ಉಂಡೆ) ಎಂಬ ಕಾಫಿಯ ಬೆಲೆ ರೂ. 3,000 ದಿಂದ ರೂ. 750/- ಕ್ಕೆ ಇಳಿಯಿತು. ಬೇಳೆ ಕಾಫಿ ಬೆಲೆ 5,000 ದಿಂದ 7,000/- ರೂ ವರೆಗೆ ಇದ್ದದ್ದು 2,000/- ಸಾವಿರಕ್ಕೆ ಕುಸಿಯಿತು. ಕಾರ್ಮಿಕರ ಕೂಲಿ 75,100 ರೂ. ಇದ್ದದ್ದು 30, 40ಕ್ಕೆ ಬಂತು. ಒಂದು ನಿರ್ದಿಷ್ಟ ಬೆಲೆ ನೀತಿ ಇಲ್ಲದೆ ಕಾಫಿ ಬೆಳೆಗಾರರು, ಕಾರ್ಮಿಕರು ನಾಶವಾಗುತ್ತಿದ್ದಾರೆ.

ಪುಟ್ಟಣ್ಣಯ್ಯ

ಜೋಳ ನಮ್ಮ ರಾಜ್ಯದ ಪ್ರಮುಖ ಬೆಳೆ. ಮುಸುಕಿನ ಜೋಳದಿಂದ ಬಣ್ಣ ತಯಾರಿಸಬಹುದು. ಬಿಯರ್, ರವೆ ತಯಾರಿಸಬಹುದು. ಆದರೂ ಜೋಳಕ್ಕೆ ಒಳ್ಳೆ ಬೆಲೆ ಇಲ್ಲ. ತೆಂಗಿನ ಮರಕ್ಕೆ ನುಸಿರೋಗ ಬಂತು. ಈ ನುಸಿಗಳನ್ನು ನಾಶ ಮಾಡಬೇಕು ಅಂದ್ರೆ, ಪಲ್ಸ್ ಪೋಲಿಯೊ ಹಾಕಿಸೊಕೆ ಮಾಡ್ತಾ ಇರುವಂತಹ ಪ್ರಯತ್ನ ಮಾಡಬೇಕು. ತೆಂಗು ಮಳೆ ಆಧಾರಿತ ಬೆಳೆ. ನಮ್ಮಲ್ಲಿ 50 ಲಕ್ಷ ಎಕರೆ ಪಂಪ್‌ಸೆಟ್ ಆಧಾರಿತ. 1¼ ಕೋಟಿ ಎಕರೆ ಮಳೆ ಆಧಾರಿತ. ನಮ್ಮ ರಾಜ್ಯದಲ್ಲಿ ಮಲೇಸಿಯಾದಿಂದ ತೆಂಗನ್ನು ಆಮದು ಮಾಡಿಕೊಂಡು 10 ರೂ.ಗೆ 3-4 ಕಾಯಿಯಂತೆ ಮಾರಲಾಯಿತು. ಇದರಿಂದ ಹೊಡೆತ ಬಿದ್ದದ್ದು ತೆಂಗಿನ ಬೆಳೆಗಾರರಿಗೆ. ಪೆಪ್ಸಿಕೋಲಾ, ಕೋಕೋಕೋಲಗಳೆಲ್ಲ ಸ್ಟೇಟಸ್‌ಕೋಲಾಗಳಿದ್ದಂತೆ. ಇವು ಬಂದು ಎಳನೀರಿಗೆ ಬೆಲೆ ಇಲ್ಲದಂತೆ ಆಗಿದೆ. ಸಚಿನ್ ತೆಂಡೋಲ್ಕರ್ ಅಡ್ವರ್ಟೈಸ್‌ಮೆಂಟ್‌ನಲ್ಲಿ ಕುಡಿತಾನೆ ಅಂತ ಎಲ್ರೂ ಕುಡಿತಾರೆ. ಸಚಿನ್ ಕ್ಯಾಮರ ಮುಂದೆ ಪೆಪ್ಸಿ ಬಾಟಲ್ ಹಿಡ್ಕೋತಾನೆ ಹೊರ್ತು

ನಿಜವಾಗ್ಲು ಕುಡಿಯೋಲ್ಲ ಬರಿ ಪೆಪ್ಸಿ ಕುಡುದ್ರೆ ಅವನಿಗೆ ಕ್ರಿಕೆಟ್ ಆಡೋಕೆ ಆಗಲ್ಲ. ಸಚಿನ್ ಕೂಡ ಆಟ ಉದ್ಧಾರ ಮಾಡೋಲ್ಲ, ಕೋಕೋಕೋಲಾ ಮಾರ್ಕೆಟಿಂಗ್ ಉದ್ಧಾರ ಮಾಡ್ತಾನೆ ಅಷ್ಟೇ.

ಬೆಲೆ ನೀತಿ ಎಷ್ಟು ಅಧ್ವಾನವಾಗಿದೆ ಅಂದ್ರೆ ನಮ್ಮಲ್ಲಿ ಒಂದು ಜೊತೆ ಶೂಸ್ ಬೆಲೆ 3,000/- ರೂ. ಇರುತ್ತೆ. 10 ಕ್ವಿಂಟಾಲ್ ರಾಗಿ ಬೆಲೆ ಇವತ್ತು 2 ಜೊತೆ ಶೂ ಬೆಲೆಗೆ ಸಮ. ಇವತ್ತು ಕೆಂಪುಕಾಡ್, ಹಸಿರುಕಾರ್ಡ್ ಇಲ್ಲದೆ ಸುಖವಾಗಿ ಉಣ್ತಾ ಇರೋವು ಅಂದ್ರೆ ಇಲ್ಲಿಗಳು. ಕಾಳುಗಳನ್ನು ಬೆಳೆಯೋ ರೈತರಿಗೆ 1,500/- ರೂ. ಸಿಗುತ್ತೆ ಅದೇ ಕಾಳು ನಮ್ಮನ್ನ ತಲುಪೋ ವೇಳೆಗೆ 3,000/- ರೂ. ಆಗುತ್ತೆ. ಇದಕ್ಕೆಲ್ಲ ಮುಖ್ಯ ಕಾರಣ ಅಂದ್ರೆ ಕೇಂದ್ರ ಸರಕಾರ ಇನ್ನೂ ಒಂದು ಒಳ್ಳೆಯ, ವೈಜ್ಞಾನಿಕ ಬೆಲೆ ನೀತಿಯನ್ನು ಮಾಡದೆ ಇರುವುದು. ಕೃಷಿ ಬಂಡವಾಳವನ್ನು ಕುರಿತಂತೆ ಯಾವ ಆರ್ಥಿಕ ತಜ್ಞರು ಬರೆದಿಲ್ಲ. ಕೃಷಿಕ್ಷೇತ್ರ ಅಂದ್ರೆ ಗುಲಾಮಗಿರಿ ಕ್ಷೇತ್ರವಾಗಿದೆ. ನಮ್ಮ ದೇಶದಲ್ಲಿ ದೈಹಿಕ ಶ್ರಮ ಅಂದ್ರೆ ಗುಲಾಮಗಿರಿ ಸಂಕೇತವಾಗಿದೆ. ದೈಹಿಕ ಶ್ರಮಕ್ಕೆ ಬೆಲೆ ಇಲ್ಲ. ದೈಹಿಕ ಶ್ರಮವೂ ಜ್ಞಾನವೇ. ವ್ಯವಸಾಯ ಮಾಡುವವರಿಗೆ ನಿರ್ದಿಷ್ಟ ಕೂಲಿ, ಉಚಿತ ವೈದ್ಯಕೀಯ ಸೇವೆ, 58 ವಯಸ್ಸಿನ ನಂತರ ನಿವೃತ್ತಿ ವೇತನ ಇವೆಲ್ಲವನ್ನು ವೈಜ್ಞಾನಿಕ ಕೃಷಿ ನೀತಿ ಒಳಗೊಳ್ಳಬೇಕು. ಉತ್ಪಾದನಾ ವೆಚ್ಚವನ್ನು ಆಧರಿಸಿ ಬೆಲೆ ನಿಗದಿಯಾಗಬೇಕು. ಈಗಿರುವ ಬೆಂಬಲ ಬೆಲೆ ವೈಜ್ಞಾನಿಕ ಬೆಲೆ ಅಲ್ಲ. ಬೆಂಬಲ ಬೆಲೆ ಅಳುವ ಮಕ್ಕಳಿಗೆ ನೀಡುವ ಪೆಪ್ಪರ್‌ಮೆಂಟಿನಂತೆ.

ಉತ್ಪಾದನ ವೆಚ್ಚ ಬೇರೆ ಕೃಷಿ ಬಂಡವಾಳವೇ ಬೇರೆ. ಸಮರ್ಪಕವಾದ ಕೃಷಿ ಬಂಡವಾಳ ಕುರಿತು ನಿಖರವಾಗಿ ಯಾರೂ ಬರೆದಿಲ್ಲ. ವ್ಯವಸಾಯದಲ್ಲಿ ಬಳಸುವ ಉಪಕರಣಗಳು, ಎತ್ತು, ದನಗಳಿಗೆ ಉಪಯೋಗಿಸುವ ಹಗ್ಗ ಮೂಗುದಾರ, ಮೇಯಿಸುವುದು - ಇದೆಲ್ಲವನ್ನು ಕೃಷಿ ಬಂಡವಾಳದಲ್ಲಿ ಸೇರಿಸಿಲ್ಲ. ಇವತ್ತು ಕರ್ನಾಟಕದಲ್ಲಿ ದನಗಳಿಗೆ ಹಾಕಿರುವ ಒಟ್ಟು ಬಂಡವಾಳ 1 ಲಕ್ಷ 10 ಸಾವಿರ ಕೋಟಿ, ಕೃಷಿ ಉಪಕರಣಗಳಿಗೆ 50 ಸಾವಿರ ಕೋಟಿ, ಪಂಪ್‌ಸೆಟ್‌ಗಳಿಗೆ 60 ಸಾವಿರ ಕೋಟಿ ಬಂಡವಾಳವನ್ನು ರೈತರು ವಿನಿಯೋಗಿಸಿದ್ದಾರೆ. ಇದು ಕರ್ನಾಟಕದ ಒಟ್ಟು ಆದಾಯದ 1½ ಪಟ್ಟಿನಷ್ಟು.

ಪೇಪರ್, ಸಕ್ಕರೆ, ಹೋಟೆಲ್, ಹಣ್ಣಿನ ರಸ - ಈ ಎಲ್ಲಾ ಕೈಗಾರಿಕೆಗಳು ಕೃಷಿ ಆಧಾರಿತ. ಆದರೆ ರೈತರ ಸ್ಥಿತಿ ಹೇಗಿದೆ? ಊಟ ಮಾಡೋನಿಗಿಂತ ಬೆಳೆಯೋನಿಗೆ ಕಡಿಮೆ ಬೆಲೆ ಸಿಗ್ತಾ ಇದೆ. ಅತ್ಯಂತ ಕಡಿಮೆ ಬೆಲೆ ಸಕ್ಕರೆ ಭಾರತದ್ದು. ಸ್ಥಳೀಯ ಭೂಮಿಗುಣ, ವಾಯುಗುಣ, ಲಭ್ಯವಿರುವ ಸಂಪನ್ಮೂಲ ಇವೆಲ್ಲವನ್ನು ಅಧ್ಯಯನ ಮಾಡಿ ಸೂಕ್ತ ಬೆಳೆ ನೀತಿ ಜಾರಿಗೆ ತರಬೇಕು. ರೈತರು ಮಾಡುವ ಖರ್ಚು, ಶ್ರಮವನ್ನು ಆಧರಿಸಿ ಬೆಲೆ ನೀತಿ ತಯಾರಿಸಬೇಕು. ಸಾಗಾಣಿಕೆ, ಮಾರಾಟ, ದಾಸ್ತಾನು ಮಾಡುವ ವ್ಯವಸ್ಥೆ ಸಮರ್ಪಕವಾಗಿರಬೇಕು. ಮಣ್ಣಿನ ಸಂಪರ್ಕವೇ ಇಲ್ಲದ, ದೈಹಿಕ ಶ್ರಮ ಗೊತ್ತಿಲ್ಲದ ಆಡಳಿತಗಾರರು, ರಾಜಕಾರಣಿಗಳು, ಪುಸ್ತಕ ಜೀವಿ ಅಭಿಪ್ರಾಯಗಳೇ ಮುಖ್ಯವಾಗುತ್ತಿರುವುದರಿಂದಾಗಿ ರೈತರ ಜೀವನ ಸಂಕಷ್ಟಕ್ಕೆ ಗುರಿಯಾಗಿದೆ.

ಸಣ್ಣ ರೈತರು, ಜಮೀನಿಲ್ಲದ ಕೃಷಿ ಕಾರ್ಮಿಕರು, ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರನ್ನು ಕುರಿತಂತೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ ಎಂದು ಕೇಳಿದಾಗ, ಪ್ರಾಮಾಣಿಕವಾಗಿ ಹೇಳಬೇಕೆಂದರೆ ಕಾರ್ಯಕ್ರಮ ಹಾಕ್ಕೊಂಡಿಲ್ಲ, ಮುಂದೆ ಅದಕ್ಕೆ ಆದ್ಯತೆ ನೀಡುವ ಉದ್ದೇಶವಿದೆ ಎಂದು ಹೇಳಿದರು.

ಪಾಮ್ ಆಯಿಲ್ ಕೆ.ಜಿ. ಗೆ 20 ರೂ., ಕಡ್ಲೆಕಾಯಿ ಎಣ್ಣೆ ಕೆ.ಜಿಗೆ 30 ರೂ. ಅಂದ್ರೆ ಜನ ಪಾಮ್ ಆಯಿಲ್‌ನೇ ತಗೋತಾರೆ. ಆದ್ರೆ ಪಾಮ್ ಆಯಿಲ್‌ನಿಂದ ಚರ್ಮರೋಗ ಬರುತ್ತೆ. ಅಲ್ಲದೆ ಕಡಿಮೆ ಬೆಲೆ ಎಣ್ಣೆ ತರಿಸಿ ಎಣ್ಣೆಕಾಳುಗಳನ್ನ ಬೆಳೆಯೋ ರೈತರನ್ನು ನಾಶಮಾಡ್ತಾರೆ. ಕಡಿತ ಹುಟ್ಟಿಸೋ ಪಾಮ್ ಆಯಿಲ್‌ಗಿಂತ ಮರ್ಯಾದೆ ಕಾಪಾಡೊ ಕಡ್ಲೆಕಾಯಿ ಎಣ್ಣೆ ಉತ್ತಮ ಅನ್ನೋದನ್ನ ತಿಳ್ಕೊಬೇಕು.

ಟೊಮೆಟೊ ಬೆಳೆಯೋ ರೈತರಿಗೆ ಕೆ.ಜಿ.ಗೆ 50 ಪೈಸೆ ಸಿಗುತ್ತೆ. ಆದ್ರೆ ಅದೆ ಟೊಮೆಟೊ ಸ್ಟೈಲ್ ಆಗಿ ಕತ್ತರಿಸಿ ಇಟ್ಟು ಸಲಾಡ್ ಅಂತ ಕೊಟ್ರೆ 17 ರೂಪಾಯಿ ಕೊಡ್ತೀವಿ. ಟೊಮೆಟೊ ಸಾಸ್ ಬೆಲೆ ಇನ್ನೂ ಜಾಸ್ತಿ.

ನಮ್ಮ ದೇಶದ ಬೇಸಾಯ ಜಾನುವಾರುಗಳನ್ನು (cattle) ಆಧರಿಸಿದೆ. ಅವು ಬೇಸಾಯಕ್ಕೆ ಅತ್ಯವಶ್ಯಕ. ನಮ್ಮ ಕುದ್ರೆ ಕಾಲಿನ ತಳಿಯ ಹೋರಿಗಳು 3 ಟನ್ ತೂಕ ಎಳಿತವೆ. ಅದೇ ಸರ್ಕಾರದವರು ಆಮದು ಮಾಡಿಕೊಂಡಿರೋ ವಿದೇಶಿ ತಳಿಗಳು 50 ಕೆ.ಜಿ. ಎಳೆಯೋಕೆ ಸುಸ್ತಾಗ್ತವೆ.

ದೇಶಿ, ವಿದೇಶಿ ದಳ್ಳಾಳಿಗಳಿಂದ ನಮ್ಮ ಕೃಷಿ ನಾಶ ಆಗ್ತಾ ಇದೆ. ಮರು ಮೊಳಕೆ ಒಡೆಯದ ಕುಲಾಂತರಿ ಬೀಜಗಳಿಂದ ಬೀಜಸ್ವಾತಂತ್ರ್ಯ ನಾಶವಾಗ್ತ ಇದೆ. ನಮ್ಮ ದೇಸಿ ಲೋಲಾಕ ಟೊಮೆಟೊ ಬೀಜ 100 ಸಾರಿ ಮೊಳಕೆ ಒಡೆಯುತ್ತೆ. ಈ ಕುಲಾಂತರಿ ಬೀಜ ಕುಲಗೆಟ್ಟವರ ನೀತಿ.

ನಮ್ಮಲ್ಲಿರೂ 520 ಸಕ್ಕರೆ ಕಾರ್ಖಾನೆಗಳಿಂದ 2 ಕೋಟಿ ಟನ್ ಸಕ್ಕರೆ ಮಾಡ್ತೀವಿ ಆದ್ರೂ ಸರ್ಕಾರ ಇನ್ನೂ ಸಕ್ಕರೆಯನ್ನು ಆಮದು ಮಾಡ್ಕೋತಾ ಇದೆ. ಈ ಮುಕ್ತ ಪರವಾನಗಿ ಇರೋದ್ರಿಂದ ಯಾರೂ ಏನಾದ್ರು ತಂದು ಮಾರೋದು ಸಾಧ್ಯವಾಗ್ತ ಇದೆ.

ಬೇಸಾಯಕ್ಕೆ ಮುಖ್ಯವಾಗಿರುವ ನೀರಿನ ಬಗ್ಗೆ ಸರ್ಕಾರ ಸರಿಯಾಗಿ ಚಿಂತಿಸಿಲ್ಲ. ಮೈನರ್ ಇರಿಗೇಷನ್ ಮೈನಸ್ ಇರಿಗೇಷನ್ ಆಗ್ತಿದೆ. ಎಷ್ಟು ಲಕ್ಷ ಕೆರೆಗಳು ನಮ್ಮ ರಾಜ್ಯದಲ್ಲಿದ್ದವು. ಈಗ ಕೆರೆಗಳ ಸಂಖ್ಯೇನೆ ಕಡಿಮೆ ಆಗಿದೆ. ಬರಿ ಕುಡಿಯೋದಕ್ಕೆ, ಸ್ನಾನಕ್ಕೇನೆ 400 ಕೋಟಿ ಲೀ. ನೀರು ಬೇಕು. ಈ ಎಲ್ಲ ಸಮಸ್ಯೆಗಳಿಗೆ ಹೊಸ ಆರ್ಥಿಕ ನೀತಿ ಉತ್ತರವಾಗೋದಿಲ್ಲ. ಜಾಗತೀಕರಣ, ಖಾಸಗೀಕರಣ ಉತ್ತರವಾಗೋದಿಲ್ಲ. ಈ ಜಾಗತೀಕರಣದಿಂದ 1 ಅಥವಾ 2% ಜನ ಸುಖವಾಗಿರಬಹುದು ಅಷ್ಟೇ. ಸರ್ಕಾರ ಖಾಸಗೀಕರಣ ತರ್ತಾ ಇರೋದೇನೆ ಮೀಸಲಾತಿ ನಾಶಕ್ಕೇ. ಸರ್ಕಾರಕ್ಕೆ ಕಾರ್ಗಿಲ್ ಯುದ್ಧ ಸಾಧನೆ ಆಗುತ್ತೆ, ಮಸೀದಿ-ಮಂದಿರದಂತಹ ವಿಷಯಗಳು ಮುಖ್ಯವಾಗುತ್ತೆ. ಈ ದೇಶದ ದುಡಿವ ಜನಕ್ಕೆ ಅನುಕೂಲ ಮಾಡೋಕೆ ಆಗಲ್ಲ.

ದುಡಿಯುವ ಜನ, ರೈತರು, ಕಾರ್ಮಿಕರು ಎಲ್ಲರೂ ಸೇರಿ ನಡೆಸುವ ಚಳುವಳಿ ಸಮಸ್ಯೆಗೆ ಉತ್ತರವಾಗುತ್ತೆ. ಇವತ್ತಿನ ಪರಿಸ್ಥಿತಿಯಲ್ಲಿ ಯಾರು ಇದು ನಮಗೆ ಸಂಬಂಧ ಪಟ್ಟಿದ್ದಲ್ಲ ಅಂತ ಕೂತ್ಕಳಂಗಿಲ್ಲ. ಒಂದು ಕಾಲದಲ್ಲಿ ಬ್ಯಾಂಕ್‌ನೋರು, LIC ನೋರಿಗೆ ಹೋರಾಟ ಮಾಡೋ ಅಗತ್ಯವೇ ಇಲ್ಲ ಅನ್ನಿಸ್ತಿತ್ತು. ಆದ್ರೆ ಈಗ ಅವರಿಗು ಬೆಂಕಿ ತಗುಲಿದೆ. ದುಡಿಯೋ ಜನ ಒಬ್ಬರ ಹೋರಾಟವನ್ನು ಮತ್ತೊಬ್ಬರು ಬೆಂಬಲಿಸಬೇಕು. ರೈತರ ಸಮಸ್ಯೆಗೆ ಕಾರ್ಮಿಕರು, ಕಾರ್ಮಿಕರಿಗೆ ರೈತರು ಬೆಂಬಲಿಸುವಂತಾಗಬೇಕು. ಎಲ್ಲದಕ್ಕೂ ಒಂದಕ್ಕೊಂದು ಸಂಬಂಧವಿದೆ. ರೈತರು, ಬೇಸಾಯ ಅಂದ್ರೆ ಒಂದು ದೇಶದ ಆಹಾರ ಭದ್ರತೆಯಂತೆ. ಆ ಭದ್ರತೆ ನಾಶವಾಗಬಾರದು. ದುಡಿಯುವ ಜನರ ಹೋರಾಟವೊಂದೇ ಜಾಗತೀಕರಣವೆಂಬ ಏಡ್ಸ್‌ಗೆ ಮದ್ದು.

○

ಜಾಗತೀಕರಣ ಮತ್ತು ಕಾರ್ಮಿಕರು

ಬಾಬು ಮ್ಯಾಥ್ಯೂಸ್

ಜಾಗತೀಕರಣವನ್ನು ವಿರೋಧಿಸುವಾಗ ಅದರ ಕುರಿತು ನಿರಂತರ ಚಿಂತನೆಯ ಅಗತ್ಯವಿದೆ. ಜಾಗತೀಕರಣಕ್ಕೆ ಮ್ಯಾಜಿಕಲ್ ಫಾರ್ಮುಲಾ ಕಂಡು ಹಿಡಿಯಲು ಸಾಧ್ಯವಿಲ್ಲ. ಜಾಗತೀಕರಣವು ಈಗ ಧಿಡೀರನೆ ಕಾಣಿಸಿಕೊಂಡದ್ದಲ್ಲ. ಅನೇಕ ವರ್ಷಗಳಿಂದ ಅದರ ಪ್ರಕ್ರಿಯೆ ಜಾರಿಯಲ್ಲಿದ್ದು ಈಗ ನಾವು ಕಾಣ್ತಾ ಇರೋದು ಅದರ ಪ್ರತ್ಯಕ್ಷ ರೂಪವನ್ನು.

ಬ್ರಿಟಿಷರ ವಿರುದ್ಧ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮವು ಜಾಗತೀಕರಣದ ವಿರುದ್ಧದ ಮೊದಲ ಹೋರಾಟವಾಗಿತ್ತು. ಅಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭೂಮಾಲೀಕರು ಮಾತ್ರ ಭಾಗವಹಿಸಲಿಲ್ಲ. ಕಾರ್ಮಿಕರು, ರೈತರು, ಆದಿವಾಸಿಗಳು ಎಲ್ಲರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಈಗಿನ ಸಂದರ್ಭದಲ್ಲಿ ಜಾಗತೀಕರಣದ ವಿರುದ್ಧ ಹೋರಾಡಲು ಮತ್ತೆ ಎಲ್ಲರೂ ಒಗ್ಗೂಡಬೇಕಾಗಿದೆ. ಈ ಹೋರಾಟದಲ್ಲಿ ದೂರ ಉಳಿಯುವವರು ಭೂಮಾಲೀಕರಲ್ಲ, ಬಹುರಾಷ್ಟ್ರೀಯ ಕಂಪೆನಿಗಳು. ಈ ಬಹುರಾಷ್ಟ್ರೀಯ ಕಂಪನಿಗಳಿಗೆ ಇಡೀ ಜಗತ್ತನ್ನೆ ಗುಲಾಮಗಿರಿಗೆ ತಳ್ಳುವ ಶಕ್ತಿ ಇದೆ. ಈಗಿನ ಹೋರಾಟದಲ್ಲಿ ಬುದ್ಧಿ ಜೀವಿಗಳ ಪಾತ್ರವೂ ಮುಖ್ಯ. ಅವರು ಯಾವಾಗಲೂ ಮೇಲಿನವರ ಪರವಾಗಿಯೇ ಇರುತ್ತಾರೆ. ಜನಪರ ಹೋರಾಟ ತೀವ್ರವಾದಾಗ ಬುದ್ಧಿಜೀವಿಗಳಲ್ಲಿ ಒಡುಕು ಮೂಡುತ್ತದೆ.

ಜಾಗತೀಕರಣ ಪ್ರತ್ಯಕ್ಷವಾಗಿ ಕಾಣಿಸತೊಡಗಿದ್ದು 1990ರಲ್ಲಿ. ಜಾಗತೀಕರಣವೆಂದರೆ ಬಂಡವಾಳದ ಒಂದು ಕಾರ್ಯಕ್ರಮ. ಲಾಭವನ್ನೆ ಹುಡುಕಿಕೊಂಡು ಯಾತ್ರೆ ಮಾಡುವ ಕಾರ್ಯಕ್ರಮವದು. ಆದಷ್ಟು ಲಾಭ ಮಾಡುವುದೇ ಅದರ ಗುರಿ. ಇದರಿಂದಾಗಿ ಬಂಡವಾಳದ ಸ್ವರೂಪವೇ ಬದಲಾಗುತ್ತಿದೆ. ಒಂದೇ ಕಡೆ ಕುಳಿತು ಜಗತ್ತಿನಾದ್ಯಂತ internet ಮೂಲಕ ಬಂಡವಾಳ ಹೂಡಬಹುದಾಗಿದೆ.

ಹಿಂದಿದ್ದ ಜಾಗತೀಕರಣ ಹೀಗಿರಲಿಲ್ಲ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಪ್ರಚಾರ ಸಾಧನೆಯಿಂದಾಗಿ ಜಾಗತೀಕರಣ ಒಳ್ಳೇದು ಅಂತ ಹಬ್ಬಿಸಲಾಗುತ್ತಿದೆ. ಜಾಗತೀಕರಣವನ್ನು irreversible ಅಂದರೆ ಹಿಂತೆಗೆದುಕೊಳ್ಳಲಾಗದ್ದು ಎಂದು ಹೇಳ ಲಾಗುತ್ತಿದೆ. ಯಾವುದು ಒಳ್ಳೆಯದೊ ಅದನ್ನು ಹಿಂತೆಗೆದು ಕೊಳ್ಳುವ ಭಯ ಏಕೆ? ಜಾಗತೀಕರಣದಿಂದ ಯಾಕೆ ಇನ್ನೂ ಒಳ್ಳೆಯದಾಗಿಲ್ಲ ಅಂದ್ರೆ ಇನ್ನಷ್ಟು ಹೆಚ್ಚಿನ ಜಾಗತೀಕರಣ ಆಗಿಲ್ಲ ಅದಕ್ಕೆ ಅಂತಾರೆ.

ಜಾಗತೀಕರಣ ಇಂದು ವಿಶೇಷವಾದ ನಾಯಕತ್ವದಡಿ ಬರುತ್ತಿದೆ. ಹಿಂದೆ ವಿಶ್ವ ನಾಯಕತ್ವ ವಿಶ್ವಸಂಸ್ಥೆಯಂತಹ ಸಂಸ್ಥೆಗಳಿಗಿತ್ತು. ಇಂದಿನದು ಬ್ರಿಟನ್ ಹುಡ್ ಸಂಸ್ಥೆ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (I.M.F.) ವಿಶ್ವಬ್ಯಾಂಕ್ (World Bank) ವಿಶ್ವ ವಾಣಿಜ್ಯ ಸಂಸ್ಥೆ (World Trade organisation)ಯಂತಹ ಸಂಸ್ಥೆಗಳಿಗಿದೆ. ತಕ್ಷಣದ ಶೋಷಣೆ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯದಾದರೆ, ವಿಶ್ವ ಬ್ಯಾಂಕಿನದು ದೂರದೃಷ್ಟಿಯ ಶೋಷಣೆ. ವಾಷಿಂಗ್‌ಟನ್ ಸನ್‌ಸೆನ್‌ಸಸ್‌ನಲ್ಲಿ ಈ ಮೂರು ಸಂಸ್ಥೆಗಳು ಗೌಪ್ಯವಾಗಿ ನಾವೆಲ್ಲ ಒಂದೇ ಎಂದು ಒಪ್ಪಿಕೊಂಡರೂ, ಬಹಿರಂಗವಾಗಿ ಒಂದೇ ಎಂದಾಗ ಒಪ್ಪಿಕೊಳ್ಳುವುದಿಲ್ಲ.

ಖಾಸಗೀಕರಣ ಇಂದಿನ ಮುಖ್ಯ ಅಜೆಂಡಾ ಆಗಿದೆ. ಉದಾರೀಕರಣದ ಮೂಲಕ ಕಾನೂನುಗಳನ್ನು ಬದಲಾಯಿಸಿ ಹೊಸ ಕಾನೂನುಗಳನ್ನು ತಂದು ವಿದೇಶಿ ಬಂಡವಾಳವನ್ನು ಬರಮಾಡಿಕೊಂಡು ಲಾಭ ಮಾಡುವ ಗುರಿ ಇದೆ. ಎಲ್ಲಾ ಕ್ಷೇತ್ರಗಳಿಗೂ ಹೊಡೆತ ಕೊಟ್ಟು ಮತ್ತೆ ಚೇತರಿಸಿಕೊಳ್ಳದಂತೆ ಮಾಡಿ ವಿದೇಶಿ ಕಂಪೆನಿಗಳನ್ನು ತರುವ ಪ್ರಯತ್ನಗಳಾಗುತ್ತಿವೆ. ನಮ್ಮಲ್ಲಿನ ಹಣಕಾಸು ಕ್ಷೇತ್ರ (LIC, Bank ಇತ್ಯಾದಿ) ಬಲಿಷ್ಠವಾಗಿತ್ತು. ಅದನ್ನು ನಾಶ ಮಾಡಿದರೆ ಜಾಗತೀಕರಣವನ್ನು ಹಿಂತೆಗೆದುಕೊಳ್ಳಲಾಗದಂತೆ ಮಾಡಬಹುದು. ಅದಕ್ಕಾಗಿ ಹಣಕಾಸು ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಮೂಲಕ ಹೊಡೆತ ನೀಡುತ್ತಿದ್ದಾರೆ. ನಾಲ್ಕುವರೆ ಲಕ್ಷ ಉತ್ಪಾದನಾ ಉದ್ದಿಮೆಗಳನ್ನು ಮುಚ್ಚಿ ಹಾಕಲಾಗಿದೆ. ಮಿಲಿಯಾಂತರ ಕಾರ್ಮಿಕರು ಬೀದಿಗೆ ಬೀಳುವಂತಾಗಿದೆ. ನಮ್ಮ ಕಾನೂನಿನಡಿ ಕಾರ್ಮಿಕರ ರಕ್ಷಣೆಗೆಂದು ಸುಮಾರು 100 ಕಾಯ್ದೆಗಳಿವೆ. ಇವನ್ನೆಲ್ಲ ತೆಗೆಯುವ ಪ್ರಯತ್ನಗಳಾಗುತ್ತಿವೆ. ಮುಖ್ಯವಾದ industrial dispute actಅನ್ನು ಕಿತ್ತು ಹಾಕಲು ಹೊರಟಿದ್ದಾರೆ. ಇದರಿಂದಾಗಿ ಎಲ್ಲಾ ಕಾರ್ಮಿಕರು ಗುತ್ತಿಗೆ (contract) ಕಾರ್ಮಿಕರಾಗುವ ಪರಿಸ್ಥಿತಿ ಇದೆ. ಸುಮಾರು 60 ಕ್ಷೇತ್ರದಲ್ಲಿ ಕನಿಷ್ಟಕೂಲಿ (minimum wages) ಇದೆ. ಹೊಸ ಪದ್ಧತಿಯಿಂದ ಕನಿಷ್ಟ ಕೂಲಿ ನಾಶವಾಗುತ್ತೆ.

ಹಿಂದಿನ ಮತ್ತು ಈಗಿನ ಜಾಗತೀಕರಣದ ವ್ಯತ್ಯಾಸ ತಿಳಿದುಕೊಳ್ಳುವ ಅಗತ್ಯವಿದೆ. ಹಿಂದಿನದರಲ್ಲಿ ಒಂದು ಶಿಸ್ತು ಇತ್ತು. 1917ರ ಕ್ರಾಂತಿ ವಿಶ್ವ ಬಂಡವಾಳಗಾರರಿಗೆ ಭಯ ಹುಟ್ಟಿಸಿತ್ತು. ಆ ಕ್ರಾಂತಿಯ ಸ್ಫೂರ್ತಿಯಿಂದ ವಿಶ್ವದ ಎಲ್ಲೆಡೆ ಬಡವರ ಕುರಿತು ಹೆದರಿಕೆ ಇತ್ತು. ಆದರೆ ಈಗಿನ ಸಂದರ್ಭದಲ್ಲಿ 1917ರ ಕ್ರಾಂತಿಯಂತಹ ಸ್ಫೂರ್ತಿ ಇಲ್ಲ. ರೈತರ ಮುಂದಾಳತ್ವದ ಚೈನಾ ಕ್ರಾಂತಿ, ಕಾರ್ಮಿಕರ ಮುಂದಾಳತ್ವದ ರಷ್ಯಾ ಕ್ರಾಂತಿ ದುಡಿಯುವ ವರ್ಗಕ್ಕೆ ಮಾದರಿ, ಸ್ಫೂರ್ತಿಯಾಗಿದ್ದವು.

ಸದ್ಯದ ಪರಿಸ್ಥಿತಿಯಲ್ಲಿ ಒಂದು ಕ್ಷೇತ್ರದ ದುಡಿಯುವ ಜನ ಮತ್ತೊಂದು ಕ್ಷೇತ್ರದ ಬಗ್ಗೆ ಅರಿವು ಮೂಡಿಸಿಕೊಂಡು ಒಂದಾಗಿ ಹೋರಾಡುವ ಅಗತ್ಯವಿದೆ. ಪರಸ್ಪರ ಬೆಂಬಲಿಸುವುದು ಮುಖ್ಯ. ರೈತರ ಹೋರಾಟವನ್ನು ಕಾರ್ಮಿಕರು ತಮಗೆ ಸಂಬಂಧಿಸಿದ್ದಲ್ಲವೆಂದು, ಕಾರ್ಮಿಕರ ಹೋರಾಟವನ್ನು ರೈತರು ತಮಗೆ ಸಂಬಂಧಿಸಿದ್ದಲ್ಲವೆಂದುಕೊಳ್ಳುವ ಪರಿಸ್ಥಿತಿ ಈಗಿಲ್ಲ. ಜಗತ್ತಿನಾದ್ಯಂತದ ಕಾರ್ಮಿಕರ, ರೈತರ, ಆದಿವಾಸಿಗಳ, ಮಹಿಳೆಯರ ಹಾಗು ಎಲ್ಲಾ ಜನಪರ ಹೋರಾಟಗಳು ಒಗ್ಗೂಡಿ ಅಂತರರಾಷ್ಟ್ರೀಯತೆಯ ಚಳುವಳಿಯಾಗಬೇಕು. ಈಗಾಗಲೆ ಅಂತಹ ಪ್ರಕ್ರಿಯೆ ಪ್ರಾರಂಭವಾಗಿದೆ. ರೈತರು, ಕಾರ್ಮಿಕರು ಒಂದಾಗಿ ಸಿಯಾಟಲ್‌ನಲ್ಲಿ ನಡೆಸಿದ ಪ್ರತಿಭಟನೆ ಇದಕ್ಕೆ ಒಳ್ಳೆಯ ಉದಾಹರಣೆ. ಪ್ರತಿಭಟನೆಗೆ ಹೆದರಿದ ಸಂಘಟಕರು ಮುಂದಿನ ಸಮಾವೇಶವನ್ನು ದೂರದ ಅಬುದಾಬಿಯಲ್ಲಿಟ್ಟು ಕೊಳ್ಳಲು ಯೋಚಿಸಿದರು. ನಮ್ಮಲ್ಲಿಯೂ ಸಹ ಪರಿಸರ, ಮಹಿಳಾ, ರೈತ, ದಲಿತ, ಹಿಂದುಳಿದ ವರ್ಗಗಳ, ಕಾರ್ಮಿಕ ಚಳುವಳಿಗಳು ಒಗ್ಗೂಡಿ ಹೋರಾಡುವ ಅಗತ್ಯವಿದೆ. ಹಳೆಯ ಚಳುವಳಿಗಳಿಂದ ನಾವು ಸಾಕಷ್ಟು ಪಾಠ ಕಲಿಯುವುದಿದೆ.

ಜಾಗತೀಕರಣವನ್ನು ವಿರೋಧಿಸಿದರಷ್ಟೆ ಸಾಲದು. ಇಲ್ಲಿ ಕಾರ್ಮಿಕ ನಾಯಕ ಶಂಕರ್ ಗುಹಾ ನಿಯೋಗಿ ಅವರು ಹೇಳುತ್ತಿದ್ದ ಸಂಘರ್ಷ್ ಮತ್ತು ನಿರ್ಮಾಣ್ ಹೆಚ್ಚು ಪ್ರಸ್ತುತ, ಅತ್ಯಗತ್ಯ. ಕಾರ್ಮಿಕ ಸಂಘಟನೆಗಳು ಸೋಲುತ್ತಿವೆ ಎಂಬುದು ನಿಜವೆ. ಅದಕ್ಕೆ ಕಾರಣ ಕಾರ್ಮಿಕ ಸಂಘಟನೆಗಳು ವಿರೋಧಿಸುವ ಕೆಲಸ ಮಾಡುತ್ತಿವೆಯೇ ಹೊರತು ನಿರ್ಮಾಣದ ಕೆಲಸ ಮಾಡುತ್ತಿಲ್ಲ. ಸಂಘರ್ಷದ ಜೊತೆಜೊತೆಗೆಯೇ ನಿರ್ಮಾಣದ ಕಾರ್ಯವೂ ಸಾಗಬೇಕು. ಜಾಗತೀಕರಣವನ್ನು ವಿಮರ್ಶಾತ್ಮಕವಾಗಿ (we must engage critically about globalisation) ನೋಡಬೇಕು. Alliance ಬಿಲ್ಡಿಂಗ್‌ಅನ್ನು ಬಲಿಷ್ಠ ಮಾಡಬೇಕು. ಜಾಗತೀಕರಣ ಕುರಿತು ನಿರಂತರ ಆಲೋಚನೆ, ವಿಶ್ಲೇಷಣೆಯ ಅಗತ್ಯವಿದೆ. ಇದಕ್ಕೆ ಕೊನೆಯೆಂಬುದೇ ಇಲ್ಲ. ಹೊಸ, ಹಳೆಯ ಸಾಮೂಹಿಕ ಚಳುವಳಿಗಳು ಒಂದಾಗಬೇಕು. ಜನಪರ ಚಳುವಳಿಗಳು ಬಲಿಷ್ಠವಾದಾಗ ಮಾತ್ರ ಬದಲಾವಣೆ ಸಾಧ್ಯ.

○

ಜಾಗತೀಕರಣ ಮತ್ತು ದಲಿತರು

ಗಂಗಾಧರಮೂರ್ತಿ

ಹಂಪಿ ವಿಶ್ವವಿದ್ಯಾಲಯದವರು ಹೊರ ತಂದಿರುವ ದಲಿತರು - ಜಾಗತೀಕರಣ ಎಂಬ ಪುಸ್ತಕ ಸಾಕಷ್ಟು ಚರ್ಚೆಗೆ ಕಾರಣವಾಯ್ತು. ಈ ಪುಸ್ತಕದಲ್ಲಿ ಎರಡು ಅಂಶಗಳು ಪ್ರಧಾನವಾಗಿವೆ. ಅದೇಂದರೆ

1. ಜಾಗತೀಕರಣವನ್ನು ಒಪ್ಪಿಕೊಂಡರೆ ಜಾತಿಪದ್ದತಿ ನಾಶವಾಗುತ್ತೆ.
2. ನಮ್ಮ ದೇಶಕ್ಕೆ ಆಧುನೀಕರಣ ಹೊಸದಾಗಿ ಬಂದ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯಲ್ಲಿನ ಅನೇಕ ಅನಿಷ್ಟಗಳು ನಾಶವಾದವು. ಬ್ರಾಹ್ಮಣರು ಆಧುನಿಕತೆ ಯನ್ನು ಬರಮಾಡಿಕೊಂಡಂತೆ ದಲಿತರು ಜಾಗತೀಕರಣ ವನ್ನು ಬರಿಮಾಡಿಕೊಂಡರೆ ಬದಲಾವಣೆ ಸಾಧ್ಯ.

ಜಾಗತೀಕರಣವನ್ನು ಕುರಿತು ಚಿಂತಿಸುವಾಗ ಜಾಗತೀಕರಣ - ದಲಿತರು, ಜಾಗತೀಕರಣ - ಒಕ್ಕಲಿಗರು ಈ ರೀತಿ campartmentalise ಮಾಡಿ ನೋಡುವುದೇ ಸರಿ ಇಲ್ಲ. ಆದಾಯದ ಮೂಲವನ್ನು ಆಧಾರವಾಗಿಟ್ಟುಕೊಂಡು ಜಾಗತೀಕರಣವನ್ನು ನೋಡಬೇಕು. ಜಾಗತೀಕರಣದ ಸಂದರ್ಭದಲ್ಲಿ ನಾವು ಬಳಸುವ ಫ್ರೀ ಮಾರ್ಕೆಟ್, liberalisation ಪದಗಳನ್ನು ಉಪಯೋಗಿಸುವುದು ಸರಿಯಲ್ಲ ಏಕೆಂದರೆ Free ಅಥವಾ ಮುಕ್ತ, liberalisation ಅಥವಾ ಉದಾರೀಕರಣ ದಂತಹ ಪದಗಳು ಜನರಲ್ಲಿ ಜಾಗತೀಕರಣ ವೆಂದರೆ ಏನೋ ಒಳ್ಳೆಯದೇನೊ ಅನ್ನುವಂತೆ ಮಾಡುತ್ತವೆ. ಆದರೆ ಜಾಗತೀಕರಣದಲ್ಲಿ ಉದಾರವಾದುದು ಏನೂ ಇಲ್ಲ. ಫ್ರೀ ಅಥವಾ ಮುಕ್ತ ಎನ್ನುವುದಕ್ಕಿಂತ ಅನಿರ್ಬಂಧಿತ ಎಂದು ಕರೆಯುವುದು ಸೂಕ್ತವಾಗುತ್ತದೆ. ಜಾಗತೀಕರಣಕ್ಕೆ ಯಾವ ಮಾನವೀಯ ಮೌಲ್ಯವಿಲ್ಲದೆ ಲಾಭವಷ್ಟೇ ಮುಖ್ಯವಾಗಿದೆ.

ಜಾಗತೀಕರಣದಿಂದ ಜಗತ್ತೆಲ್ಲ ಒಂದಾಗುವುದೆಂದು ಹೇಳುತ್ತಾರೆ. ಆದರೆ ನಾವು ಬಹಳ ಹಿಂದೆಯೇ ವಸುದೈವ ಕುಟುಂಬಕಂ ಅನ್ನುತ್ತಿದ್ದ ಕಾಲದಲ್ಲಿ ಜಗತ್ತು ಯಾಕೆ ಒಂದಾಗಿರಲಿಲ್ಲ? ಜಾಗತೀಕರಣದಿಂದ ವಿಶ್ವಾತ್ಮಕ ವಾಗುತ್ತಿರುವುದು ಏಡ್ಸ್ ರೋಗ ಮಾತ್ರ. ಜಾಗತೀಕರಣದಿಂದ ದಲಿತರು ಮೀಸಲಾತಿಯನ್ನು ಕಳೆದುಕೊಳ್ಳುತ್ತಾರೆ ಎಂಬುದು ನಿಜವೇ ಆದರೆ ಅದಷ್ಟೇ ಅಲ್ಲದೆ, ಮೀಸಲಾತಿ ಒಂದು ಜನಾಂಗದ ಒಂದು ಸಮಸ್ಯೆಯಷ್ಟೇ. ಎಲ್ಲ ಸಮಸ್ಯೆಯೂ ಅದೆ ಅಲ್ಲ. ಖಾಸಗೀಕರಣದಿಂದ ಮೀಸಲಾತಿ ನಾಶವಾಗುತ್ತದೆ. ಆದರೆ ಮೀಸಲಾತಿ ನಾಶವಾಗಲೆಂದೇ ಖಾಸಗೀಕರಣ ಮಾಡುತ್ತಿಲ್ಲ.

ಇವತ್ತು casino capital - ಅಂದರೆ internet ಮೂಲಕ ಲಕ್ಷಾಂತರ ಡಾಲರ್ ಅನ್ನು ವಿದೇಶದಲ್ಲಿ ಕೂತು ಡೆಲ್ಲಿಯಲ್ಲಿ ಹೂಡುತ್ತಾರೆ. ಕೇಂದ್ರದಲ್ಲಿ ಖಾಸಗೀಕರಣವನ್ನು ಮಾಡುವುದಕ್ಕೋಸ್ಕರವೇ Disinvestment ಇಲಾಖೆ ಇದೆ. ಖಾಸಗೀಕರಣದಿಂದ ಅನೇಕ ಕ್ಷೇತ್ರಗಳಿಗೆ ಹಾನಿಯಾಗುತ್ತದೆ. ಇವತ್ತು ಅಧ್ಯಾಪಕರುಗಳ ಸಂಬಳದಲ್ಲಿ 15% ಕಡಿತಗೊಳಿಸುವ ಪ್ರಯತ್ನ ನಡೆದಿದೆ. ಅಧ್ಯಾಪಕರುಗಳು ಹಿಂದೆ ಬ್ಯಾಂಕಿನ ನೌಕರರು ಅವರ ಹೋರಾಟದಲ್ಲಿ ಭಾಗವಹಿಸಲು ಕೇಳಿದಾಗ ಬೆಂಬಲ ಸೂಚಿಸಲಿಲ್ಲ. ಈಗ ಅಧ್ಯಾಪಕರುಗಳು ಹೋರಾಟ ನಡೆಸುವಾಗ ಬೇರೆಯವರು ಬೆಂಬಲ ಹೇಗೆ ಸೂಚಿಸುತ್ತಾರೆ? ಪ್ರತಿಯೊಬ್ಬರ ಹೋರಾಟದಲ್ಲಿ ಪರಸ್ಪರ ಬೆಂಬಲವಿರಬೇಕು.

ರಷ್ಯಾದ ಪತನದೊಂದಿಗೆ ಮೂರನೆ ಜಗತ್ತಿನ ರಾಷ್ಟ್ರಗಳ ಆಯ್ಕೆಯೂ ನಾಶವಾಯಿತು. ಈ ದೇಶದ ಕರಾಳ ಇತಿಹಾಸ ಪ್ರಾರಂಭವಾದದ್ದು ಪಿ.ವಿ. ನರಸಿಂಹರಾವ್ ಮತ್ತು ಮನಮೋಹನ್‌ಸಿಂಗ್ ಅವರಿಂದ. ಈಗ ಖಾಸಗೀಕರಣ ಎಲ್ಲಾ ಪಕ್ಷಗಳ ಆದ್ಯತೆ ಆಗಿದೆ. ಪ್ರಾಥಮಿಕ ಶಿಕ್ಷಣವನ್ನು ದೊಡ್ಡ ಉದ್ದಿಮೆಗಾರರು ತೆಗೆದು ಕೊಳ್ಳಲಿ ಎಂದು ಶಿಕ್ಷಣ ಸಚಿವರು ಹೇಳುತ್ತಿದ್ದಾರೆ. ಉದಾಹರಣೆಗೆ ಇನ್‌ಫೋಸಿಸ್‌ನಂತಹ ಸಂಸ್ಥೆ ತೆಗೆದುಕೊಂಡರೆ ಪಾಠಗಳು ಹೇಗಿರಬಹುದೆಂದು ಯೋಚಿಸಿ.

ನಮ್ಮ ದೇಶದ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳು ದಾಳಿ ಮಾಡ್ತಿವೆ. ಭೂಪಾಲ್ ಗ್ಯಾಸ್ ದುರಂತಕ್ಕೆ ಕಾರಣವಾದ ಯುನೈಟೆಡ್ ಕಾರ್ಬೈಡ್ ಸಂಸ್ಥೆಯವರನ್ನು ಇನ್ನು arrest ಮಾಡಲಾಗಿಲ್ಲ. ಭೋಪಾಲ್‌ನಲ್ಲಿರುವ ಮಕ್ಕಳ ಕಣ್ಣುಗಳು ನೋಡಲು ಭಯಾನಕವಾಗಿವೆ. ಗುಡ್ಡೆಗಳು ಉಬ್ಬಿಕೊಂಡು ಹೊರಚಾಚಿಕೊಂಡಿದೆ. ಜನರು ಅನೇಕ ಖಾಯಿಲೆಗಳಿಂದ ನರಳುತ್ತಿದ್ದಾರೆ. ಇದಕ್ಕೆ ಗ್ಯಾಸ್ ದುರಂತವೇ ಕಾರಣ. ಆದರೂ ಇನ್ನೂ ಏನೂ ಮಾಡಲಾಗಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಮಾನವೀಯ ಗುಣಗಳಿಲ್ಲ ಎಂಬುದಕ್ಕೆ ಈ ಉದಾಹರಣೆ ಯೊಂದೇ ಸಾಕು. ಭೂಮಿಯೇ ಆಧಾರವಾಗಿರೊ ದಲಿತರನ್ನು ಕೃಷಿ ನೀತಿಯಿಂದಾಗಿ ಭೂಮಿಯಿಂದ ದೂರಮಾಡಿ ಅವರು ನಗರಗಳ ಕೊಳಚೆಗೇರಿ ಸೇರುವಂತೆ ಮಾಡಲಾಗುತ್ತಿದೆ. ಆರೋಗ್ಯ ಕ್ಷೇತ್ರಕ್ಕೆ ಸಬ್ಸಿಡಿ ಕಡಿತಗೊಳಿಸಿದ್ದರಿಂದ ಆಫ್ರಿಕಾ,

ಮೆಕ್ಸಿಕೊ ಬೆಲ್ಜಿಯಂ ಮಕ್ಕಳ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಇಲ್ಲಿ ದಲಿತರ ಹಾಸ್ಟೆಲ್‌ಗಳಿಗೆ ನೀಡುವ ಸಬ್ಸಿಡಿ ಕಡಿತಗೊಳಿಸಿದರೆ ಅವರ ಓದಿಗೆ ಹೊಡೆತ ಬೀಳುತ್ತದೆ.

Tie up ಯೂನಿವರ್ಸಿಟಿಗಳಲ್ಲಿ B.A. ಮಾಡಲಿಕ್ಕೆ ಒಬ್ಬರಿಗೆ 2.5 ಲಕ್ಷ ಖರ್ಚಾಗುತ್ತದೆ. ಭಾರತದಲ್ಲಿ 3000 ರೂ. ಆಗ್ತುತ್ತೆ. ಜಾಗತೀಕರಣವೆಂಬುದು ಅಸಮಾನತೆಯ ಸಿದ್ಧಾಂತದ ಮೇಲೆ ನಿಂತಿದೆ. ಒಂದು ಅಸಮಾನತೆಯಿಂದ ಇನ್ನೊಂದು ಅಸಮಾನತೆಯನ್ನು ತೆಗೆಯೋಕೆ ಸಾಧ್ಯವಿಲ್ಲ.

ಜಾಗತೀಕರಣವೆಂದರೆ ಕೋಳಿಗೂಡಿಗೆ ನರಿಬಿದ್ದಂತೆ ಎಂದು ಹೇಳಿದ್ದು ಸರಿಯಾದ ಅರ್ಥಕೊಡುತ್ತೆ. ಸಿಯಾಟಲ್‌ನಲ್ಲಿ ನಡೆದ ಪ್ರತಿಭಟನೆ ನೀಡಿದ ಎಚ್ಚರಿಕೆಯಿಂದ ಈಗ ಕೋಳಿಗಳನ್ನು ಇಟ್ಟುಕೊಂಡು ನರಿಗಳನ್ನು ಕರೆದುಕೊಳ್ಳಬೇಕೆನ್ನುವ ಮೂಲಕ ಜಾಗತೀಕರಣದ ಮಾನವೀಯ ಮುಖ ಪ್ರಾರಂಭವಾಗಿದೆ.

ಜಾಗತೀಕರಣ - ಒಂದು ಕ್ರಿಯಾಶೀಲ ಪ್ರತಿಕ್ರಿಯೆ ಗೋಪಾಲಕೃಷ್ಣ

ಜಾಗತೀಕರಣ ಪ್ರಕ್ರಿಯೆ ಕ್ಷಿಪ್ರವಾಗಿದೆ. ಇಡೀ ವ್ಯವಸ್ಥೆಯನ್ನು ಬದಲಾಯಿಸಿದೆ. ಜಾಗತೀಕರಣ ವೆಂಬುದು ವಾಣಿಜ್ಯ ಮೂಲಭೂತವಾದ (Fundamentalism of Commerce). ಅದರ ಗುರಿ ವಾಣಿಜ್ಯದ ಪ್ರತಿಯೊಂದು ಮೂಲವನ್ನು ಹುಡುಕಿ ಕಬಳಿಸುವುದಾಗಿದೆ. ಜಾಗತೀಕರಣ ಕುರಿತು ಆಳವಾದ, ತಜ್ಞ ಅಧ್ಯಯನ ಆಗಬೇಕು. ಜಾಗತೀಕರಣ ವನ್ನು ವಿರೋಧಿಸಲು ಅಕೆಡಮಿಕ್, ಆಕ್ಟಿವಿಸ್ಟ್ ಪ್ರತಿಕ್ರಿಯೆಗಳೆರಡೂ ಮುಖ್ಯ. ಜನಪರ, ಎಡಪಂಥದ ಪಕ್ಷಗಳು ತಮ್ಮ ಐಡೆಂಟಿಟಿಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಮೈತ್ರಿ ಬೆಳೆಸುವ ಅಗತ್ಯವಿದೆ. ಕರ್ನಾಟಕದಲ್ಲಿ ಜನಪರ ಪರ್ಯಾಯ ಚಳುವಳಿಗಳು (ದಲಿತ, ರೈತ ಚಳುವಳಿ, ರಂಗಭೂಮಿ ಇತ್ಯಾದಿ) ಎಲ್ಲ ಕ್ಷೇತ್ರಗಳಲ್ಲೂ (ರಾಜಕೀಯ, ಸಾಂಸ್ಕೃತಿಕ) ಹುಟ್ಟಿಕೊಂಡು, ಅರ್ಥಪೂರ್ಣ ಬೆಳವಣಿಗೆಗೆ ಕಾರಣವಾದ ಹಿನ್ನೆಲೆ ಇದೆ. ಆ ಹಿನ್ನೆಲೆಯಲ್ಲಿ ಎಲ್ಲಾ ಜನಪರ ಚಳುವಳಿಗಳು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಂದಾಗಿ ಜಾಗತೀಕರಣವನ್ನು ಪ್ರತಿಭಟಿಸಬೇಕು.

ರಾಜಕೀಯ ಪ್ರತಿಕ್ರಿಯೆ

○ *ಶಂಕರ್*

ಪ್ರಸ್ತುತ ಸಂದರ್ಭದಲ್ಲಿ ಕೋಮುವಾದಿಗಳು ಸ್ವದೇಶಿ ಮತ್ತು ಜಪಿಸುವ ಮೂಲಕ ತಾವೂ ಜಾಗತೀಕರಣದ ವಿರೋಧಿಗಳು ಎಂಬ ಸೋಗು ಹಾಕುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಯವರು ಒಂದು ಸಂದರ್ಭದಲ್ಲಿ ತಮ್ಮ ಪಕ್ಷ ಬಿ.ಜೆ.ಪಿ. ಯವರ ಕೋಮು ವಾದಿ ನಿಲುವನ್ನು ವಿರೋಧಿಸುತ್ತೇವೆ, ಆದರೆ ಅವರ ಆರ್ಥಿಕ ಕಾರ್ಯಕ್ರಮಗಳಿಗೆ ನಮ್ಮ ಸಮ್ಮತಿ ಇದೆ. ಎನ್ನುವ ಮೂಲಕ ತಮ್ಮ ಬಲ್ಲಾ ಬಯಲು ಮಾಡಿದ್ದಾರೆ. ರಾಜಕೀಯವಾಗಿ ಇವೆರೆಡೂ ಪಕ್ಷಗಳೂ ಒಂದೇ. ಸದ್ಯದ ಪರಿಸ್ಥಿತಿಯಲ್ಲಿ ಈ ಎರಡೂ ಪಕ್ಷಗಳನ್ನು ದೂರವಿಟ್ಟು, ಎಲ್ಲಾ ಎಡಪಂಥೀಯ, ದಲಿತ, ಆದಿವಾಸಿ, ಇನ್ನಿತರ ಪ್ರಗತಿ ಪರ ಶಕ್ತಿಗಳು ಒಂದಾಗಿ ಪರ್ಯಾಯ ರೂಪಿಸಬೇಕಾದ ಅಗತ್ಯವಿದೆ ಎಂದು ಹೇಳಿದರು.

○

"ರಫ್ತು ಮಾಡಿ ಇಲ್ಲವೇ ನಾಶವಾಗಿ' ಎಂಬ ಘೋಷಣೆಯಿಂದಾಗಿ ಆಹಾರ ಬೆಳೆಗಳ ಬದಲು ನಮ್ಮ ರೈತರು ರಫ್ತು ಬೆಳೆಗಳನ್ನು ಬೆಳೆಯುತ್ತಾರೆ. ಅದು "ರಫ್ತು ಮಾಡಿ ಮತ್ತು ನಾಶವಾಗಿ' ಎಂಬ ಘೋಷಣೆಗೆ ದಾರಿಮಾಡಿಕೊಡುತ್ತದೆ, ವಿದೇಶೀ ಮಾರುಕಟ್ಟೆಯ ಮೇಲೆ ಅವಲಂಬನೆ ಹೆಚ್ಚುತ್ತದೆ. ಏಕೆಂದರೆ ಎಸ್.ಎ.ಪಿ. / ಎಲ್.ಪಿ.ಜಿ.ಯ ಅಂತಿಮ ಉದ್ದೇಶ ಏಳು ಶ್ರೀಮಂತ ದೇಶಗಳ ಗುಂಪಿನ ರಫ್ತು ಹೆಚ್ಚಿಸುವುದು ಮತ್ತು ಅವುಗಳ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭದಾಯಕ ಹೂಡಿಕೆಗೆ ಅವಕಾಶ ಕಲ್ಪಿಸಿಕೊಡುವುದು. ಏಕೆಂದರೆ ಅವುಗಳ ಮಾರುಕಟ್ಟೆಗಳು ಸಂಕುಚಿತಗೊಳ್ಳುತ್ತಿವೆ.

ಕೃಪೆ : ಸಿ. ಆರ್. ಭಟ್‌ರವರ 'ಜಾಗತೀಕರಣದ ಹತ್ತು ವರ್ಷಗಳು ಪುಸ್ತಕ'

ಜಾಗತೀಕರಣ - ವಿವಿಧ ಮಹಿಳಾ ಸಂಘಟನೆಗಳ ನಿಲುವು

ಜಾಗತೀಕರಣ ಕುರಿತು ವಿವಿಧ ಮಹಿಳಾ ಗುಂಪುಗಳ ನಿಲುವುಗಳನ್ನು ದಾಖಲಿಸುವುದು ಮುಖ್ಯವೆನಿಸಿದ್ದರಿಂದ ಬೆಂಗಳೂರಿನ ಕೆಲವು ಮಹಿಳಾ ಗುಂಪುಗಳನ್ನು ಸಂಪರ್ಕಿಸಿ, ವಿಷಯ ಕುರಿತು ಬರೆದುಕೊಡಲು ಹೇಳಿದೆವು. ಕೇಳಿದವರೆಲ್ಲರೂ ಬರೆದುಕೊಡುತ್ತೇವೆಂದು ಹೇಳಿದರೂ ಎಲ್ಲರ ಲೇಖನ ತಲುಪಲಿಲ್ಲ. ಪತ್ರಿಕೆ ಪ್ರಕಟಿಸುವ ಸಮಯಕ್ಕೆ ಬರೆದುಕೊಟ್ಟಿರುವವರ ಲೇಖನಗಳನ್ನು ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ. ಜನವಾದಿ ಮಹಿಳಾ ಸಂಘಟನೆಯ ವಿಮಲರವರು, ಸ್ತ್ರೀಜಾಗೃತಿ ಸಮಿತಿಯ ಗೀತಾ ಮೇನನ್ ಅವರು, ಮಾನಿನಿ ಸಂಘಟನೆಯ ಮೀರಾ ಚಕ್ರವರ್ತಿಯವರು ಜಾಗತೀಕರಣ ಕುರಿತು ಬರೆದಿರುವ ಲೇಖನಗಳನ್ನು ಪ್ರಕಟಿಸಿದ್ದೇವೆ.

ಜಾಗತೀಕರಣ : ಮಹಿಳೆಯರ ಹಿಂಜರಿಕೆಯನ್ನು ನಾಜೂಕಾಗಿ ಬಳಸಿಕೊಳ್ಳುವ ವ್ಯವಸ್ಥೆ

ಮಹಿಳೆಯರನ್ನು 'ದುಡಿಯುವ ಮಹಿಳೆ'ಯರು ಎಂದು ಪ್ರತ್ಯೇಕವಾಗಿ ವರ್ಗೀಕರಿಸುವ ಅಭಿಪ್ರಾಯವೇ ಪ್ರಶ್ನಾರ್ಹವಾದುದು. ವೇತನ ರಹಿತ ಆದರೆ ರಾಷ್ಟ್ರೀಯ ಉತ್ಪಾದನೆಗೆ ಗಣನೀಯ ಕೊಡುಗೆ ನೀಡುವ, ಕೌಟುಂಬಿಕ ನೆಲೆಯಲ್ಲಿ ಮಹಿಳೆಯರು ಮಾಡುವ ಗೃಹಕೃತ್ಯಗಳನ್ನಾಗಲಿ, ಕುಟುಂಬದ ಚೌಕಟ್ಟಿನೊಳಗೆ, ಉತ್ಪಾದನಾ ಪ್ರಕ್ರಿಯೆಯ ಭಾಗವಾಗಿಯೇ ಮಹಿಳೆಯರು ಮಾಡುವ ದನ-ಕರು-ಕೊಟ್ಟಿಗೆ ಕೆಲಸ, ಉರುವಲು ನೀರಿಗಾಗಿ ವ್ಯಯಿಸುವ ಸಮಯಗಳೆಂದೂ ಅವಳ ದುಡಿಮೆ ದುಡಿತದ ಅವಧಿಯಾಗಿ ಪರಿಗಣಿಸಲ್ಪಡುವುದಿಲ್ಲ. ರಾಷ್ಟ್ರೀಯ ಉತ್ಪಾದನಾ ಮಾಪನದ ಸಂದರ್ಭದಲ್ಲಿ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದ ಹಿನ್ನೆಲೆಯಲ್ಲಿ ಆ ಎಲ್ಲಾ ವರದಿಗಳೂ ಅಪೂರ್ಣವೇ! ಮಹಿಳೆಯರ ದುಡಿಮೆಯನ್ನು ಗಣನೆಗೆ ತೆಗೆದುಕೊಳ್ಳಲು ಸಹಾಯಕವಾಗುವ ಸಮೀಕ್ಷೆಗಳೂ ಕೂಡ ಸಮರ್ಪಕವಾಗಿ ನಡೆಯುವುದಿಲ್ಲ. ಲಭ್ಯವಿರುವ ಮಾಹಿತಿಗಳೂ ಕೂಡಾ 1991ರಲ್ಲಿ ನಡೆಸಿದ ಸಮೀಕ್ಷೆಯದು ಎಂದರೆ ಈ ಕುರಿತು ಒಟ್ಟು ಸಮಾಜ ಎಷ್ಟು ಗಂಭೀರವಾಗಿ ಚಿಂತಿಸುತ್ತಿದೆ ಎಂಬುದು ವೇದ್ಯವಾಗುತ್ತದೆ.

ಕೃಷಿ : ಕೃಷಿಯೇ ಪ್ರಧಾನವಾದ ಈ ದೇಶದಲ್ಲಿ ಕೃಷಿ ಸಂಬಂಧಿ ಕೆಲಸ ಬಹುಪಾಲನ್ನು ಮಹಿಳೆಯರೇ ಮಾಡುತ್ತಾರಾದರೂ ಈ ಕ್ಷೇತ್ರದಲ್ಲಿಯೂ ಪುರುಷರನ್ನೇ ಅಗ್ರಮಾನ್ಯರಾಗಿ ಪರಿಗಣಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಶೇ. 70 ಮಹಿಳೆಯರು ಕೆಲಸ ಮಾಡುತ್ತಾರೆ.

ಕೃಷಿ ಕೆಲಸದಲ್ಲಿ ಮಹಿಳೆಯರ ಪಾತ್ರ :

ಭೂಮಿಯನ್ನು ಕೃಷಿಗೆ ಸಿದ್ಧಪಡಿಸುವಿಕೆ	ಶೇ. 32
ಬೀಜ ಬಿತ್ತನೆ	ಶೇ. 76
ನಾಟ	ಶೇ. 90
ಸಾಗಾಣಿಕೆ	ಶೇ. 82
ಆಹಾರ ಸಂಸ್ಕರಣೆ	ಶೇ. 100
ಹಾಲು ಉತ್ಪಾದನೆ / ಹೈನುಗಾರಿಕೆ	ಶೇ. 69

ದೇಶದಲ್ಲಿ ಒಟ್ಟು 27 ಮಿಲಿಯ ಕೃಷಿ ಕೂಲಿಕಾರ ಮಹಿಳೆಯರಿದ್ದಾರೆ. 20 ಮಿಲಿಯ ಪಶುಸಂಗೋಪನೆಯಲ್ಲಿ, 75 ಮಿಲಿಯ ಹೈನುಗಾರಿಕೆಯಲ್ಲಿ ತೊಡಗಿದ್ದರೆ, ಗ್ರಾಮೀಣ ವಲಯದಲ್ಲಿ ಶೇ. 35 ಕುಟುಂಬ ನಿರ್ವಹಣೆಯನ್ನು ಮಹಿಳೆಯರೇ ಮಾಡುತ್ತಾರೆ.

ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರು :

ಒಟ್ಟು ಮಹಿಳೆಯರ ಸಂಖ್ಯೆಯಲ್ಲಿ ಶೇ. 32.4 ಮಹಿಳೆಯರು ಈ ಕ್ಷೇತ್ರದಲ್ಲಿ ಇದ್ದಾರೆ. ಅದರಲ್ಲಿ ಶೇ. 95.8 ಅಸಂಘಟಿತ ವಲಯದಲ್ಲಿ. ಶೇ. 4.2 ಸಂಘಟಿತ ಕ್ಷೇತ್ರದಲ್ಲಿದ್ದಾರೆ. 1997ರ ಅಂಕಿ-ಅಂಶಗಳ ಪ್ರಕಾರ ಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಶ್ರಮ ಶಕ್ತಿಯ ಶೇ. 16.4 ಮಹಿಳೆಯರು ಅದರಲ್ಲಿ ಶೇ. 62 ಸಾರ್ವಜನಿಕ ಉದ್ದಿಮೆಗಳಲ್ಲಿ ಇದ್ದಾರೆ ಎಂದಲೆ ದೇಶದ ಆರ್ಥಿಕತೆಗೆ ಬಂಡವಾಳ ಒದಗಿಸುವ ಕ್ಷೇತ್ರಲ್ಲಿ ಮಹಿಳೆಯರ ಪಾತ್ರ ಗಣನೀಯವಾಗಿದೆ ಎಂಬುದು ವ್ಯಕ್ತವಾಗುತ್ತದೆ.

ಇನ್ನು ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಮತ್ತು ಅಸಂಘಟಿತ ವಲಯಕ್ಕೆ ಸೇರುವ ಮತ್ತು ಹೆಚ್ಚಾಗಿ ಗೃಹ ವಲಯದಲ್ಲಿಯೇ ನಡೆಯುವ ಬೀಡಿ, ಅಗರಬತ್ತಿ, ಬಿದಿರು, ಬಳೆ, ಬೊಂಬೆ... ಮುಂತಾದ ಕೆಲಸಗಳಲ್ಲಿ ಶೇ. 95ಕ್ಕಿಂತಲೂ ಹೆಚ್ಚು ಮಹಿಳೆಯರೇ ಕೆಲಸ ಮಾಡುತ್ತಾರೆ. ಗಣಿಗಾರಿಕೆಯಲ್ಲಿ ಶೇ. 7, ಪ್ಲಾಂಟೇಷನ್‌ಗಳಲ್ಲಿ ಶೇ. 36 ಮಹಿಳೆಯರು ಕೆಲಸ ಮಾಡುತ್ತಾರೆ.

ಹೀಗೆ ಒಟ್ಟಾರೆ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರಾದರೂ ಇಂದಿಗೂ ಮಹಿಳೆಯ

ದುಡಿಮೆಯ ಗಳಿಕೆಯನ್ನು ಪೂರಕ ಗಳಿಕೆಯಾಗಿ ಮಾತ್ರ ಪರಿಗಣಿಸಲಾಗುತ್ತದೆ ಮತ್ತು ನೇರ ಹಣ ಸಂಪಾದಿಸಿದ, ಆದರೆ ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವ - ಮಕ್ಕಳ ಪಾಲನೆ, ಪೋಷಣೆ ಮತ್ತಿತರ ಗೃಹ ಕೃತ್ಯಗಳು ಕೆಲಸವೆಂದೇ ಪರಿಗಣಿಸಲ್ಪಡುತ್ತಿಲ್ಲ.

ಜಾಗತೀಕರಣ ಮತ್ತು ಮಹಿಳೆ

80ರ ದಶಕದಲ್ಲಿ ಕೇಳಿ ಬರತೊಡಗಿದ ಜಾಗತೀಕರಣ-ಉದಾರೀಕರಣ ಪ್ರಕ್ರಿಯೆಗಳು 90ರ ದಶಕದಲ್ಲಿ ಗಂಭೀರವಾಗಿ ಅನುಷ್ಠಾನಕ್ಕೆ ಬಂದಿತು. ಭೂಮಿಗೆ ಸ್ವರ್ಗವಿಳಿಸುವ ಕನಸುಗಳನ್ನು ಬಿತ್ತಿದ ಈ ಜಾಗತೀಕರಣ ನೀತಿಯ ದುಷ್ಪರಿಣಾಮ ಕೇವಲ 10 ವರ್ಷಗಳಲ್ಲಿ ಎಲ್ಲ ದೇಶಗಳ, ಎಲ್ಲ ಕ್ಷೇತ್ರಗಳ ಮೇಲೆ ಆಗಿದೆ ಎಂಬುದು ದೇಶ-ವಿದೇಶಗಳ ಅನುಭವಗಳಿಂದ ದೃಢಪಟ್ಟಿದೆ.

ಒಂದು ಕಾಲದಲ್ಲಿ 'ಏಷ್ಯಾದ ಹುಲಿ' ಎಂದೇ ಪ್ರಖ್ಯಾತವಾಗಿದ್ದ ದ. ಕೊರಿಯಾದಂತಹ ದೇಶಗಳೂ ನೆಲ ಕಚ್ಚಿವೆ. ಜಪಾನ್‌ನಂತಹ ಮುಂದುವರಿದ ದೇಶಗಳ ಆರ್ಥಿಕತೆ ಕೂಡ ಕುಸಿಯುತ್ತಿದೆ.

ಏನೀ ಜಾಗತೀಕರಣ? : ದೇಶ ದೇಶಗಳ ಮಧ್ಯೆ ಮುಕ್ತ ಬಂಡವಾಳದ ಅರಿವು ಎಂಬ ವ್ಯಾಖ್ಯಾನದೊಂದಿಗೆ ಉದಾರ ನೀತಿಯ ಅನುಷ್ಠಾನದ ಒತ್ತಡದೊಂದಿಗೆ ಬಂದ ನೀತಿ ಇದು. ಆಳುವ ಸರಕಾರಗಳಿಗೆ ಯಾವುದೇ ಸಾಮಾಜಿಕ ಜವಾಬ್ದಾರಿಗಳಿಲ್ಲದ, ಎಲ್ಲವನ್ನೂ ಖಾಸಗೀಕರಣಗೊಳಿಸುವ ಮೂಲಕ ವೈಯಕ್ತಿಕ ಲಾಭ ಗಳಿಕೆಯೊಂದೇ ಜೀವನದ ಪರಮೋದ್ದೇಶವೆಂದ ತತ್ವವನ್ನು ಸಾರುವ ನೀತಿ ಇದು. ರಫ್ತಿಗೆ ಆದ್ಯತೆ ನೀಡುವ ಈ ಉದಾರೀಕರಣದ ಪ್ರಕ್ರಿಯೆಯ ಪ್ರಾರಂಭದಲ್ಲಿ ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಈ ಉದ್ಯಮಗಳ ವಹಿವಾಟು ಉಚ್ಛ್ರಾಯಕ್ಕೇರಿ ಈ ನೀತಿ ಅಸಂಖ್ಯ ಉದ್ಯೋಗವಕಾಶ ಸೃಷ್ಟಿಸುವುದೆಂಬ ಭ್ರಮೆಯನ್ನು ಹುಟ್ಟಿಸಿತು. ಜೊತೆ ಜೊತೆಗೆಯೆ ಇದು ಮಹಿಳೆಯರಿಗೆ ಉದ್ಯೋಗ ಕಲ್ಪಿಸುತ್ತದೆಂಬ ಅಭಿಪ್ರಾಯವನ್ನೂ ಹುಟ್ಟುಹಾಕಿತು. ಕಾರಣ-ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ರಫ್ತು ಆದ್ಯತಾ ಜವಳಿ ಉದ್ಯಮದಲ್ಲಿ-ಬದುಕಿನ ಅನಿವಾರ್ಯತೆಯೂ ಮುಖ್ಯ ಕಾರಣವಾಗಿ ಹೆಚ್ಚು ಹೆಚ್ಚು ಮಹಿಳೆಯರು ಕುಟುಂಬದ ಚೌಕಟ್ಟಿನಿಂದಾಚೆ ಬಂದು ಉದ್ಯೋಗ ಕ್ಷೇತ್ರದಲ್ಲಿ ಪಾಲ್ಗೊಳ್ಳಲಾರಂಭಿಸಿದರು. ಆದರೆ ಬಹಳ ಬೇಗ ಈ ಭ್ರಮೆ ಒಡೆದು ವಾಸ್ತವತೆ ಅರಿವಾಯಿತು. ಅದೇನೆಂದರೆ ಯಾಂತ್ರಿಕ ತಂತ್ರಜ್ಞಾನ, ನೈಪುಣ್ಯ ವಿದ್ಯಾಭ್ಯಾಸಗಳಿಲ್ಲದ ಕಾರಣದಿಂದ ಕಡಿಮೆ ವೇತನಕ್ಕೆ ಮಹಿಳೆಯರಿಂದ ಹೆಚ್ಚು ದುಡಿಸಿಕೊಳ್ಳುವ ಸಾಧ್ಯತೆಗಳು ಮತ್ತು ಸಮಾಜ ಮಹಿಳೆಯರನ್ನು ಇದುವರೆಗೆ ನಡೆಸಿಕೊಂಡ ರೀತಿಯ ಕಾರಣದಿಂದಾಗಿ ಸಹಜವಾಗಿಯೇ ಮುನ್ನುಗ್ಗಿ ಹೋರಾಡಲು, ಅನ್ಯಾಯಗಳನ್ನು ಪ್ರತಿಭಟಿಸಲು ಮಹಿಳೆಯರಿಗಿರುವ ಹಿಂಜರಿಕೆ ಇವುಗಳನ್ನು ಬಹಳ ನಾಜೂಕಾಗಿ ಉಪಯೋಗಿಸಿಕೊಂಡ ವ್ಯವಸ್ಥೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಉದ್ಯಮ ಕ್ಷೇತ್ರದಲ್ಲಿ ಕಾಣಲು ಸಾಧ್ಯವಾಯಿತು. ಆದರೆ ಈ ಪಾಲ್ಗೊಳ್ಳುವಿಕೆ ಮಹಿಳೆಯರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲು ಸಾಧ್ಯವಾಗಲಿಲ್ಲ. ಕಾರಣ ಜಾಗತೀಕರಣ ನೀತಿಯಲ್ಲಿನ 'ಅಡಗಿದ ತತ್ವ' (hidden agenda) 'ಉಳ್ಳವರ ಪರವಾದ'ವಾದ್ದರಿಂದ ಎಲ್ಲ ದೇಶಗಳಲ್ಲಿ ಹಣದುಬ್ಬರ ಬೆಲೆ ಏರಿಕೆಗಳು ಕುಟುಂಬಗಳ ಆರ್ಥಿಕತೆಯ ಮೇಲೆ ತೀವ್ರ ದುಷ್ಪರಿಣಾಮ ಬೀರತೊಡಗಿದವು.

ಮಹಿಳೆಯರ ಮೇಲೆ ಪರಿಣಾಮ :

- 1998ರಲ್ಲಿ ಜಪಾನ್ ದೇಶದ ಐಬಿಎಂ ಕಂಪೆನಿಯಲ್ಲಿ 5000 ಜನ ಕೆಲಸ ಕಳೆದುಕೊಂಡರು. ಗರ್ಭಿಣಿ ಸ್ತ್ರೀಯರು ಅದರಲ್ಲಿ ಮೊದಲಿಗರು.
- 50 ವರ್ಷ ದಾಟಿದವರು ಹೆಚ್ಚು ವೇತನಗಳಿಸುವರೆಂಬ ಕಾರಣಕ್ಕಾಗಿಯೇ ಅವರನ್ನು ಕೆಲಸದಿಂದ ತೆಗೆಯಲಾಯಿತು. ಅದರ ಬದಲಿಗೆ ಮಾಡಿಕೊಳ್ಳುವ ನೇಮಕ ಕಾಂಟ್ರಾಕ್ಟ್ ಮಾದರಿಯದಾಗಿದ್ದು ವೇತನ, ಉದ್ಯೋಗಗಳ ಭದ್ರತೆಯ ಪ್ರಶ್ನೆ ಇಲ್ಲ.
- 1999ರಲ್ಲಿ ತೈವಾನ್‌ನಲ್ಲಿ ಅಂತರರಾಷ್ಟ್ರೀಯ ಬ್ಯಾಂಕುಗಳ ಜೊತೆ ಪೈಪೋಟಿ ಎದುರಿಸಲು ಸಜ್ಜಾಗಲು ಹಲವಾರು ದೊಡ್ಡ ಬ್ಯಾಂಕುಗಳನ್ನು ಒಂದರೊಳಗೊಂದು ಸೇರ್ಪಡೆ ಮಾಡಲಾಯಿತು. ಹಾಗೆ ಮಾಡುವಾಗ ಶೇ. 50 ಮಹಿಳೆಯರನ್ನು ಕೆಲಸದಿಂದ ಹೊರಹಾಕಿ ಕಾಂಟ್ರಾಕ್ಟ್ ಕೆಲಸಗಾರರನ್ನು ನೇಮಿಸಿಕೊಳ್ಳಲಾಯಿತು.
- ಹಾಂಗ್‌ಕಾಂಗ್‌ನಲ್ಲಿ ಪುನರ್ರಚನೆಯ ಹೆಸರಿನಲ್ಲಿ ನಾಲ್ಕು ಲಕ್ಷ ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕಲಾಯಿತು. ಇದರ ಪರಿಣಾಮ ಮಧ್ಯ ವಯಸ್ಕ ಮಹಿಳೆಯರ ಮೇಲಾಯಿತು.
- ನಮ್ಮ ದೇಶದಲ್ಲಿ ಕೋಲ್ ಇಂಡಿಯಾದಲ್ಲಿ ಹೆಚ್ಚು ಸಂಖ್ಯೆಯ ಮಹಿಳಾ ನೌಕರರ ಮೇಲೆ ಒತ್ತಡ ಹೇರಿ ಕೆಲಸ

ಬಿಡುವಂತೆ ಸ್ವಯಂ ನಿವೃತ್ತಿ ಪಡೆಯುವಂತೆ ಮಾಡಲಾಯಿತು. ಸುಮಾರು 50,000 ಮಹಿಳೆಯರು ಕೆಲಸ ಕಳೆದುಕೊಂಡಿದ್ದಾರೆ.

- ಗ್ರಿಂಡ್ಲೇಸ್ ಬ್ಯಾಂಕ್‌ನಲ್ಲಿ ಉದ್ಯೋಗಿಗಳ ಸಂಖ್ಯೆಯನ್ನು ಕಡಿತಗೊಳಿಸಿ 1200ಕ್ಕೆ ಇಳಿಸಲಾಗಿದೆ ಮತ್ತು 2000-3000 ವೇತನಕ್ಕೆ ಕಾಂಟ್ರಾಕ್ಟ್ ವರ್ಕರ್ಸ್‌ನ್ನು ತೆಗೆದುಕೊಳ್ಳಲಾಗಿದೆ.
- ಹೊಸ ತಂತ್ರಜ್ಞಾನ ಅಳವಡಿಸುವ ಹೆಸರಿನಲ್ಲಿ ಫಾರ್ಮಾಸುಟಿಕಲ್ ಕ್ಷೇತ್ರದಲ್ಲಿ ಬಾಟ್ಲಿಂಗ್, ಪ್ಯಾಕೇಜಿಂಗ್, ಲೇಬಲಿಂಗ್ ವಿಭಾಗಗಳ ಲಕ್ಷಾಂತರ ಮಹಿಳಾ ಉದ್ಯೋಗಿಗಳನ್ನು ನಿರ್ದಾಕ್ಷಿಣ್ಯವಾಗಿ ಬೀದಿಪಾಲು ಮಾಡಲಾಗಿದೆ.

ಎಚ್‌ಎಂಟಿಯಲ್ಲಿ ಜಾರಿಗೆ ತಂದ ಸ್ವಯಂ ನಿವೃತ್ತಿ ಯೋಜನೆಯಡಿ ಮಹಿಳೆಯರಿಗೆ ನಿವೃತ್ತಿ ತೆಗೆದುಕೊಳ್ಳಲು ಒತ್ತಡ ಹೇರಲಾಗುತ್ತಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೂಡಾ ಈಗ ಜಾರಿಗೆ ಬರುತ್ತಿರುವ ಸ್ವಯಂ ನಿವೃತ್ತಿ ಯೋಜನೆಯಲ್ಲಿ-ವರ್ಗಾವಣೆ, ಕೆಲಸದ ಒತ್ತಡ ಹೆಚ್ಚುವ ಭಯ ಹುಟ್ಟಿಸಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಹೊರ ಹೋಗುವಂತೆ ಮಾಡಲಾಗುತ್ತಿದೆ.

ರಫ್ತು ವಲಯದಲ್ಲಿ ಉದ್ಯಮಗಳಲ್ಲಿ ಮಹಿಳೆಯರು :

ಜಾಗತೀಕರಣದ ಮೂಲ ಉದ್ದೇಶವೇ ಮುಕ್ತ ರಫ್ತು ಆಮದು. ರಫ್ತಿಗೆ ಆದ್ಯತೆ ನೀಡುವ ದೃಷ್ಟಿಯಿಂದಲೇ ಸೃಷ್ಟಿಯಾದ ರಫ್ತು ವಲಯಗಳಲ್ಲಿ ಈ ಹಿಂದೆ ಇದ್ದ ಎಲ್ಲ ಸುರಕ್ಷಾ ಕ್ರಮಗಳನ್ನು ಗಾಳಿಗೆ ತೂರಲಾಗಿದೆ. ಸುರಕ್ಷಿತವಲ್ಲದ ಜಾಗಗಳಲ್ಲಿಯೂ ಕೂಡಾ ರಾತ್ರಿ ಪಾಳಿಗಳಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಕೆಲಸಕ್ಕೆ ಸೇರಿಸಿಕೊಳ್ಳುವ ಮುನ್ನ ಮಹಿಳೆಯರು ಗರ್ಭವತಿಯರೇ ಎಂದು ಪರೀಕ್ಷಿಸಿ, ಫಲಿತಾಂಶ ಸಕಾರಾತ್ಮಕವಾಗಿ ಬಂದರೆ ಕೆಲಸವನ್ನು ನಿರಾಕರಿಸಲಾಗುತ್ತದೆ. ಕೆಲಸಕ್ಕೆ ಸೇರಿದ ನಂತರ ಅವರು ಮದುವೆಯಾದರೆ ಅವರನ್ನು ಕೆಲಸದಿಂದ ಹೊರ ಹಾಕಲಾಗುತ್ತದೆ. ದಿಲ್ಲಿಯ ನೊಯ್ಡ ಕೈಗಾರಿಕಾ ಪ್ರದೇಶದಲ್ಲಿ ಈ ಎಲ್ಲ ವಿಧಾನಗಳ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದ್ದು - ಮಹಿಳೆಯರು ದಿನವೊಂದಕ್ಕೆ ಎಷ್ಟು ಬಾರಿ ಶೌಚಾಲಯವನ್ನು ಉಪಯೋಗಿಸುತ್ತಾರೆಂಬುದನ್ನು ಪುಸ್ತಕ ಒಂದರಲ್ಲಿ ದಾಖಲಿಸಿಕೊಳ್ಳಲಾಗುತ್ತಿದೆ. ಉಪಯೋಗಿಸಿದ ಒಟ್ಟು ಸಮಯ 5 ನಿಮಿಷಗಳನ್ನು ಮೀರಿದರೆ ಅವರ ಮೇಲೆ ಶಿಸ್ತು ಕ್ರಮಕೈಗೊಳ್ಳುವ ಬೆದರಿಕೆ ಹಾಕಲಾಗುತ್ತಿದೆ.

ಸಿಡಬ್ಲ್ಯುಟಿಎಸ್ ನಡೆಸಿದ ಅಧ್ಯಯನದಿಂದ ಬೆಳಕಿಗೆ ಬಂದ ಅಂಶ 11 ವರ್ಷ ವಯಸ್ಸಿನ ಹೆಣ್ಣು ಮಕ್ಕಳನ್ನು ದಿನವೊಂದಕ್ಕೆ 10 ಗಂಟೆಗಳಿಗೂ ಹೆಚ್ಚು ಕಾಲ ದುಡಿಸಿಕೊಂಡು ತಿಂಗಳಿಗೆ 700 ರಿಂದ 900 ರೂ.ಗಳನ್ನು ಮಾತ್ರ ನೀಡಲಾಗುತ್ತಿದೆ. ಕುಟುಂಬದಲ್ಲಿ ಯಾರೂ ಇಲ್ಲದ ಒಂಟಿ ಹೆಣ್ಣು ಮಕ್ಕಳು ಹೆಚ್ಚು ವಿಧೇಯರಾಗಿರುತ್ತಾರೆಂಬ ಕಾರಣಕ್ಕಾಗಿ ಅವರಿಗೆ ಪ್ರಾಶಸ್ತ್ಯ ನೀಡಲಾಗುತ್ತಿದೆ. ಬೇಲಿಗಳನ್ನೆ ಹಾಕಿದ ಕಟ್ಟಡಗಳೊಳಗೆ ಇರುವ ಈ ಕಚೇರಿಗಳಿಗೆ ಹೊರಗಿನವರಿಗೆ ಯಾವುದೇ ಕಾರಣಕ್ಕೂ ಪ್ರವೇಶವಿಲ್ಲ. ಸಂಘಟಿತರಾಗುವ, ಸಂಘಟನೆ ಕಟ್ಟುವ ಕೆಲಸವನ್ನು ಕಲ್ಪನೆ ಮಾಡಲೂ ಸಾಧ್ಯವಿಲ್ಲ. ಕಾರ್ಮಿಕ ಸುರಕ್ಷಾ ಕಾನೂನುಗಳೆಲ್ಲ ಉದಾರೀಕರಣ ನೀತಿ ಲಾಭಕೋರತನಕ್ಕೆ ವಿರುದ್ಧವಾಗಿರುವ ಹಿನ್ನೆಲೆಯಲ್ಲಿ ಅವುಗಳಿಗೆ ಈ ನೀತಿಯಡಿ ಅವಕಾಶಗಳಿಲ್ಲ.

ಈ ಎಲ್ಲ ಅಮಾನುಷ ಪರಿಸ್ಥಿತಿಯ ಜೊತೆ ಅವರ ಮೇಲೆ ಲೈಂಗಿಕ ದೌರ್ಜನ್ಯಗಳೂ ನಡೆಯುತ್ತವೆ. ಆದರೆ ಬೆಲೆ ಏರಿಕೆ, ಮನೆಯಲ್ಲಿ ದುಡಿಯುತ್ತಿದ್ದ ವ್ಯಕ್ತಿಗಳು ಹೊಸ ನೀತಿಯಿಂದಾಗಿ ಕೆಲಸ ಕಳೆದುಕೊಂಡು ಬೀದಿಪಾಲಾದ ಹಿನ್ನೆಲೆ.... ಹೀಗೆ ಹಲವಾರು ಅನಿವಾರ್ಯತೆಗಳಿಂದ ನಿರುಪಾಯರಾಗಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ.

ಸಂಘಟಿತ ವಲಯದಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೆ ತಂದು ಮಹಿಳೆಯರಿಗೆ ಮನೆಯ ದಾರಿ ತೋರಿಸಲಾಗುತ್ತಿದೆ.

ಕೃಷಿ ಭೂಮಿಯನ್ನು ಅತ್ಯಂತ ಕಡಿಮೆ ದರಕ್ಕೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರಲಾಗುತ್ತಿದೆ. ಆಹಾರ ಬೆಳೆಗಳಿಂದ ವಾಣಿಜ್ಯ ಬೆಳೆಗಳಿಗೆ ಬದಲಾಯಿಸಲು ಸರಕಾರವೇ ಪ್ರೋತ್ಸಾಹಿಸುತ್ತಿರುವ ಹಿನ್ನೆಲೆಯಲ್ಲಿ ಕೃಷಿಯನ್ನೇ ಅವಲಂಬಿಸಿದ ಮಹಿಳೆಯರು ಬೀದಿ ಪಾಲಾಗಿದ್ದಾರೆ. ●

○ ಕೆ. ಎಸ್. ವಿಮಲಾ
ಜನವಾದಿ ಮಹಿಳಾ ಸಂಘಟನೆ

> ***ಜಾಗತೀಕರಣವು, ಆಧುನಿಕತೆ, ಪ್ರಗತಿಯ ಹೆಸರಿನಲ್ಲಿ ಮಹಿಳೆಯರನ್ನು ಗುಲಾಮರಾಗಿಸಲು ಶೋಷಣೆಯ ಹೊಸ ರೂಪಗಳನ್ನು ತಂದುಕೊಡುತ್ತದೆ.***

ಪಿತೃ ಪ್ರಧಾನತೆಯನ್ನು ಅಲ್ಲಾಡಿಸದ ಜಾಗತೀಕರಣ

ಜಾಗತೀಕರಣವನ್ನು ಅರ್ಥಮಾಡಿಕೊಳ್ಳುವ ಮೊದಲು, ನಾವು ಜೀವಿಸುತ್ತಿರುವ ಸಮಾಜದತ್ತ ಕಣ್ಣು ಹಾಯಿಸಿದಾಗ ನಮಗೆ ಕಾಣುವುದು ಕ್ರೂರ, ಆತಂಕಮಯ ಸಮಾಜ. ಯಾರಿಗಾಗಿ ಜಗತ್ತನ್ನು ಕಟ್ಟಬೇಕು, ಅವರು ಹುಟ್ಟಿದ ಕೂಡಲೆ ಚಿವುಟಿ ಹಾಕಲಾಗುತ್ತಿದೆ. 1947ರಲ್ಲಿ ಒಂದು ವಿಭಜನೆಯಾದರೆ ಇಂದು ಹೆಚ್ಚು ಹೀನಾಯವಾದ ವಿಭಜನೆಗಳಾಗುತ್ತಿವೆ. ಹೊಸ ಶತಮಾನಕ್ಕೆ ಕಾಲಿಟ್ಟಾಯಿತು. ಆದರೂ ಆಧುನಿಕತೆ ಜಾತಿಯತೆಯ ನಾತವನ್ನು ಕಳೆದುಕೊಂಡಿಲ್ಲ. ಜಾಗತೀಕ ವರ್ಗವು (globalised class) ಜಾತಿಯ ಅಚ್ಚೊತ್ತಿಕೊಂಡಿದೆ. ಆಧುನಿಕತೆಯ ತಳಪಾಯವೆ ದಾರಿದ್ರ್ಯವನ್ನಾಧರಿಸಿದೆ. ಇದು ಕಣ್ಣಿಗೆ ರಾಚುವುದು ನಮ್ಮ ದೇಶದ ಮಹಿಳೆಯರ ಸ್ಥಿತಿಯಲ್ಲಿ. ಈ ದುಡಿಯುವ ಮಹಿಳೆಯ್ರರ ಶ್ವಾಸಕೋಶ ಉಸಿರುಗಟ್ಟಿದೆ, ಸುಗಂಧ ಸೂಸುವ, ಕೋಮಲೆಯರು ಧರಿಸುವ ಉಡುಗೆ (brocades) ಹೆಣೆದು ಮಹಿಳೆಯರ ಕೈ ಹುಣ್ಣಾಗಿ ಬಿರುಕು ಬಿಟ್ಟಿವೆ. ಬಡ ದುಡಿಯುವ ಮಹಿಳೆಯರ ಬೆವರು, ಕಣ್ಣೀರು ಶ್ರೀಮಂತ ಮಹಿಳೆಯರ ತೈಲ ಸುಗಂಧವಾಗಿವೆ. ಈ ಹುಚ್ಚು ಸಮಾಜದಲ್ಲಿ ಉದಾರವಾದಿ ಧೋರಣೆಗಳು ಉಳಿಗಮಾನ್ಯ ಮೌಲ್ಯಗಳೊಂದಿಗೆ ತಳಕು ಹಾಕಿಕೊಂಡಿವೆ. ಇಂತಹ ಸಮಾಜದಲ್ಲಿ ಒಂದೆಡೆ ಮಹಿಳೆಯರು, ಕನಸು ಕಾಣಲು, ಆಕಾಂಕ್ಷಿಗಳಾಗಲು ಉತ್ತೇಜಿಸಲಾದರೂ, ಮತ್ತೊಂದು ಕಡೆ ಅದೇ ಕಾರಣಕ್ಕೆ ಶಿಕ್ಷೆ ಅನುಭವಿಸುತ್ತಿದ್ದಾರೆ.

ಮೈಕ್ರೊಚಿಪ್ ಕ್ರಾಂತಿಯು ಯುವ ಜನತೆಯ ಮನಸ್ಸು ಸಂವೇದನೆಗಳ ಮೇಲೆ ಪ್ರಭಾವ ಬೀರಿ ಅವರುಗಳನ್ನು ಮನೊರಂಜನೆಯ ದಾಸರನ್ನಾಗಿಸಿದೆ. ಅತಿಮಾನವ ನಾಯಕರುಗಳ ಕಲ್ಪನೆಯನ್ನು ಬಿತ್ತಿ, ತಮ್ಮ ಸಾಮರ್ಥ್ಯಗಳನ್ನೆ ಕಳೆದುಕೊಂಡು ನಿರುತ್ಸಾಹಿಗಳನ್ನಾಗಿ ಮಾಡುತ್ತಿದೆ. ಜಾಗತಿಕ ಮಾರುಕಟ್ಟೆಗೆ ತಕ್ಕಾಗಿ ಯುವ ಜನತೆಯ ಪ್ರಜ್ಞೆಯನ್ನು ರೂಪಿಸಲಾಗುತ್ತಿದೆ. ಇದರಿಂದಾಗೆ ನಾವು ನಿರ್ಲಿಪ್ತ ವೀಕ್ಷಕರಾಗುಳಿದು, ನಮ್ಮ ಅಸ್ತಿತ್ವದಿಂದಲೆ ಬದಿಗೊತ್ತಲ್ಪಡುತ್ತಿದ್ದೇವೆ.

ಈ ಕ್ರೂರ ನಿಜ ಸ್ಥಿತಿಯ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಬೇಕು, ಜಾಗತೀಕರಣವು ಇಡಿ ಜಗತ್ತೆ ಒಂದು ಗಡಿ ಇಲ್ಲದ, ತಡೆ ಇಲ್ಲದ ಆರ್ಥಿಕತೆ (economy) ಎಂದು ಹೇಳುತ್ತದೆ. ವಿನಿಮಯ (exchange)ವೆಂಬ ಒಂದೇ ಒಂದು ಜಾಗತಿಕ ತರ್ಕವನ್ನು ಆಧರಿಸಿದ ಮಾರುಕಟ್ಟೆಗಳ ಒಂದು ಗೂಡುಪಿಕೆಯಾಗಿದೆ. ಇಂತಹ ಮಾರುಕಟ್ಟೆಯನ್ನು ಹೊಂದಿದೆ ಮೈಕ್ರೊಚಿಪ್ ಕ್ರಾಂತಿಯು ಹುಟ್ಟುಹಾಕಿರುವ ಬಂಡವಾಳವು ಉತ್ಪಾದನೆಯನ್ನು ಅವಲಂಬಿಸದೆ, speculation (ಊಹಾಪೋಹಗಳು)ಅನ್ನು ಅವಲಂಬಿಸಿದೆ.

ಜಾಗತೀಕರಣವು ವೈರುಧ್ಯದ ಪ್ರಪಂಚಕ್ಕೆ ಒತ್ತು ನೀಡುತ್ತದೆ. ಈ ವೈರುಧ್ಯಕ್ಕೂ ಜಾತಿಯತೆಗೂ ಆಳವಾದ ಸಂಪರ್ಕವಿದೆ. ಇದು ದೈಹಿಕ, ಮಾನಸಿಕ ದುಡಿಮೆಯಾಧರಿಸಿದ ಬಡವ - ಭಲ್ಲಿದ ಭೇದಕ್ಕೆ ಕಾರಣವಾಗುತ್ತಿದೆ. ಜಾಗತೀಕರಣ ಮತ್ತದರ ಪರಿಣಾಮಗಳು ಮಹಿಳೆಯರನ್ನು ಕುಟುಂಬದ ಭಾಗವಷ್ಟೇ ಆಗಿ ಅಲ್ಲ ಅವರ ಅಸ್ತಿತ್ವಕ್ಕೇ ಭೀತಿಯೊಡ್ಡಿದೆ. ಹೊಸ ಆರ್ಥಿಕ ಕ್ರಾಂತಿ ಎನ್ನುವ 1991ರ ಹೊಸ ಆರ್ಥಿಕ ನೀತಿಯು ಬೃಹತ್ ಸಾಲವನ್ನು ತೀರಿಸಲು ಮಾಡಿದ ಪ್ರಯತ್ನ. ಸಾಲ ಹಿಂದೆ ಬರುವ ಬಗ್ಗೆ ಅನುಮಾನವಿದ್ದ ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು SAP (Structural Adjustment) ಅಂದರೆ ರಾಚನಿಕ ಹೊಂದಾಣಿಕೆಯ ಷರತ್ತುಗಳ್ನು ಮುಂದಿಟ್ಟಿತು.

1991ರ ಮುಂಚೆಯೆ ಭಾರತದ ರೂಪಾಯಿ ಅಪಮೌಲ್ಯೀಕರಣ (devaluation) ಗೊಂಡಿತ್ತು. ಇದರಿಂದಾಗಿ ನಮ್ಮ ರಫ್ತುಗಳು ಅಗ್ಗವಾಗಿ, ಆಮದು ದುಬಾರಿಯಾಗಿಬಿಟ್ಟವು. ನಮ್ಮ ಶ್ರಮದ ಬೆಲೆ ಅಗ್ಗವಾದದ್ದು, ಅಪಮೌಲ್ಯೀಕರಣದಿಂದಾದ ದೊಡ್ಡ ಹೊಡೆತ, ವಿದೇಶಿ ಕಂಪನಿಗಳು ನಮ್ಮ ದೇಶಕ್ಕೆ ಧಾರಳವಾಗಿ ಬರುವಂತೆ ಬಾಗಿಲುಗಳನ್ನು ತೆರೆಯಲಾಯಿತು. ರಫ್ತು ಮಾಡುವ ವಸ್ತುಗಳಿಗೆ ತೀರಾ ಕಡಿಮೆ ಕೂಲಿಯ ಶ್ರಮವನ್ನು ಉಪಯೋಗಿಸುವುದು ಪ್ರಾರಂಭವಾಯಿತು. ಈ ಆರ್ಥಿಕ ಬದಲಾವಣೆಯಿಂದ ವಿದೇಶಿ ವಿನಿಮಯ ಹೆಚ್ಚಿ, ಸಾಲ ತೀರಿಸಲು ಸಾಧ್ಯವಾಗುತ್ತದೆ ಎಂಬ ಕಾರಣವನ್ನು ನೀಡಲಾಯಿತು. ಹೀಗಾಗಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಾದ ದುಡ್ಡಿಗೆ ಕತ್ತರಿ ಹಾಕುತ್ತಿದ್ದಾರೆ. ಆದರೆ ರಕ್ಷಣಾ ಕಾರ್ಯಗಳಿಗೆ ಮಾತ್ರ ಯಾವುದೇ ಕಡಿತವಿಲ್ಲ. ಕೃಷಿ ರಂಗಕ್ಕೆ ನೀಡಲಾಗುವ ಸಬ್ಸಿಡಿಗಳನ್ನು ಕಡಿಮೆ ಮಾಡಿ, ನಮ್ಮ ಶ್ರಮ, ಭೂಮಿ, ನೀರು, ಗಾಳಿ ಎಲ್ಲವನ್ನೂ ಅಗ್ಗದ ಬೆಲೆಗೆ

ಮಾರಲಾಗುತ್ತಿದೆ. ಅಗ್ಗದ ಶ್ರಮವನ್ನು ಮಹಿಳೆಯರು ಹಾಗೂ ಮಕ್ಕಳಿಂದ ಪಡೆಯದೆ ಇನ್ನಾರಿಂದ ಗಳಿಸಲು ಸಾಧ್ಯ? ಹೀಗೆ ಈ ಬದಲಾವಣೆಗೆ ಮಹಿಳೆಯರು, ಮಕ್ಕಳು ಆಹುತಿಗೊಂಡರು.

ಸಾಮಾಜಿಕ ಕಲ್ಯಾಣ ಕಾರ್ಯಗಳಿಗೆ ಕತ್ತರಿ ಪ್ರಯೋಗವೆಂದರೆ ಈಗಾಗಲೇ ಇರುವ ಕನಿಷ್ಠ ಆರೋಗ್ಯ ಸೇವೆಯ ಅವಕಾಶಗಳೂ ದುಸಾಧ್ಯವೆಂದು ಅರ್ಥ. ದೊಡ್ಡ ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಶಕ್ತಿಯಿರದ. ಮಹಿಳೆಯರಿಗೆ ಯಾವುದೇ ಆರೋಗ್ಯ ವ್ಯವಸ್ಥೆಯಿರುವುದಿಲ್ಲ. ಈಗಾಗಲೆ ಕುಟುಂಬ ಯೋಜನೆ ಒಂದನ್ನು ಬಿಟ್ಟು ಆರೋಗ್ಯ ಸೇವೆ, ಶಿಕ್ಷಣ ಹಾಗೂ ಮಧ್ಯಾಹ್ನದ ಊಟದ ನಿಯಮಗಳಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಉದಾಹರಣೆಗೆ ಪೆರುವಿನಲ್ಲಿ ಆರ್ಥಿಕ ಹೊಂದಾಣಿಕೆ (Eco adjustment) ಕಾರ್ಯಕ್ರಮದಿಂದ ಪ್ರತಿ ವರ್ಷ 20,000 ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ರೋಗ ನಿರೋಧಕ ಲಸಿಕೆ (Immunisation)ಗೆ ಮೀಸಲಾದ ಹಣವನ್ನು ಕಡಿಮೆ ಮಾಡಿರುವ ಕಾರಣದಿಂದ ಹಲವಾರು ಮಕ್ಕಳು ಪೋಲಿಯೊ, TB, ಮಲೇರಿಯಾದಂತಹ ರೋಗಕ್ಕೆ ತುತ್ತಾಗುತ್ತಿದ್ದಾರೆ. ರಫ್ತಾಗುವ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ತಯಾರಿಸಲು ಕೃಷಿ ಕ್ಷೇತ್ರಕ್ಕೆ ಒತ್ತಡ ಹೇರಲಾಗುತ್ತಿದೆ. ಇಂತಹ ರಫ್ತು ವಸ್ತುಗಳ ಪರಿಷ್ಕರಣ ಕಾರ್ಖಾನೆಗಳಲ್ಲಿ ಹೆಣ್ಣು ಮಕ್ಕಳ ಶ್ರಮವನ್ನು ಅಗ್ಗವಾಗಿ ಉಪಯೋಗಿಸಿಕೊಂಡು ಲಾಭ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ ಅಮೇರಿಕಾದ ಬುರಾಗ್ಸ್ ಕಂಪನಿ ಟಾಟಾ ಕಂಪನಿ ಜೊತೆ ಸೇರಿ 18-24 ವರ್ಷದ ಹೆಣ್ಣು ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಂಡು, ಕಡಿಮೆ ಕೂಲಿ ಕೊಡುವುದರ ಮೂಲಕ ಪ್ರತಿ ವರ್ಷ 2 ಲಕ್ಷ ದುಡ್ಡನ್ನು ಉಳಿಸುತ್ತದೆ.

ತೃತಿಯ ರಾಷ್ಟ್ರಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ನಡುವೆ ಹತ್ತಿರದ ಸಂಬಂಧವಿದೆ. ಉದಾಹರಣೆಗೆ ಗಾರ್ಮೆಂಟು ಹಾಗೂ ಎಲೆಕ್ಟ್ರಾನಿಕ್ ವಸ್ತುಗಳನ್ನು ತಯಾರಿಸುವ ಕಂಪನಿಗಳು ಹೆಚ್ಚಾಗಿ FTZ (Free Trade Zone - ಅನಿರ್ಬಂಧಿತ ವ್ಯಾಪಾರಿ ವಲಯ) ಎಂದು ಗುರುತಿಸಲಾದ ಜಾಗಗಳಾದ ದಕ್ಷಿಣ ಏಷ್ಯಾದ ರಾಷ್ಟ್ರಗಳಿಗೆ ಬ.ರಾ.ಕಂ.ಗಳು ನುಗ್ಗುತ್ತಿವೆ. ಪಿತೃಪ್ರಧಾನ ವ್ಯವಸ್ಥೆ ಇನ್ನು ಗಟ್ಟಿಯಾಗಿರುವ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಸುಲಭವಾಗಿ ಶೋಷಿಸ ಬಹುದೆಂದು ಅವರಿಗೆ ಗೊತ್ತು.

ಇದೇ ರೀತಿ ಥೈಲ್ಯಾಂಡಿನಲ್ಲಿ ವಿದೇಶಿ ಸಾಲ ತೀರಿಸಲು ಪ್ರವಾಸೋದ್ಯಮಕ್ಕೆ ಪೂರ್ತಿಯಾದ ಒತ್ತು ನೀಡಲಾಗುತ್ತಿದೆ. ಇದರಿಂದ ಅಲ್ಲಿನ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ತಳ್ಳಲಾಗುತ್ತಿದೆ. IMF (ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ) ಹಾಗೂ ಅಮೇರಿಕಾದ ಸಾಮ್ರಾಜ್ಯಶಾಹಿ ಶಕ್ತಿಗಳು ಹಾಕಿರುವ ಪಾಲಸಿಗಳಿಂದ ಈ ಹೆಣ್ಣು ಮಕ್ಕಳನ್ನು 'ಮೊದಲ ದರ್ಜೆ' ರಾಷ್ಟ್ರಗಳಿಗೆ ಲೈಂಗಿಕ ವ್ಯಾಪಾರಕ್ಕಾಗಿ ರಫ್ತು (sex trade) ಮಾಡಲಾಗುತ್ತಿದೆ.

ವಿದೇಶಿ ಸಾಲದಿಂದಾಗುತ್ತಿರುವ ಸಮಸ್ಯೆಗಳು ಹಾಗೂ SAPಗಳಿಂದ ಕೊನೆಗೆ ಏಟು ತಿನ್ನುವವರು ಬಡ-ದುಡಿಯುವ ಮಹಿಳೆಯರು, ಕೆಲವು ಮಾಧ್ಯಮ ವರ್ಗದ ಮಹಿಳೆಯರಿಗೊಂದಿಷ್ಟು glamour ಹಾಗೂ ಡಿಸೈನರ್ ಉಡುಪುಗಳನ್ನು ಇದು ಕೊಟ್ಟಿರಬಹುದು. ಆದರೆ ಹೆಚ್ಚಿನ ದುಡಿಯುವ ಮಹಿಳೆಯರು ಈ ಸಾಲದ ಹೊರೆಯನ್ನು ಹೊರುತ್ತಿದ್ದಾರೆ. ಸಾಲದ ಬೆಟ್ಟವನ್ನು ಕಡಿಯಲು ಅದನ್ನೆ ಒಂದು ಅಸ್ತ್ರವನ್ನಾಗಿಸಿಕೊಳ್ಳಬೇಕಾಗಿದೆ. ಸಾಲ ಮನ್ನ ಮಾಡುವಂತೆ ಹೋರಾಟ ಮಾಡಬೇಕು, IMF ಸಾಲದಿಂದ ಶೋಷಿತರಾದ ನಮ್ಮ ಸಮಾಜದ ಪುರುಷರೊಡನೆ ಸೇರಿಕೊಂಡು ಸಾಲ ಮನ್ನ ಮಾಡಲು ಒಂದು ರಾಜಕೀಯ ಶಕ್ತಿಯನ್ನು ನಿರ್ಮಿಸಬೇಕಾಗಿದೆ.

ಬಡತನ, ನಿರುದ್ಯೋಗ, ಹಣದುಬ್ಬರಗಳಿಂದ, ಸಾಮಾಜಿಕ ತಳಮಳದಿಂದ ಕುಟುಂಬದ ಮೇಲಾಗುವ ಪರಿಣಾಮ ಮೊದಲು ತಟ್ಟುವುದು ಮಹಿಳೆಯನ್ನೆ. ತಮ್ಮ ಮಕ್ಕಳು ಪುಷ್ಟಿಕರ ಆಹಾರವಿಲ್ಲದೆ, ಶಿಕ್ಷಣವಿಲ್ಲದೆ, ಮಾನಸಿಕ ತಲ್ಲಣಗಳನ್ನು ಅನುಭವಿಸುತ್ತಿರುವುದಕ್ಕೆ ಇವರು ಪ್ರೇಕ್ಷಕ ರಾಗುತ್ತಾರೆ. ಸಾಮಾಜಿಕ ತಾರತಮ್ಯ ಹೆಚ್ಚುತ್ತಿದ್ದಂತೆ ಮಹಿಳೆಯ ಮೇಲಾಗುವ ಹಿಂಸೆಯೂ ಹೆಚ್ಚಾಗುತ್ತದೆ. ರಾಜ್ಯದ ಬೆಂಬಲದಿಂದ ಇವು ಸಂಸ್ಥೀಕೃತಗೊಳ್ಳುತ್ತದೆ. ಭೋಗ ಸಂಸ್ಕೃತಿಯು ಎಲ್ಲೆಡೆ ಹಬ್ಬುತ್ತಿದ್ದು, ವರದಕ್ಷಿಣೆಯಂತಹ ಸಮಸ್ಯೆಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ. ಈ ಹೊಸ ವ್ಯವಸ್ಥೆ ಮಹಿಳೆಯರ ಮೇಲೆ ಭಾರವನ್ನು ಹೊರಿಸುವುದಲ್ಲದೆ ಅವರ ಮೇಲಿನ ಹಿಂಸೆಯನ್ನು ಹೆಚ್ಚಿಸುತ್ತದೆ. ಜಾಗತೀಕರಣ ಸಂಸ್ಕೃತಿಗಳು ತನ್ನ ಆಧುನಿಕತೆಯ ಬಲೆಯನ್ನು ಹಾಸಿದ್ದರೂ, ಭಾರತದ ಪಿತೃ ಪ್ರಾಧಾನ್ಯತೆ, ಉಳಿಗಮಾನ್ಯ ಮೌಲ್ಯಗಳಿಗೆ ಯಾವ ಪೆಟ್ಟನ್ನು ಹಾಕಿಲ್ಲ. 'ಆಧುನಿಕತೆ', 'ಪ್ರಗತಿ'ಯ ಹೆಸರಲ್ಲಿ ಮಹಿಳೆಯರನ್ನು ಗುಲಾಮರಾಗಿಸಲು ಶೋಷಣೆಯ ಹೊಸ ರೂಪಗಳನ್ನು ತಂದುಕೊಡುತ್ತದೆ. ಇದೆಲ್ಲದರ ಕೇಂದ್ರ ಬಿಂದು ಒಂದು ಹೊಸ ಜಾಗತಿಕ ಸಂಸ್ಕೃತಿಯ ನಿರ್ಮಾಣ. ಈ ಸಂಸ್ಕೃತಿಯಲ್ಲಿ ಶಕ್ತಿ ಇದ್ದವರು ಮುಂದೆ ಹೋಗುತ್ತಾರೆ, ಆಸ್ತಿ-

ದುಡ್ಡನ್ನು ಮಾಡುವುದೇ ಸೃಜನಶೀಲತೆ ಎಂದು ಕರೆಯಲಾಗುತ್ತದೆ, ಎಲ್ಲಾ ಮಾನವ ಸಂಬಂಧಗಳು ವ್ಯಾಪಾರೀಕರಣಕ್ಕೆ ಒಳಗಾಗುತ್ತದೆ ಹಾಗೂ ಆತ್ಮಗೌರವ, ಸ್ವಾಭಿಮಾನವನ್ನೆ ಮಾರಿಕೊಂಡು, ಮೇಲೆ ಬರಲು ಪ್ರೇರಿಪಿಸುತ್ತದೆ.

ನಮ್ಮ ದೇಶದಲ್ಲಿ ಜಾತೀಯತೆಯ ಕೊಳಕನ್ನು ನಿವಾರಿಸದೆ ಆಧುನಿಕ ಸಂಸ್ಕೃತಿಯನ್ನು ಹುಟ್ಟುಹಾಕಲಾಗುತ್ತಿದೆ. ಜಾಗತೀಕರಣದ ಗರ್ಭದೊಳಗೆ ಜಾತೀಯತೆ ಇನ್ನೂ ಗಟ್ಟಿಗೊಳ್ಳುತ್ತಿದೆ. ಹೊಸ ಆರ್ಥಿಕ ಬಂಡವಾಳವು ತನ್ನದೆ ವೈರುಧ್ಯಗಳನ್ನು ತರುವುದಲ್ಲದೆ, ಜಾತಿಜಾತಿಗಳೊಳಗೆ ಹೊಡೆದಾಡಿಕೊಳ್ಳುವಂತೆ ಮಾಡುವುದು ಸಾಮ್ರಾಜ್ಯಶಾಹಿಯ ಉದ್ದೇಶ.

ಗೀತ ಮೆನನ್
ಸ್ತ್ರೀ ಜಾಗೃತಿ ಸಮಿತಿ
ಕನ್ನಡಕ್ಕೆ - ಉಷಾ

ಆರ್ಥಿಕ ಚಿಂತನೆಗಳಲ್ಲಿ ಲಿಂಗಾಧಾರಿತ ಗ್ರಹಿಕೆ ಇಲ್ಲ

ಜಾಗತೀಕರಣವೆಂದರೆ ಬೃಹದಾಕಾರದ ಕೈಗಾರಿಕೆ, ಆರ್ಥಿಕ ಸ್ವರೂಪವನ್ನು ಸಣ್ಣ ಕೈಗಾರಿಕೆ, ಅದರ ಆರ್ಥಿಕ ಸ್ವರೂಪದ ವಿರುದ್ಧವಾಗಿ ಅರ್ಥ ಮಾಡಿಕೊಳ್ಳುವಂತದಾಗಿದೆ. ಸಣ್ಣ ಅಥವಾ ಚಿಕ್ಕ ಪ್ರಮಾಣದ ಆರ್ಥಿಕ ರಚನೆ ಮುಖ್ಯವಾಗಿ ಮಹಿಳೆಯರ ನ್ನೊಳಗೊಂಡದ್ದಾಗಿದ್ದು, ಅಸಂಘಟಿತ ಕ್ಷೇತ್ರವನ್ನೂ ಇದು ಒಳಗೊಂಡಿರುತ್ತದೆ. ಈ ಆರ್ಥಿಕ ಸಂಘಟನೆ ಅನೇಕ ಅನೇಕ ಬದಲಾವಣೆ ಹೊಂದುವ ಸಾಮರ್ಥ್ಯವನ್ನು ಒಳಗೊಂಡಿದೆ. ಗ್ರ್ಯಾಸ್‌ರೂಟ್‌ನ ಮಹಿಳೆಯರು ಈ ಬದವಲಾವಣೆಗಳಿಗೆ ಆಗ್ಗಾಗ್ಗೆ ಹೊಂದಿಕೊಂಡಿದ್ದಾರೆ. ಹಾಗೂ ಈ ಮೂಲಕ ಮಹಿಳಾ ಆರ್ಥಿಕ ಸ್ವರೂಪವನ್ನು, ಅದರ ಫಲಿತಾಂಶಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಬದಲಾವಣೆಗಳು ಮೈಲಿಗಲ್ಲುಗಳೂ ಸಹ ಆಗಿವೆ.

ಆದರೆ ಜಾಗತೀಕರಣ ಬೆಳೆದ ಹಾಗೆ ಅದು ಅದರ ಉದ್ದೇಶಗಳನ್ನು ಮಾತ್ರ ನೆರವೇರಿಸುವಲ್ಲಿ ಮುನ್ನಡೆಯುತ್ತಿದೆ. ಹಾಗಾಗಿ ಮಹಿಳೆಯರು ಹೆಚ್ಚು ಹೆಚ್ಚಾಗಿ ತಮ್ಮ ಆರ್ಥಿಕ ಯೋಜನೆಯ ಬಗ್ಗೆ ಅಸ್ಪಷ್ಟತೆ, ಅನಿರ್ಧಿಷ್ಟತೆ ಹೊಂದ ತೊಡಗಿದ್ದಾರೆ. ಸಮಾನತೆಯ ಕಲ್ಪನೆ ಆರ್ಥಿಕ ತಜ್ಞರಲ್ಲಿ ಸಹಜವಾಗಿ ಇದ್ದಾಗ್ಯೂ, ಅವರ ವಿವರಣೆಯಲ್ಲಿ, ವಿಶೇಷವಾಗಿ ಮಹಿಳೆಯರು ಸಾಧಿಸಿದ ಆರ್ಥಿಕ ವಿಚಾರಗಳ ವಿವರಣೆಯಲ್ಲಿ ಅಗಾಧವಾದ ಕಂದಕ ಇರುವುದು ಕಂಡುಬರುತ್ತದೆ.

ಸಮಾನತೆಯ ಕಲ್ಪನೆಯುಳ್ಳ ಆರ್ಥಿಕ ತಜ್ಞರಲ್ಲಿ ಲಿಂಗಾಧಾರಿತ ಗ್ರಹಿಕೆಯ ಕೊರತೆಯಿಂದಾಗಿ ಆರ್ಥಿಕ ಮಾದರಿಗಳು, ಆರ್ಥಿಕ ಥಿಯರಿಗಳು ಅನೇಕ ಕುಂದು ಕೊರತೆಗಳಿಂದ ಕೂಡಿವೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಕುಟುಂಬ ನಿರ್ವಹಣೆಯ ಆರ್ಥಿಕ ಸಂಪನ್ಮೂಲಗಳಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಮುಖ್ಯ ವಾಹಿನಿಯಾಗಿದ್ದಾರೆ ಎಂಬುದನ್ನು ಗುರುತಿಸುವುದಷ್ಟೇ ಅಲ್ಲ, ಇದನ್ನು ನಿಜವಾದ ವಿಚಾರವೆಂದು ಒಪ್ಪಿಕೊಳ್ಳುವುದು ಹಾಗೂ ದಾಖಲಾಗುವುದು ಅಗತ್ಯವಾಗಿದೆ.

ಮಹಿಳೆಯರ ಆರ್ಥಿಕತೆ ಬೃಹದಾಕಾರದ ದೊಡ್ಡ ಆರ್ಥಿಕ ಕೈಗಾರಿಕಾ ಸ್ವರೂಪದಲ್ಲಿ ಸೇರದಿರುವುದರಿಂದ, ಇದು ಆರ್ಥಿಕ ವ್ಯವಸ್ಥೆಯಲ್ಲಿ ಒಂದಾಗಿ ಸೇರಿಕೊಳ್ಳುವುದೇ ಇಲ್ಲ. ಸೂಪರ್ ಮಾದರಿಗಳು ಇವುಗಳನ್ನು ಗುರುತಿಸುವುದೇ ಇಲ್ಲ. ಮಹಿಳೆಯರ ಆರ್ಥಿಕ ಚಟುವಟಿಕೆ, ಕೊಡುಗೆಯನ್ನು ಗಮನಿಸದಿರುವ ಆಧುನಿಕ ಆರ್ಥಿಕ ವ್ಯವಸ್ಥೆಯನ್ನು ಗ್ರಹಿಸುವುದೇ ಅಸಾಧ್ಯ ಎಂದು ಮಹಿಳೆಯರು ನಂಬುತ್ತಾರೆ.

ಮೂಲಭೂತವಾದಿಗಳ ಹಾಗೂ ವಸಾಹತುಶಾಹಿಗಳ ಕಾರ್ಯ ಚಟುವಟಿಕೆಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರು ತಮ್ಮ ಕೆಲಸವನ್ನು ಗುರುತಿಸಿ ಅಥವಾ ಇರುವ ಪಟ್ಟಿಯಲ್ಲಿ ತಮ್ಮದನ್ನು ಸೇರಿಸಿ ಎಂದೂ ಕೇಳುತ್ತಿಲ್ಲ. ಬದಲಾಗಿ ಚಿಪ್ಕೋ, ಅಪ್ಪಿಕೋ, ಸರ್ದಾರ್ ಸರೋವರ್ ಪ್ರತಿಭಟನೆಯ ಮೂಲಕ ಸೂಪರ್ ಆರ್ಥಿಕ ಮಾದರಿ ವಿರೋಧಿಸಿ ಹೊಸದಾಗಿ ಸವಾಲುಳ್ಳ ಆರ್ಥಿಕ ಮಾದರಿಗಳತ್ತ ಬಲವಾದ ಹೆಜ್ಜೆ ಹಾಕುತ್ತಿರುವುದು ಪರ್ಯಾಯ ವಿಷನ್ (ದೃಷ್ಟಿಕೋನ) ಹೊಂದಿರುವುದು ಕಂಡುಬರುತ್ತದೆ.

ಸೌದೆ ಆಯುವುದು, ನೀರು ತರುವುದು, ಅಡಿಗೆ ಮಾಡುವುದು, ಹೊಲಗಳಲ್ಲಿ ಕೆಲಸ ಮಾಡುವುದು ಇವು ಯಾವುದೂ ಸಹ ಆರ್ಥಿಕ ಚಟುವಟಿಕೆಗಳೆಂದು ಗಣನೆಗೆ ಬರುವುದೇ ಇಲ್ಲ.

ಮಹಿಳೆಯರ ಮುಖ್ಯ ಕೊಡುಗೆಯೆಂದರೆ ಹಳ್ಳಿಯ ಬದುಕಿಗೆ ಬೇಕಾದ ಪರ್ಯಾಯ ಉರುವಲು ವ್ಯವಸ್ಥೆ. ಮಹಿಳೆಯರು ಸಗಣಿಯನ್ನು ಉರುವಲಾಗಿ, ಗೊಬ್ಬರವಾಗಿ, ಕಟ್ಟಡದ ವಸ್ತುವಾಗಿ, ಗೋಡೆಯಲ್ಲಿ ಬಣ್ಣ ಬಣ್ಣದ ಗುಂಡು, ಚಿಪ್ಪುಗಳನ್ನು ಮೆತ್ತಿಸಿ ಅಲಂಕರಿಸುವ ಸಾಧನವಾಗಿ ಬಳಸುತ್ತಾರೆ. ಬೆರಣಿ ಮಾಡಿ ಮಾರುತ್ತಾರೆ, ಇಂಧನವಾಗಿ ಬಳಸುತ್ತಾರೆ. ಈ ಚಟುವಟಿಕೆ, ವ್ಯವಹಾರ ಜ್ಞಾನ ನಮ್ಮ ಆರ್ಥಿಕ ತಜ್ಞರ ಕಲ್ಪನೆಗೆ ನಿಲುಕುವುದೇ ಇಲ್ಲ.

ಜೆ. ಎ. ಸ್ಕವರ್ ಪೀಟರ್ ಪ್ರಕಾರ ವ್ಯಾಪಾರೋದ್ಯಮಿಯ ಮುಖ್ಯ ಉದ್ದೇಶ ಖಾಸಗಿ ರಾಜ್ಯ ಸ್ಥಾಪಿಸುವುದು, ಅಧಿಕಾರ, ಸಾಮಾಜಿಕ ಗಣ್ಯತೆಯ ಸಾಧಿಸುವುದು. ಆದರೆ ಬೆರಣಿ ವ್ಯವಸ್ಥೆಯಲ್ಲಿ ಉತ್ಪಾದನೆ ಹೆಚ್ಚಳ, ಲಾಭಾಂಶಗಳಿಲ್ಲ. ಹಾಗಾಗಿ ಇವು ಆರ್ಥಿಕ ಚಟುವಟಿಕೆಗಳಲ್ಲ. ಆರ್ಥಿಕ ಚಟುವಟಿಕೆಗಳು ಹೊರಗಿನ ಕೆಲಸಗಾರರು, ಬಂಡವಾಳ, ಮಾರ್ಕೆಟ್, ಯೋಜನೆ ಇವೆಲ್ಲವನ್ನೂ ಬೇಡುತ್ತವೆ. ಆದರೆ ಮಹಿಳೆಯರು ಇವೆಲ್ಲವೂ ಇಲ್ಲದೇ ಮಾನವೀಯ, ಸ್ವಸ್ತತೆ, ಪರಿಸರ ಕಾಳಜಿ ಮಾತ್ರ ಹಂಚಿಕೊಳ್ಳುತ್ತಾರೆ. 'ಬೆರಣಿ' ವ್ಯವಹಾರದಲ್ಲಿ 'ಖಾಸಗಿ ರಾಜ್ಯ'ವಿಲ್ಲ ಹಾಗೂ ವ್ಯಕ್ತಿಗತವಾದ ನಿಲುವಿಲ್ಲ.

ಆದರೆ ನ್ಯೂಜಿಲ್ಯಾಂಡ್‌ನಲ್ಲಿ ಕಂಪನಿಗಳು ಸಗಣಿಯ ವಸ್ತುಗಳನ್ನು ತಯಾರಿಸಿ ಮನೆಗಳಿಗೆ ಸರಬರಾಜು ಮಾಡುತ್ತವೆ. ಇದು ಉತ್ಪಾದನೆ. ಇಲ್ಲಿ ಕೆಲಸಗಾರರಿಗೆ ಸಂಬಳವಿದೆ. ವಸ್ತುವಿಗೆ ಮಾರ್ಕೆಟ್ ಇದೆ, ಇತ್ಯಾದಿ. ಗ್ರಾಮಾಂತರ ಮಹಿಳೆಯರು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸಗಣಿಯನ್ನು ಮತ್ತೆ ಬಳಸಿದಾಗ ಅದಕ್ಕೆ ಆರ್ಥಿಕ ಮೌಲ್ಯವಿಲ್ಲ. (ಮ್ಯಾರಿಲಿನ್ ವೇರಿಂಗ್)

ಇದು ಹಳ್ಳಿಗಾಡು ಮಹಿಳೆಯರ ಆರ್ಥಿಕ ಸತ್ಯ ಹಾಗಾಗಿ ಆರ್ಥಿಕ ತಜ್ಞರು ಲಿಂಗಾಧಾರಿತ ಸಮಾನತೆಯ ಪ್ರಜ್ಞೆಯೊಂದಿಗೆ ಆರ್ಥಿಕ ಮಾದರಿಗಳನ್ನು ಕಂಡು ಹಿಡಿಯುವ ಅಗತ್ಯವಿದೆ.

ಬೃಹದಾಕಾರದ, ದೊಡ್ಡ ದೊಡ್ಡ ಆರ್ಥಿಕ ಮಾದರಿಗಳನ್ನು ಮಾತ್ರ ಸ್ವೀಕರಿಸುವುದನ್ನು ಇಂದು ಬಹಿಷ್ಕರಿಸಬೇಕಾಗಿದೆ. ಆರ್ಥಿಕ ತಜ್ಞರು ತಮ್ಮ ನಿಲುವುಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಿದೆ. ಮಹಿಳೆಯರ ಆರ್ಥಿಕ ಚಟುವಟಿಕೆಗಳು ಸಾಮಾಜಿಕ ಅಗತ್ಯ ಹೊಂದಿವೆ, ಎಂಬುದನ್ನು ಗುರುತಿಸ ಬೇಕಾಗಿದೆ. ಅಭಿವೃದ್ಧಿ ಮಾದರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಯಥಾವತ್ತಾಗಿ ರವಾನಿಸುತ್ತಾ, ಕೆಲವೇ ಮಂದಿಗೆ ಅನುಕೂಲಗಳನ್ನು ಒದಗಿಸುವ ಸೂಪರ್ ಆರ್ಥಿಕ ಮಾದರಿಗಳು ವಿನಾಶಕಾರಿಯೆಂದು ರುಜುವಾತಾಗಿವೆ. ಮಹಿಳಾ ಆರ್ಥಿಕತೆ, ಆರ್ಥಿಕ ಚಟುವಟಿಕೆಗಳು ಬೃಹದಾಕಾರದ ಆರ್ಥಿಕ ಯೋಜನೆಗಳ ತುಣುಕುಗಳಲ್ಲ ಬದಲಾಗಿ ಪರ್ಯಾಯ ಅಗತ್ಯ ಹಾಗೂ ಸಮಾಜದ ಭಿನ್ನ ಭಿನ್ನ ಜನಾಂಗಗಳೊಂದಿಗೆ ಸಾಮರಸ್ಯ ಸಾಧಿಸುವ ಸಾಧನಗಳಾಗಿವೆ. ಆರ್ಥಿಕ ಚಿಂತನೆಗಳಲ್ಲಿನ ಹೊಸ ಪ್ರಜ್ಞೆ, ಹೊಸ ಮಾದರಿ ಭದ್ರವಾದ ಸಾಮಾಜಿಕ -ಆರ್ಥಿಕ ರಚನೆಯನ್ನು ರೂಪಿಸಬೇಕಿದೆ, ಹಾಗೂ ಬಹುಸಂಖ್ಯಾತ ಹಳ್ಳಿಗಾಡಿನ ಜನರ ಬದುಕಿನ ವ್ಯವಸ್ಥೆಗಳನ್ನು ಬೆಂಬಲಿಸ ಬೇಕಾಗಿದೆ.

●

ಮೀರಾ ಚಕ್ರವರ್ತಿ
ಮಾನಿನಿ ಮಹಿಳಾ ಸಂಘಟನೆ
ಕನ್ನಡಕ್ಕೆ : ಚಂಪಾವತಿ ಹೆಚ್. ಎಸ್.

ಬೋನ್ಸಾಯ್

ತಾಯಿ ನೆಲವ ಒಮ್ಮೆಯೂ ಸೋಕದೆ
ಬಣ್ಣಬಣ್ಣದ ಬೋಗುಣಿಗಳಲ್ಲಿ ಬೆಳೆದು
ಅಲ್ಲಲ್ಲ ಪೋಕಿಗೆ ಶಿಸ್ತಿನಿಂದ ಬೆಳೆಸಲ್ಪಟ್ಟು
ತಾಯಿಬೇರೂ ಕತ್ತರಿಸಿಕೊಂಡು
ಅತ್ತಿತ್ತ ಎಲ್ಲೆಂದರಲ್ಲಿ
ಕೊಂಬೆ ಚಾಚದೇ

ಜೈಲಿನ ಖೈದಿಯಂತೆ
ಇದ್ದೂ ತಿನ್ನಲಾಗದ ರೋಗಿಷ್ಟ ಶ್ರೀಮಂತನಂತೆ
ಒಂದೇ ಗುಟುಕು ಅನ್ನ, ನೀರು
ಮೇಲಿಲ್ಲ ಪುಷ್ಟಿಭರಿತ ಖೀರು.

ಇಷ್ಟಿಷ್ಟೇ ಎಂದು ಅಳತೆ ಮಾಡಿ
ತಲೆ-ಬಾಲ ಬೋಳಿಸಿಕೊಂಡು
ಕುಟುಕು ಜೀವ ಹಿಡಿದು
ಯಾರ್‍ಯಾರಿಗೆ ಎಷ್ಟೆಷ್ಟೋ
ಹೂ-ಹಣ್ಣು-ನೆರಳು ಕೊಡಬಹುದಿದ್ದ
ದೈತ್ಯ ಮರ,
ಈಗ ದೀನವಾಗಿ ನಿಂತು
ಒಂದೊಂದೇ ಹೂ-ಹಣ್ಣು
ಹಡೆಯುತ್ತದೆ ಆಗೆಲ್ಲೋ ಈಗೆಲ್ಲೋ!

ಅದರ ಮೇಲೇ ಎಲ್ಲರ ಅಚ್ಚರಿಯ ಕಣ್ಣು!
ವಿಶ್ವಸುಂದರಿ ಸ್ಪರ್ಧೆಗೆ
ಡಯಟ್ ಮಾಡಿ
ಸ್ಲಿಮ್ ಆಗಿ
ಟ್ರಿಮ್ ಮಾಡಿಸಿಕೊಂಡು ಬೆಳೆದ
ವಯಸ್ಸು ಮೀರಿದ
ಬುದ್ಧ ಅಂಗವಿಕಲ ಸುಂದರಿ
ಬೋನ್ಸಾಯ್ ರಾಣಿ!

○ *ರೂಪ, ಹಾಸನ*

ಪುಸ್ತಕ ಪರಿಚಯ

ದಲಿತರು ಮತ್ತು ಜಾಗತೀಕರಣ

ಲೇ : ಮೊಗಳ್ಳಿ ಗಣೇಶ್
ಪ್ರ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
ಮೊದಲ ಮುದ್ರಣ : 1999, ರೂ. : 120/-

ಪುಸ್ತಕದ ಮುನ್ನುಡಿ ರೂಪದಲ್ಲಿರುವ 'ನನ್ನ ಸೊಲ್ಲು'ನಲ್ಲಿ ಲೇಖಕ ಮೊಗಳ್ಳಿ ಗಣೇಶ್ ಅವರು ಹೇಳುವ ಮಾತುಗಳಿವು : 'ಸಂಸ್ಕೃತಿಗಳ ವಿರಾಟ್ ವಿಕಾಸ ಕಥನದ ಹಾದಿಯಲ್ಲಿ ಜಾಗತೀಕರಣವನ್ನು ಪ್ರತಿಪಾದಿಸುವ, ವಿರೋಧಿಸುವ ಎರಡೂ ದಾತುಗಳ ಸೂಕ್ಷ್ಮಾಂತರಗಳ ಮಧ್ಯೆ ನಿಂತು ತರ್ಕಿಸಿದ್ದೇನೆ'.

ಇದು ಅವರು ಮುಂದೆ ಕೃತಿಯಲ್ಲಿ ಪ್ರತಿಪಾದಿಸುತ್ತಾ ಹೋಗುವ ವಿಚಾರಗಳ ನೆಲೆಯನ್ನೂ ಧ್ವನಿಸುತ್ತದೆ.

ಕೃತಿಯಲ್ಲಿ ಒಟ್ಟು 7 ಅಧ್ಯಾಯಗಳಿವೆ

1. ಜಾಗತೀಕರಣ ಮತ್ತು ದಲಿತರು, 2. ಸಮಕಾಲೀನತೆ ಮತ್ತು ಜಾಗತೀಕರಣ, 3. ಆದಿವಾಸಿ ಅಲೆಮಾರಿ ಬುಡಕಟ್ಟುಗಳು: ಜಾಗತಿಕ ಪ್ರಕ್ರಿಯೆ, 4. ದೇಶಿ : ವಿದೇಶಿ, 5. ಜನಪದ ಮತ್ತು ಜಾಗತೀಕರಣ, 6. ವಿಶ್ವಪದದ ಪ್ರಕ್ರಿಯೆ, 7. ದಲಿತ ವಿಮೋಚನೆ.

ಆರಂಭದ ಅಧ್ಯಾಯದಲ್ಲಿ 'ಇಪ್ಪತ್ತೊಂದನೇ ಶತಮಾನಕ್ಕೆ ಕೆಳಜಾತಿಗಳು ಪ್ರವೇಶ ಪಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಜಾಗತೀಕರಣದ ಪ್ರಕ್ರಿಯೆ ಬಹುಮುಖ್ಯ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸವಾಲುಗಳನ್ನು ನಿರ್ಮಿಸುತ್ತದೆ' ಎಂಬ ಮಾತುಗಳನ್ನು ಹೇಳುತ್ತಾರೆ. ಈ ಸಂದರ್ಭದಲ್ಲಿ ಹುಲಿ-ಇಲಿಯ ಜಾನಪದ ಕಥೆಯೊಂದನ್ನು ಅವರು ಹೇಳುತ್ತಾರೆ. ರೂಪಕಗಳಲ್ಲಿ ಬೆಳೆಯುವ ಈ ಕಥೆ - ಮೌಖಿಕ ಪರಂಪರೆ, ಅದು ರೂಢಿಸುವ ಬದುಕಿನ ನಂಬಿಕೆಗಳು, ಅನ್ಯವಾದದ್ದರ ಆಕ್ರಮಣವನ್ನು ದೀರ್ಘಕಾಲದವರೆಗೆ ಸಹಿಸಿಕೊಂಡು ಅದರಲ್ಲೇ ಇನ್ನೊಂದು ಜೀವಂತಿಕೆ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಿಚಾರವನ್ನೂ ಪ್ರತಿಪಾದಿಸುತ್ತದೆ.

ಈ ಕೃತಿಯನ್ನು 'ಸೃಜನಶೀಲ ಬರಹದ ಶೈಲಿಯಲ್ಲಿ ತಮ್ಮ ಮುಂದೆ ಮಂಡಿಸುತ್ತಿರುವೆನು' ಎಂದೂ ಲೇಖಕರು ಆರಂಭದಲ್ಲಿ ಹೇಳಿಕೊಂಡಿದ್ದಾರೆ. ಆದರೆ ದೇಶಿ ಹಾಗೂ ಜಾಗತೀಕರಣಕ್ಕೆ ರೂಪಕಗಳಾಗಿ ಬಿಂಬಿಸಿರುವ ಈ ಇಲಿ-ಹುಲಿ ಕಥೆ ಇರುವ ಭಾಗ ಬಿಟ್ಟರೆ ಪುಸ್ತಕದ ಉಳಿದೆಲ್ಲಾ ಭಾಗಗಳು ವಿಚಾರಗಳ ಮಂಡನೆಯಾಗಿರುವಷ್ಟೇ ಉಳಿದಂತೆ ಭಾಸವಾಗುತ್ತದೆ. ಅದೂ ವಿಚಾರಗಳ ಮಂಡನೆ ತರ್ಕಬದ್ಧವಾಗಿ ಬೆಳೆದಂತೆ ಅನಿಸುವುದಿಲ್ಲ. ಟಿಪ್ಪಣಿಗಳ ರೂಪದಲ್ಲಿ ಅನಿಸಿಕೆಗಳನ್ನೂ ವಿಚಾರಗಳಾಗಿ ಮಂಡಿಸಲಾಗಿದೆ ಎನಿಸುತ್ತದೆ. ಜಾಗತೀಕರಣ ಕುರಿತಂತೆ ಲೇಖಕರು ನೀಡುವ ಅಭಿಪ್ರಾಯಗಳು, ವಿಚಾರಗಳನ್ನು ಇಲ್ಲಿ ಮುಂದೆ ಕೊಡಲಾಗಿದೆ.

ವಿವಿಧ ಜಾತಿ ಧರ್ಮಗಳನ್ನು ಉಳ್ಳ ಬಹುಸಂಸ್ಕೃತಿಯ ಭಾರತದಲ್ಲಿ 'ಜಾಗತೀಕರಣ ಒಂದು ಬಗೆಯಲ್ಲಿ ದಲಿತ ಸಮುದಾಯಗಳಿಗೆ ಶಾಪವೂ ವರವೂ ಎರಡೂ ಹೌದು ಎಂಬ ನಿಲುವನ್ನು ಎಚ್ಚರಿಕೆಯಿಂದ ಗಮನಿಸಬೇಕಾದ ಸಂದರ್ಭ ಇದು' ಎಂಬ ವಾದವನ್ನೂ ಮೊಗಳ್ಳಿ ಮಂಡಿಸುತ್ತಾರೆ. 'ಜಗತ್ತಿನ ನಾಗರೀಕತೆಗಳ ಲಕ್ಷಣವಾಗಿರುವ ಆಧುನಿಕತೆಯ ಇನ್ನೊಂದು ಮುಖವಾದ ಜಾಗತೀಕರಣವನ್ನು ಅನೇಕ ಅಳತೆಗಳ ತಾತ್ವಿಕ ಚೌಕಟ್ಟಿನಿಂದ ಚರ್ಚಿಸಬಹುದು' ಎಂದೂ ಅವರು ವಿವರಿಸುತ್ತಾರೆ.

ಆಧುನಿಕ ಮಾಹಿತಿ ತಂತ್ರಜ್ಞಾನ, ಸಂಪರ್ಕ ಶಕ್ತಿ ಬೆಳೆಯುತ್ತಾ ಹೋದಂತೆಯೇ ಜಾಗತೀಕರಣ ಪ್ರಕ್ರಿಯೆ ಆಧುನೀಕತೆಯ ಇನ್ನೊಂದು ಹಂತವಾಗಿ ಬೆಳೆದು ಬಂದದ್ದನ್ನು ಅವರು ವಿವರಿಸುತ್ತಾರೆ. ಈ ಹಿನ್ನೆಲೆಯಲ್ಲಿ, 'ಮೂರನೇ ಜಗತ್ತಿನ ದೇಶಗಳಿಗೆ ಜಾಗತೀಕರಣವನ್ನು ಸುಲಭವಾಗಿ ನುಂಗುವಂತೆಯೂ ಇಲ್ಲ ಅಥವಾ ಹೊರ ಹಾಕುವುದಕ್ಕೂ ಆಗುವುದಿಲ್ಲ. ಮುಖ್ಯ ಪ್ರಶ್ನೆ ಎಂದರೆ ಈ ಜಾಗತೀಕರಣದ ವ್ಯವಸ್ಥೆಯನ್ನು ಹೇಗೆ ನಿಭಾಯಿಸಿ ತನ್ನ ಆಕಾರಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕು ಎಂಬುದು' ಎಂದೂ ಅವರು ಪ್ರತಿಪಾದಿಸುತ್ತಾರೆ.

ಮೊಗಳ್ಳಿ ಗಣೇಶ್ ಅವರ ಪ್ರಕಾರ, ಸರಳವಾದ ಪರ ವಿರೋಧ ಚರ್ಚೆಯನ್ನಾಗಿ ಜಾಗತೀಕರಣವನ್ನು ಗ್ರಹಿಸಿದಾಗಲೆಲ್ಲಾ ಅತ್ಯಂತ ಹತಾಶೆಯ ಅಂಚಿನಲ್ಲಿರುವ ಕೆಳಜಾತಿಗಳನ್ನು ಅವುಗಳ ಹೊಸ ತಲೆಮಾರುಗಳ ದುಃಸ್ಥಿತಿಯನ್ನು ನೆನೆಯಬೇಕಾಗುತ್ತದೆ. ಹಸಿದ ದಲಿತನಿಗೆ ಸಮಾಜವಾದಿ ಕನಸುಗಳನ್ನು ಕೊಟ್ಟು ತಾವು ಮಾತ್ರ

ಜಾಗತೀಕರಣದ ಎಲ್ಲಾ ಸೌಲಭ್ಯಗಳನ್ನು ಅನುಭವಿಸುತ್ತ ಕೂರುವುದು ಜಾಗತೀಕರಣ ಮಾಡಬಹುದಾದ ಅಪಾಯಕ್ಕಿಂತಲೂ ಹೆಚ್ಚಿನದಾಗಿರುತ್ತದೆ.

ಅವರ ಪ್ರಕಾರ, ಒಟ್ಟಾರೆ ಜಾಗತೀಕರಣ ಎನ್ನುವುದು ವಿಶ್ವ ಆರ್ಥಿಕ ಸಂಬಂಧಗಳು ವಿಶ್ವ ರಾಜಕೀಯ ಸಂಪರ್ಕದಿಂದ ಹಳೆಯ ಜಗತ್ತಿನ ಹಿಂದುಳಿದ ಸಮುದಾಯಗಳ ಜೊತೆಗೆ ರೂಪಿಸಿಕೊಳ್ಳುತ್ತಿರುವ ಆಧುನಿಕ ಸಾಂಸ್ಕೃತಿಕ ರೂಪಾಂತರಗಳ ವಿಕಾಸವಾಗಿದೆ.

ವಿಭಿನ್ನ ಹೊಸ ವಿಚಾರ, ತಂತ್ರಜ್ಞಾನ, ಆಧುನಿಕತೆ, ಶಿಕ್ಷಣ ಹಾಗೂ ಜಾಗತಿಕ ಸವಾಲುಗಳಿಗೆ ತೆರೆದುಕೊಳ್ಳದಿದ್ದರೆ ದಲಿತ ಸಮುದಾಯಗಳಿಗೆ ಭವಿಷ್ಯವೇ ಇಲ್ಲದಂತಾಗುತ್ತದೆ. ಆಧುನಿಕ ಸಂಕರಗಳಿಗೆ ಒಳಗಾಗುವುದೇ ಅವುಗಳ ಸಾಂಸ್ಕೃತಿಕ ಜಿಗಿತವಾಗಬೇಕಾದ ಸ್ಥಿತಿಯಾಗಿದೆ ಎಂದೂ ಅವರು ವಾದಿಸುತ್ತಾರೆ.

ದಲಿತ ಸಮುದಾಯಗಳ ಆಧುನೀಕರಣ, ರಾಷ್ಟ್ರೀಕರಣ, ದೇಶೀಕರಣ ಹಾಗೂ ಜಾಗತೀಕರಣಗಳು ಸವಾಲು ಮತ್ತು ಸಾಧ್ಯತೆಗಳೆರಡನ್ನೂ ಒಡ್ಡುತ್ತಿವೆ. ಭಾರತದ ಒಟ್ಟು ಸಂದರ್ಭದಲ್ಲಿ ದಲಿತ ಚಿಂತನೆಗಳು, ಅಧ್ಯಯನ ಶೈಲಿಗಳು ಕ್ರಮಗಳು ನಿರೂಪಣೆಗಳು ಭಿನ್ನ ಕಥನಗಳಾಗಿ ಬೌದ್ಧಿಕ ವಲಯಗಳಲ್ಲಿ ಸೇರ್ಪಡೆಯಾಗುತ್ತಿವೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ದಲಿತ ಸಂಸ್ಕೃತಿಗಳ ಬಹುರೂಪಿ ಅಧ್ಯಯನಗಳು ಶೈಕ್ಷಣಿಕ ಮಟ್ಟದಲ್ಲಿ ಹೊಸ ಆಕೃತಿಗಳನ್ನು ನಿರ್ಮಿಸುತ್ತಿವೆ. ದಲಿತ, ಅಲ್ಪಸಂಖ್ಯಾತ, ಆದಿವಾಸಿ ಹಾಗೂ ಮಹಿಳಾ ಸಂಸ್ಕೃತಿಗಳೆಲ್ಲವುದರ ಪ್ರಶ್ನೆಗಳು ನಮ್ಮ ಅಧ್ಯಯನಗಳ ವಿಧಾನವನ್ನೇ ಬದಲಿಸಬೇಕೆಂದು ಒತ್ತಾಯಿಸುತ್ತಿವೆ ಎಂದು ಅವರು ಹೇಳುತ್ತಾರೆ.

'ನನ್ನ ಮಟ್ಟಿಗೆ ದಲಿತರು ಜಾಗತೀಕರಣಕ್ಕಾಗಲಿ ಅಥವಾ ಇದರ ನಂತರ ಉಂಟಾಗುವ ಜಗತ್ತಿನ ಯಾವುದೇ ಇಂಟರ್‌ನೆಟ್ ಸಂಸ್ಕೃತಿಯ ವಿದ್ಯುನ್ಮಾನೀಕರಣಕ್ಕಾಗಲೀ ಆವಿಷ್ಕಾರಗಳಿಗಾಗಲೀ ತೆರೆದುಕೊಂಡು ಅವುಗಳಲ್ಲಿ ತಮ್ಮನ್ನು ಗುರುತಿಸಿಕೊಂಡರೆ ಯಾವ ರೀತಿಯಲ್ಲೂ ನಷ್ಟವಾಗದೆಂದೇ ತಿಳಿಯುತ್ತೇನೆ' ಇಷ್ಟು ಕಾಲದವರೆಗೆ ಎಂತೆಂಥಹ ವಿಪತ್ತುಗಳು ಬಂದರೂ ಕೆಳಜಾತಿಗಳು ನಿರ್ನಾಮವಾಗಲಿಲ್ಲ ಎಂಬುದನ್ನು ಎಲ್ಲರೂ ನೆನಪಿಡಬೇಕು. ಹಲ್ಲೆ, ದಾಳಿ, ಶೋಷಣೆಗಳಿಂದ ನಡುಗಿ ಬೀಳುತ್ತಿದ್ದ ಅನೇಕ ಸಮುದಾಯಗಳು ಜಾತಿಗಳು ಇವತ್ತು ಮುಪ್ಪಿಡಿದು ಕುಳಿತಿವೆ. ಒಂದು ಕಾಲದ ಪಾಳೆಯಗಾರ ತನ್ನೆಲ್ಲ ಅಧಿಪತ್ಯವನ್ನೂ ಕಳೆದುಕೊಂಡು ತನ್ನ ಒಂದು ಕಾಲದ ಜೀತಗಾರನ ಬಳಿಯೇ ಅಥವಾ ಅವನ ಮಗನ ಬಳಿಯೋ ಯಃಕಶ್ಚಿತ್ ಒಂದು ಬೀಡಿಯನ್ನೊ ಅಥವಾ ಇನ್ನೇನನ್ನೋ ಕೇಳುವ ಸ್ಥಿತಿಯನ್ನೂ ತಲುಪಿರುತ್ತಾರೆ...... ಚರಿತ್ರೆಯ ಉದ್ದಕ್ಕೂ ತುಳಿಸಿಕೊಂಡರೂ ದಲಿತರು ತಮ್ಮ ಸಂಸ್ಕೃತಿಯ ಅವಸ್ಥಾಂತರಗಳನ್ನು ಬಿಟ್ಟುಕೊಡದೆ ಮತ್ತೆಮತ್ತೆ ಪುನರ್ ಸೃಷ್ಟಿಯಿಂದ ಪರಂಪರೆಗಳನ್ನು ರೂಪಿಸಿಕೊಂಡರು..... ಹಾಗೆ ನೋಡಿದರೆ ಭಾರತದ ಸಾಂಪ್ರದಾಯಿಕ ಕರಕುಶಲಕಲೆ, ತಂತ್ರಜ್ಞಾನ, ವಿಜ್ಞಾನ, ಸಾಹಿತ್ಯ, ವೈದ್ಯಕೀಯ ಹಾಗೂ ವಾಸ್ತುಶಿಲ್ಪ ಮತ್ತು ಉತ್ಪಾದನಾ ವಿಧಾನಗಳೆಲ್ಲವೂ ವಿಶ್ವ ಮಾನ್ಯತೆಯನ್ನು ಪಡೆದದ್ದು ತಾಂತ್ರೀಕೃತ ಕರಕುಶಲ ಸಮುದಾಯಗಳಾಗಿದ್ದ ಈ ಕೆಳಜಾತಿಗಳಿಂದಲೇ. ಎಂತಹ ಕಾಲದಲ್ಲೂ ಕೆಳಜಾತಿಗಳು ತಮ್ಮ ಸೃಷ್ಟಿಶೀಲ ಸ್ವಭಾವದಿಂದ ಹೊರಗಾಗಿ ಜಡ್ಡುಗಟ್ಟಿಲ್ಲ ಎಂದು ಚರಿತ್ರೆಯೇ ದೊಡ್ಡದಾಗಿ ಸಾಕ್ಷಿ ಹೇಳುತ್ತಿದೆ. ಅಂತಾಹದರಲ್ಲಿ ನೆನ್ನೆ ಮೊನ್ನೆ ಬಂದ ಜಾಗತೀಕರಣ ದಲಿತರನ್ನೂ, ಭಾರತದ ಜಾನಪದವನ್ನೂ ನಮ್ಮಲ್ಲಿರುವ ಅಮೂಲ್ಯ(?) ಸಾಂಸ್ಕೃತಿಕ ಸಂಪತ್ತನ್ನು ಕೊಳ್ಳೆ ಹೊಡೆಯಲು ಸಾಧ್ಯವೆ ? ಎಂದು ಪ್ರಶ್ನಿಸುತ್ತಾರೆ.

ಹೀಗಾಗಿ ದಲಿತರು ಜಾಗತೀಕರಣವನ್ನು ಅನುಸರಿಸುವುದರಲ್ಲಿ ಔಚಿತ್ಯವಿದೆ. ಜಾಗತೀಕರಣದಿಂದ ತಕ್ಷಣದ ಅಪಾಯಗಳಿವೆಯಾದರೂ ದೀರ್ಘ ಕಾಲದಲ್ಲಿ ಅವೆಲ್ಲ ಮುಚ್ಚಿಹೋಗುತ್ತವೆ ಎಂದು ಹೇಳುತ್ತಾರೆ.

'ನಮ್ಮ ಪೂರ್ವಿಕರೂ ಅನಕ್ಷರಸ್ಥರಾದರೆ ನಾಳಿನವರೂ ಅದನ್ನೇ ಯಾಕೆ ಮುಂದುವರಿಸಬೇಕು ಎಂಬಂತೆಯೇ ಇವತ್ತಿನ ಜಾಗತಿಕ ಆಹ್ವಾನಗಳಿಗೆ ನಾಳೆಗಳನ್ನೂ ಸಿದ್ಧಪಡಿಸುವುದು ಈ ಕಾಲದ ಒತ್ತಡವಾಗಿದೆ. ಸೂಕ್ಷ್ಮವಾಗಿ ಈ ಪ್ರಕ್ರಿಯೆ ಮೇಲ್ಜಾತಿಗಳಲ್ಲಿ ಈಗಾಗಲೇ ಆಗುತ್ತಿದ್ದು ಉನ್ನತ ಶಿಕ್ಷಣಕ್ಕೆ ಜವಾಬ್ದಾರಿಗಳಿಗೆ ಮುಂದಿನ ಯುವ ಜನಾಂಗವನ್ನೂ ತಯಾರು ಮಾಡಿಕೊಳ್ಳುತ್ತಿರುವಾಗ, ದಲಿತರು ತಮ್ಮ ಮಕ್ಕಳ ಕೈಗೆ ಈ ತಮಟೆ, ನಗಾರಿ, ಶಂಖ, ಜಾಗಟೆ, ತಾಳ, ತಂಬೂರಿ ಕಿನ್ನೂರಿಗಳನ್ನು ಕೊಟ್ಟು ಇವನ್ನು ಜೋಪಾನವಾಗಿ ಕಾಯ್ದಿಟ್ಟು ನೀವು ನಿಮ್ಮ ಮುಂದಿನವರಿಗೂ ರವಾನಿಸಿ ಎಂದರೆ ಹೇಗಿರುತ್ತದೆ? ಜಾಗತೀಕರಣಕ್ಕೆ ಒಳಗಾಗುವುದು ಅಪಾಯಕಾರಿ ಎಂಬುದು ಈ ರೀತಿ ಇರುತ್ತದೆ. ಎಂದೂ ಅವರು ಹೇಳುತ್ತಾರೆ.

- ಇವತ್ತು ಆಧುನಿಕತೆ, ಜಾಗತೀಕರಣಗಳೆರಡೂ ದಲಿತರ ಪಾಲಿಗೆ ಬೇಡವೆಂದಾದರೆ ಹಿಂದೆ ಸಂಸ್ಕೃತವನ್ನೂ ಜ್ಞಾನವನ್ನು ನಿಷೇಧಿಸಿರುವಂತೆಯೇ ಆಗುತ್ತದೆ.... ಎಂಬುದು ಅವರ ನಿಲುವು.

ಜಾಗತೀಕರಣಕ್ಕೆ ಸಂಬಂಧಿಸಿದಂತೆ ಹಲವು ತತ್ವಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಖಾಸಗೀಕರಣವನ್ನು ಕುರಿತಂತೆ

ಹೇಳುವ ಮಾತುಗಳು ಇವು - "ಖಾಸಗೀಕರಣಕ್ಕೆ ಸಮರ್ಥವಾಗಿ ಒಳಗಾದ ನಂತರ ಜಾತಿಗಳ ಸ್ವರೂಪವೇ ಬದಲಾಗಿ ಹೋಗುತ್ತದೆ. ಇಲ್ಲದಿದ್ದರೆ ಇನ್ನೂ ಒಂದು ಸಾವಿರ ವರ್ಷದ ತನಕ ದಲಿತರು ಸರ್ಕಾರದ ಮೀಸಲಾತಿಯ ನಾಟಕದಲ್ಲೇ ನಟಿಸುತ್ತಿರಬೇಕಾಗುತ್ತದೆ'.

ದಲಿತ ಮಹಿಳಾ ಸಂವೇದನೆ ಕುರಿತ ಟಿಪ್ಪಣಿಯಲ್ಲಿ ದಲಿತ ಮಹಿಳೆಯ ಮಹಿಳಾ ಚಿಂತನೆಗೂ ವೈದಿಕ ಮಹಿಳೆಯ ಚಿಂತನೆಗೂ ತಾಳೆಯಾಗುವುದಿಲ್ಲ ಎಂಬುದು ಲೇಖಕರ ಅಭಿಪ್ರಾಯ. ದಲಿತ ಮಹಿಳೆಯರನ್ನೂ ವಿಶೇಷವಾಗಿ ಶಿಕ್ಷಣಕ್ಕೆ ಆಧುನೀಕರಣಕ್ಕೆ ಜಾಗತೀಕರಣಕ್ಕೆ ಒಳಪಡಿಸಿದರೆ, ನಂತರ ಇಡೀ ಆಯಾ ಜಾತಿಗಳೇ ರೂಪಾಂತರಗೊಂಡು ಬದಲಾವಣೆಗಳು ಸಕಾರಾತ್ಮಕವಾಗಿ ಬೆಳೆಯುತ್ತವೆ.

ದಲಿತ ಮಹಿಳಾ ಶಕ್ತಿಯನ್ನು ಅನ್ಯೆಪುಣ್ಯ ಕಾರ್ಮಿಕ ವಲಯವಾಗಿಯೇ ಮುಂದುವರಿಸುತ್ತಿದ್ದರೆ ನಮ್ಮ ಸಮಸ್ಯೆಗಳು ಬೇರೆ ರೂಪಗಳಲ್ಲಿ ಮತ್ತಷ್ಟು ಹೆಚ್ಚುತ್ತದೆ ಎಂದೂ ಅವರು ಅಭಿಪ್ರಾಯ ಪಡುತ್ತಾರೆ.

'ದೇಶಿ, ವಿದೇಶಿ' ಅಧ್ಯಾಯದಲ್ಲಿ, 'ಹಿಂದೂವಾದಿಗಳ ಸ್ವದೇಶಿ ನೇಣಿಗೆ ಬದಲು ಜಾಗತೀಕರಣದ ಜೊತೆ ಗುದ್ದಾಡುವುದೇ ಸೂಕ್ತ ಎಂದು ದಲಿತ ಸಮುದಾಯ ತಿಳಿದುಕೊಂಡಿವೆ' ಎಂಬ ವಾದವನ್ನು ಲೇಖಕರು ಮಂಡಿಸುತ್ತಾರೆ. ಜಾಗತೀಕರಣದಲ್ಲಿ ಹುಡುಕಲು ನೂರೆಂಟು ಲೋಪಗಳಿದ್ದರೂ ದಕ್ಷಿಣ ಏಷ್ಯಾದ ದೇಶಗಳಿಗೆ ಅದು ಅನಿವಾರ್ಯವಾದ ಸ್ವೀಕರಣೆಯಾಗಿದೆ. ಹಾಗೆಯೇ ಇವತ್ತು ವಿಶೇಷವಾಗಿ ದೇಶೀಕರಣದಿಂದಲೇ ಎಲ್ಲವೂ ಸಾಧ್ಯ ಎಂದು ಹೇಳುವಂತಿಲ್ಲ. ಹಾಗೆಯೇ ಇಡೀ ಜಾಗತೀಕರಣವೊಂದೇ ಇವತ್ತಿನ ವಿಶ್ವಕ್ಕೆ ಒಂದು ಅಗಾಧ ಮಾದರಿ ಎಂದೂ ಸೂಚಿಸಲಾಗದು. ಇವೆರಡನ್ನೂ ಸಂಗಮಿಸುವ ಮಾನವೀಕರಣವಾಗಬೇಕಾಗಿದೆ. ಆ ಸ್ಥಿತಿಗೆ ತೃತೀಯ ಜಗತ್ತಿನ ಸಂಸ್ಕೃತಿ ಪರಂಪರೆಗಳ ಆಳದಲ್ಲಿ ಜಾಗತೀಕರಣಕ್ಕೆ ಮದ್ದುಂಟು ಎಂದು ಲೇಖಕರು ಹೇಳುತ್ತಾರೆ.

ಜಾಗತೀಕರಣವು ಜಾನಪದದಲ್ಲಿ ಹೊಸದೊಂದು ಶಾಖೆಯನ್ನೇ ವಿಸ್ತರಿಸುತ್ತಿದೆ. ಆಧುನಿಕ ಸಂವೇದನೆಗಳು ಸೃಷ್ಟಿಸುವ ಜಾನಪದವನ್ನು ಗ್ಲೋಬಲ್ ಲೋಕ್ ಹೆಸರಿನಿಂದ ಕರೆದು ಕನ್ನಡದಲ್ಲಿ 'ವಿಶ್ವಪದ' ಎಂಬ ಗುರುತಿಸಿಕೊಳ್ಳಬಹುದು ಎಂದು ಲೇಖಕರು ಹೇಳುತ್ತಾರೆ. ಇವತ್ತಿನ ಸಮೂಹ ಮಾಧ್ಯಮಗಳು, ಸಂಪರ್ಕಜಾಲಗಳು, ಮಾಹಿತಿ ವಿಜ್ಞಾನಗಳು, ಅಂತರರಾಷ್ಟ್ರೀಯ ಕ್ರೀಡೆಗಳು, ಜನಪ್ರಿಯ ರಂಜನೆಗಳು ಮುಖ್ಯವಾಗಿ 'ವಿಶ್ವಪದ'ದ ವ್ಯಾಪ್ತಿಯಲ್ಲಿ ಒಳಪಡುತ್ತದೆ ಎಂದು ವಿವರಿಸಲಾಗಿದೆ.

○ *ಸಿ.ಜಿ. ಮಂಜುಳ*

ದಲಿತರು ಮತ್ತು ಜಾಗತೀಕರಣ - ಒಂದು ಅನಿಸಿಕೆ

ಕತೆಗಾರ ಮೊಗಳ್ಳಿ ಗಣೇಶ್‌ರವರು ಬರೆದಿರುವ ದಲಿತರು ಮತ್ತು ಜಾಗತೀಕರಣ ಪುಸ್ತಕವನ್ನು ಓದಿದೆ. ಸಮಕಾಲೀನ ವಿಷಯಗಳನ್ನು ಮಹಿಳೆಯ, ದಲಿತರ, ದೃಷ್ಟಿಕೋನದಿಂದ ನೋಡಿ ವಿಶ್ಲೇಷಿಸುವುದು ಮುಖ್ಯವಾಗುತ್ತದೆ. ಆ ಕಾರಣಕ್ಕಾಗಿಯೇ ಮೊಗಳ್ಳಿಯವರ ಪುಸ್ತಕವನ್ನು ಕೊಂಡು ಓದಿದೆ. ಪುಸ್ತಕ ಸುಲಭವಾಗಿ ಓದಿಸಿಕೊಂಡು ಹೋಗುವುದಿಲ್ಲ. ಮುಖ್ಯವಾದುದರಿಂದ ಓದಲೇಬೇಕೆನಿಸಿ ಕಷ್ಟಪಟ್ಟು ಓದಿದೆ. ಓದಿ ಅನಿಸಿದ್ದನ್ನ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

ಗಣೇಶ್‌ರವರು ಜಾಗತೀಕರಣ ಮತ್ತು ಆಧುನಿಕತೆಗೆ ವ್ಯತ್ಯಾಸವಿಲ್ಲವೆನ್ನುತ್ತಾರೆ. ಆಧುನಿಕರಣವನ್ನು ಅವರು "ಎಲ್ಲರೂ ಶಿಕ್ಷಣ ಪಡೆಯುವುದು ಎಲ್ಲರೂ ಉದ್ಯೋಗ ಪಡೆಯುವುದು, ಎಲ್ಲರೂ ಉತ್ಪಾದನೆಯಲ್ಲಿ ಸಮ ಜವಾಬ್ದಾರಿ ಮತ್ತು ಪಾಲುದಾರಿಕೆಯನ್ನು ಹೊಂದುವುದು ಹಾಗೂ ತಲಾ ಆದಾಯದ ಹೆಚ್ಚಳದ ಜೊತೆಗೆ ಮಾನವನ ಒಟ್ಟು ಸಾಮಾಜಿಕ ಸಾಂಸ್ಕೃತಿಕ, ವೈಜ್ಞಾನಿಕ ತಾಂತ್ರಿಕ ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳುವುದು ಎಂದರ್ಥ" (ಪುಟ 11) ಎಂದು ವಿವರಿಸಿದ್ದಾರೆ. ಇಂತಹ ಉದ್ದೇಶಕ್ಕೂ ಜಾಗತೀಕರಣದ ಉದ್ದೇಶಗಳಿಗೂ ಯಾವ್ಯಾವ ಸಂಬಂಧವಿಲ್ಲ ವೆಂಬುದು ಹೊಸ ಆರ್ಥಿಕ ನೀತಿ ಜಾರಿ ಗೊಂಡಾಗಿನಿಂದ ಆಗಿರುವ ಬದಲಾವಣೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಒಂದಾದ ಮೇಲೊಂದರಂತೆ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲಾಗುತ್ತಿದ್ದು ಖಾಸಗಿ ಕ್ಷೇತ್ರದ ಹಿಡಿತ ಹೆಚ್ಚಾಗುತ್ತಿದೆ. ಇರುವ ಸರ್ಕಾರಿ ಕೆಲಸಗಳಲ್ಲಿ ನೇಮಕಾತಿಯನ್ನು ನಿಲ್ಲಿಸ ಲಾಗುತ್ತಿದೆ. ಖಾಸಗೀಕರಣದಿಂದ ಸ್ಪರ್ಧೆ ಹೆಚ್ಚಾಗಿ ಉತ್ಪಾದನೆ, ಗುಣಮಟ್ಟ ಹೆಚ್ಚುವುದೆಂದು ಆಳುವ ವರ್ಗ ಬೊಗಳೆ ಬಿಡುತ್ತಿದೆ. ಗಣೇಶ್‌ರವರು ಖಾಸಗೀಕರಣವನ್ನು ತಿರಸ್ಕರಿಸಿ ಕುಳಿತರೆ ನಮ್ಮ ಭವಿಷ್ಯ ಹಿಂದಕ್ಕೆ ಸಾಗುತ್ತದೆ (ಪುಟ 76) ಖಾಸಗೀಕರಣದಲ್ಲಿ ಮೀಸಲಾತಿ ಕೇಳುವುದಕ್ಕಿಂತ ಇಡೀ ಖಾಸಗೀ ಉದ್ಯಮ

ವ್ಯವಸ್ಥೆಗೇ ನಮ್ಮ ಎಲ್ಲ ಜಾತಿಗಳನ್ನು ಅತ್ಯಂತ ಸಮರ್ಪಕವಾಗಿ ಸಜ್ಜುಗೊಳಿಸಬೇಕು. ದಲಿತರಿಗೆ ಖಾಸಗಿ ವಲಯದ ಸೂಕ್ತ ತರಭೇತಿಯೊಂದಿಗೆ ಅವರನ್ನು ಬಂಡವಾಳ ಹೂಡುವ ಸಮುದಾಯವಾಗಿ ಬದಲಿಸಬೇಕು (ಪುಟ 84) ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಸ್ಪರ್ಧೆ ನಡೆಯುವುದು ಎಲ್ಲಾ ರೀತಿಯ ಸಾಮರ್ಥ್ಯಗಳ ನಡುವೆ ಅಲ್ಲ. ಕೆಲವೆ ಕೆಲವು ಜನರು ನಿರ್ಧರಿಸುವ ಕೆಲವೇ ಕೆಲವು ಕ್ಷೇತ್ರಗಳಲ್ಲಿ ಮಾತ್ರ. ಪ್ರತಿ ದಿನವು ಬದಲಾಗುವ ಕಂಪ್ಯೂಟರ್ ತಂತ್ರಜ್ಞಾನದ ರೇಸಿನಲ್ಲಿ ಬಳಪ, ಸ್ಲೇಟು ಇಲ್ಲದ ಮಕ್ಕಳು ಸ್ಪರ್ಧಿಸಲು ಸಾಧ್ಯವೆ? ಸಾಧ್ಯವಿಲ್ಲದವರು ಸಾಯಲಿ ಎಂಬ ಧೋರಣೆ ಸರಿಯೆ ?

ಜಾಗತೀಕರಣ, ಆಧುನಿಕತೆಯನ್ನು ವಿವರಿಸುತ್ತಾ ಇವರು ಅಮೆರಿಕಾದ ಉದಾಹರಣೆ ನೀಡುತ್ತಾರೆ. ಬಹುರೂಪಿ ಸಾಂಸ್ಕೃತಿಕ ಸಂಯೋಗ ವ್ಯವಸ್ಥೆ ಅಮೆರಿಕಾದ ಅತ್ಯಲ್ಪ ಚರಿತ್ರೆಯಲ್ಲೆ ನಿರ್ಮಾಣವಾಗಿತ್ತು. ವಲಸೆ ಬಂದು ನೆಲೆಗೊಂಡ ಸಮುದಾಯಗಳು ಒಂದಾಗಿ ಬಾಳಬೇಕೆಂಬ ಪ್ರಜ್ಞೆಗೆ ಒಳಗಾಗಿದ್ದವು. ವಿಶ್ವದ ಹಲವು ಸಾಂಸ್ಕೃತಿಕ ಮನೋಧರ್ಮಗಳು ಅಲ್ಲಿ ನೆಲೆಯೂರಿ ಸಂಗಮಿಸಿ ಹೊಸಕಾಲದ ಹೊಸದೇಶದ ಬದುಕಿನ ನಿರ್ಮಾಣದಲ್ಲಿ ಒಂದಾಗಿದ್ದವು. ಎಂದು ಹೇಳುತ್ತಾರೆ. ಹೀಗೆ ಹೇಳುವಾಗ ಹೊಸದೇಶದ ಬದುಕಿನ ನಿರ್ಮಾಣ ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರನ್ನು ಹೊಸಕಿ ಹಾಕಿದ್ದನ್ನು ಗಣೇಶ್‌ರಂತಹ ಸಂವೇದನಾಶೀಲರು ಗಣನೆಗೆ ತೆಗೆದುಕೊಂಡಿಲ್ಲದಿರುವುದು ಆಶ್ಚರ್ಯ ಹುಟ್ಟಿಸುತ್ತದೆ.

ಜಾಗತೀಕರಣದ ಒಳದನಿಗಳೆಂದು ಎಂಟು ಅಂಶಗಳನ್ನು ಗಣೇಶ್‌ರವರು ಗುರುತಿಸಿದ್ದಾರೆ (ಪುಟ 17, 18, 19, 20) ಇದನ್ನು ಆಧರಿಸಿ ವಿಶ್ವ ಸಮೂಹ, ವಿಶ್ವ ಬಂಧುತ್ವ ವಿಶ್ವ ಮಾರುಕಟ್ಟೆ ಬಹುರಾಷ್ಟ್ರೀಯ ಉತ್ಪಾದನಾ ವಿಸ್ತರಣೆ ಹಾಗೆಯೇ ವಿಶ್ವ ಸಮಾನತೆ ಎಂಬ ದೊಡ್ಡ ಗುರಿಗಳು ಜಾಗತೀಕರಣದಲ್ಲಿವೆ (ಪುಟ 20) ಎನ್ನುತ್ತಾರೆ. ಮೊದಲ ಜಗತ್ತಿನ ತಂತ್ರಜ್ಞಾನದ ಕ್ರೌರ್ಯ, ಇಂದಿನ ಪ್ರಶ್ನಾರ್ಹ ಅಭಿವೃದ್ಧಿ ಮಾದರಿ, ಜಾಗತೀಕ ಸಭೆಗಳ ವೈಫಲ್ಯಗಳನ್ನು ನೋಡುವ ಗೋಜಿಗೇ ಹೋಗಿಲ್ಲ. ಜಾಗತೀಕರಣದ ಉದ್ದೇಶವೆ ಮಾರುಕಟ್ಟೆ ಆಸಕ್ತಿ (market interest). ಅದರ ಪರಮೋಚ್ಚ ಗುರಿಯೇ ಲಾಭ. ಮಾರುಕಟ್ಟೆ, ಲಾಭಕ್ಕೆ ಅನುಕೂಲಕರವಾಗಿ ಆದ ಕೆಲ ಬದಲಾವಣೆಗಳು ಕೊಂಚ ಉಪಯುಕ್ತವಾಗಿರಬಹುದೇ ಹೊರತು, ವಿಶ್ವ ಸಮಾನತೆ ಇತ್ಯಾದಿ ಎಂಬ ಯಾವ ಘನಂದಾರಿ ಉದ್ದೇಶವೂ ಜಾಗತೀಕರಣಕ್ಕೆ ಇಲ್ಲ.

ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆ ಬಗ್ಗೆಲೇಖಕರಿಗೆ Soft corner ಯಾಕೆಂದು ಅರ್ಥವಾಗಲಿಲ್ಲ. ಅಂತರ ರಾಷ್ಟ್ರೀಯ ಹಣಕಾಸು ಮೂಲಗಳು ತೃತೀಯ ಜಗತ್ತಿನ ಅಲಕ್ಷಿತ ಸಮುದಾಯಗಳಲ್ಲಿರುವ ಅಸಮಾನತೆಯನ್ನು ತೊಲಗಿಸಲು ನಿರಂತರವಾಗಿ ಕೈಗೊಳ್ಳುತ್ತಿರುವ ಯೋಜನೆಗಳನ್ನ.....(ಪುಟ 77) ಈ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಗಳ ಸಾಲದ ಹೊರೆಯಿಂದ ಸಂಪೂರ್ಣವಾಗಿ ಹೊರಬಂದು ಯಾವ ದೇಶ ಉದ್ಧಾರವಾಗಿದೆ? ವಿಶ್ವಬ್ಯಾಂಕ್ ಆಗಲಿ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಾಗಲಿ ಯಾವ ದೇಶದ ಅಸಮಾನತೆಯನ್ನು ಹೋಗಲಾಡಿಸಿವೆ ? ಇವೆಂತಹ ಸೋಗಲಾಡಿ ದಗಾಕೋರ ಸಂಸ್ಥೆಗಳೆಂದು ಜಗಜ್ಜಾಹೀರಾಗಿದೆ. ಅದಕ್ಕೆ ನೀರು, ಆರೋಗ್ಯದಂತಹ ಕ್ಷೇತ್ರಗಳಿಗೆ ಹಣ ನೀಡಿ ಸೇವಾನಿರತ ಸಂಸ್ಥೆಗಳೆಂಬ ಪೋಸು ನೀಡುವ ಅನಿವಾರ್ಯತೆ ಅವುಗಳಿಗೆ ಹುಟ್ಟಿಕೊಂಡಿದೆ.

ಲೇಖಕರು ಜಾಗತೀಕರಣ ವಿರೋಧ ಕುರಿತು ಹೇಳುತ್ತಲೆ ಅದರಿಂದ ಸಿಗುವ ಸವಲತ್ತುಗಳನ್ನು ಅನುಭವಿಸುವವರ ಬಣ್ಣ ಬಯಲಿಗೆಳೆದಿದ್ದಾರೆ. ಇಂದು ಅನೇಕ ಆದಿವಾಸಿಗಳು, ಮೀನುಗಾರರು ಜಾಗತೀಕರಣದ ವಿರುದ್ಧ ನಡೆಸುತ್ತಿರುವ ಹೋರಾಟವನ್ನು ಪರಿಗಣಿಸುವುದು ಬಹು ಮುಖ್ಯ. ಆ ಬಗ್ಗೆ ಅನಿಸಿಕೆ ಏನು?

ಖಾಸಗೀಕರಣಕ್ಕೆ ಸಮರ್ಥವಾಗಿ ಒಳಗಾದ ನಂತರ ಜಾತಿಗಳ ಸ್ವರೂಪವೇ ಬದಲಾಗಿ ಹೋಗುತ್ತದೆ. (ಪುಟ 79) ಖಾಸಗೀಕರಣ ಸಮರ್ಥವಾಗಿರೋ ಅಮೆರಿಕಾದಲ್ಲಿ ಜನಾಂಗ ಬೇಧ ಇನ್ನು ಯಾಕೆ ತಾಂಡವವಾಡುತ್ತಿದೆ? ಅಲ್ಲಿನ ಕರಿಯರಿಗೆ ಇಂದಿಗೂ ಸಮಾನತೆ ಎಂಬುದು ದೂರದ ಮಾತು.

ಅಮೆರಿಕರಣವೇ ಜಾಗತೀಕರಣವಲ್ಲ ಎಂದು ಸಮರ್ಥಿಸಿಕೊಳ್ಳಲು ಇವರು ದಕ್ಷಿಣ ಏಶಿಯಾ ರಾಷ್ಟ್ರಗಳ ವಿಶ್ವ ರಾಜಕಾರಣದ ಸಂಬಂಧ ಮತ್ತು ಅವುಗಳ ಅಣುಸ್ಫೋಟ ಪರೀಕ್ಷೆಯ ಸಾಮರ್ಥ್ಯವನ್ನು ಉದಾಹರಿಸುತ್ತಾರೆ. (ಪುಟ 148). ದೇಶದ ಜನರ ಬಗ್ಗೆ ಕಾಳಜಿ ಇಲ್ಲದ ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳನ್ನು ಸುರಿದು ಅಣುಬಾಂಬ್ ತಯಾರಿಸಿ (ಬಾಂಬ್ ತಯಾರಿಕೆ ಹಳಸಲು ತಂತ್ರಜ್ಞಾನ!) ಸ್ಫೋಟಿಸಿ ನಮ್ಮನ್ನು Big 5ನಲ್ಲಿ ಸೇರಿಸಿಕೊಳ್ಳಿ ಎಂದು ಗೋಗರೆಯುವುದು ಸಾಮರ್ಥ್ಯವೆ? ಜೀವಕೋಟಿಯನ್ನು ಒಂದೇ ಸಲಕ್ಕೆ ಇನ್ನಿಲ್ಲದಂತೆ ನಿರ್ನಾಮ ಮಾಡುವ ಬಾಂಬ್ ತಯಾರಿಕೆ ಮೊಗಳ್ಳಿಯಂತಹ ಸಂವೇದನಾಶೀಲ ಲೇಖಕರಿಗೆ ಸಾಮರ್ಥ್ಯವೆನಿಸಿದ್ದು ಆಶ್ಚರ್ಯ.

ವಿಶ್ವದ ಮಾರುಕಟ್ಟೆಯ ಎತ್ತರಕ್ಕೆ.......... ನಮ್ಮಲ್ಲೆ

ಮಿತಿಗಳಿವೆ.............. (ಪುಟ 144) ಇಲ್ಲಿ ಎತ್ತರವನ್ನು ನಿರ್ಧರಿಸುವವರು ಯಾರು? ಎತ್ತರಕ್ಕಿರುವ ಮಾನದಂಡಗಳೇನು? ಯಾವ್ಯಾವುದು Saleable ಅವನೆಲ್ಲ ಮಾರಾಟ ಮಾಡಿ ಲಾಭಮಾಡಿಕೊಳ್ಳುವ, ಆ ಮೂಲಕ ಹಿಡಿತ ಸಾಧಿಸುವ ಖೂಳರೇ ಎತ್ತರವನ್ನು ನಿರ್ಧರಿಸುವವರು. ಖೂಳತನ ಮುಚ್ಚಿಕೊಳ್ಳಲು ಬರಗಾಲದ ಮಕ್ಕಳಿಗೆ ಹಾಲಿನಪುಡಿ ಹಂಚುವ ಕಾರ್ಯಕ್ರಮ ಹಾಕಿಕೊಂಡು ಮಾನವೀಯತೆಯ ಪೋಸು ನೀಡುವ ವ್ಯಾಪಾರಿ ಸಂಸ್ಥೆಗಳ ಬಣ್ಣವನ್ನೂ ಗಣೇಶ್‌ರಂತಹವರು ಬಯಲಿಗೆಳೆಯಬೇಕಿತ್ತು. ಅರ್ಥಶಾಸ್ತ್ರದ ದೃಷ್ಟಿಕೋನವನ್ನು ಬದಿಗಿಟ್ಟು ಜಾಗತೀಕರಣವನ್ನು ನೋಡಲು ಸಾಧ್ಯವಿಲ್ಲ. ಆ ಪ್ರಯತ್ನವನ್ನು ಲೇಖಕರು ಮಾಡಿಲ್ಲ.

ಮೊದಲ ಜಗತ್ತಿನ ಜನರೂ ಸಹ ಜಾಗತೀಕರಣದ ವಿರುದ್ಧ ನಡೆಸಿರುವ ಹೋರಾಟಕ್ಕೆ (ಉದಾ. ಸಿಯಾಟಲ್) ಗಣೇಶರವರ ಪ್ರತಿಕ್ರಿಯೆ ಏನು?

ಗಣೇಶರವರಿಗೆ ಜಾಗತೀಕರಣದ ಅಪಾಯಗಳ ಅರಿವು ಇರುವುದು ಪುಸ್ತಕದಲ್ಲಿ ಗಮನಕ್ಕೆ ಬಂದರೂ ಅಪಾಯಗಳಿಗೆ ಹೆಚ್ಚು ಒತ್ತು ನೀಡದೆ ಪಟ್ಟು ಹಿಡಿದವರಂತೆ ಜಾಗತೀಕರಣವನ್ನು ಸಮರ್ಥಿಸಿಕೊಳ್ಳುತ್ತಾರೆ. ಜಾಗತೀಕರಣದ ವಿರುದ್ಧ ಮಾತನಾಡುತ್ತಲೇ ಅದರ ಲಾಭಗಳನ್ನು ಅನುಭವಿಸುವವರ ಬಣ್ಣ ಬಯಲಿಗೆಳೆಯುವುದು ಅಷ್ಟು ಅನಿವಾರ್ಯವಾಗಿತ್ತೆ ಎಂಬ ಅನುಮಾನ ನನ್ನ ಕಾಡುತ್ತಿದೆ.

ಸಮಾನತೆ, ಸಹಬಾಳ್ವೆ ಆಧರಿಸಿದ ವಿಶ್ವಾತ್ಮಕತೆ ಮತ್ತು ಜಾಗತೀಕರಣವೆರಡೂ ಬೇರೆ. ಜಾಗತೀಕರಣಕ್ಕೆ ಯಾವ ಮಾನವೀಯ ಮೌಲ್ಯವೂ ಇಲ್ಲ. ದೇಶಗಳ ಭೇದವಿಲ್ಲದೆ ಎಲ್ಲಾ ಲಾಭಕೋರರು ಒಂದುಗೂಡಿ ಏಕಸ್ವಾಮ್ಯತೆ ಸ್ಥಾಪಿಸುವುದೇ ಜಾಗತೀಕರಣದ ಉದ್ದೇಶ. ಈ ಜಾಗತೀಕರಣ ಸಮಷ್ಟಿ ಪ್ರಜ್ಞೆ, colletive ಬದುಕನ್ನು ನಂಬುವ ದಲಿತ ಸಮುದಾಯಗಳಿಗೆ ಕೆಡುಕನ್ನಷ್ಟೇ ಮಾಡಬಲ್ಲದು. ಜಾಗತೀಕರಣ ಕುರಿತು ನಿರಂತರ ಚಿಂತನೆ ನಡೆಸುತ್ತಲೆ ಅದರ ವಿರುದ್ಧ ಹೋರಾಡುವ ತಂತ್ರ ರೂಪಿಸುಕೊಳ್ಳುವ ತುರ್ತು ಸಮಾನತೆಯನ್ನು ನಂಬುವ ಎಲ್ಲರಿಗೂ ಇದೆ. ಈ ಪ್ರಕ್ರಿಯೆಯಲ್ಲಿ ಬಣ್ಣ ಬಯಲಾಗುವುದು ತಾನೆತಾನಾಗಿ ಆಗಬಹುದೇನೋ.

○ *ಸರಸ್ವತಿ ದು.*

Enough is Enough - ಸಾಕಪ್ಪಾ ಸಾಕು!

(Enough is Enough ಅಂದರೆ 'ಸಾಕಪ್ಪಾ ಸಾಕು' ಎಂಬುದು ಗ್ರೆನಡಾದ ಆರ್ಥಿಕ ತಜ್ಞ ಡೇವಿಸಲ್ ಎಲ್ ಬುಧೂ ಐ.ಎಂ.ಎಫ್.ನ ತನ್ನ ಕೆಲಸಕ್ಕೆ ರಾಜೀನಾಮೆ ನೀಡುತ್ತಾ ಆ ಸಂಸ್ಥೆಯ ಮುಖ್ಯಸ್ಥರಿಗೆ ಬರೆದ ರಾಜೀನಾಮೆ ಪತ್ರವನ್ನು ಪ್ರಕಟಿಸಿದ ಪುಸ್ತಕ. ಇದಕ್ಕೆ ಮೊದಲು 1966ರಲ್ಲಿ ಅವರು ವಿಶ್ವಬ್ಯಾಂಕ್ ಸೇರಿದ್ದರು. ತಮ್ಮ ರಾಜೀನಾಮೆಗೆ ಕಾರಣಗಳನ್ನು ಸವಿವರವಾಗಿ ನೀಡುತ್ತಾ ಅವರು ಹೊರಗೆಡಹಿದ ಸಂಗತಿಗಳು ಈ ಸಂಸ್ಥೆಯ ಕರಾಳ ರೂಪವನ್ನು ಮೂರನೇ ಜಗತ್ತಿನ ದೇಶಗಳ ಮುಂದಿಟ್ಟಿವೆ. ಈ ದೀರ್ಘ ಬಹಿರಂಗ ಪತ್ರದಲ್ಲಿ ಏಳು ಭಾಗಗಳಿವೆ. ತಮ್ಮ ರಾಜೀನಾಮೆಗೆ ಅವರು ನೀಡುವ ಕಾರಣಗಳನ್ನು ಇಲ್ಲಿ ಕೊಡಲಾಗಿದೆ.)

ನಾನು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಸಿಬ್ಬಂದಿ ವರ್ಗದಿಂದ 12 ವರ್ಷಗಳ ನಂತರ, 1000 ದಿನಗಳ ಅಧಿಕೃತ ಕೆಲಸದ ನಂತರ ರಾಜೀನಾಮೆ ಕೊಟ್ಟೆ. ಈ ಅವಧಿಯಲ್ಲಿ ನಾನು ನಿಮ್ಮ ಔಷಧಿಯನ್ನು ಮತ್ತುನಿಮ್ಮ ತಂತ್ರಗಳ ಮೂಟೆಯನ್ನು ಲ್ಯಾಟಿನ್ ಅಮೆರಿಕನ್, ಕೆರೀಬಿಯನ್ ಮತ್ತು ಆಫ್ರಿಕನ್ ದೇಶಗಳಿಗೆ ಬೀದಿ ಮಾರಾಟ ಮಾಡಿದೆ. ನನಗೆ ರಾಜೀನಾಮೆ ಒಂದು ಅಮೂಲ್ಯ ವಿಮೋಚನೆ. ಏಕೆಂದರೆ ಅದರೊಂದಿಗೆ ನಾನು ಬಡ ಹಸಿದ ಕೋಟ್ಯಾಂತರ ಜನಗಳ ರಕ್ತದಿಂದ ಮಲಿನವಾಗಿದೆ ಎಂದು ನಾನು ಭಾವಿಸಿರುವ ನನ್ನ ಕೈಗಳನ್ನು ತೊಳೆಯುವ ಸ್ಥಳದತ್ತ ಒಂದು ಮೊದಲ ದೊಡ್ಡ ಹೆಜ್ಜೆ ಇಟ್ಟಿದ್ದೇನೆ. ಮಿ. ಕಾಮ್‌ಡೆಸುಸ್, ರಕ್ತ ಎಷ್ಟಿದೆಯೆಂದರೆ ಅದು ನದಿಯಾಗಿ ಹರಿಯುತ್ತಿದೆ ಎಂಬುದು ನಿಮಗೆ ಗೊತ್ತು. ಅದು ಒಣಗಿ ಬಿಡುತ್ತದೆ ಕೂಡ. ನನ್ನ ಮೈಮೇಲೆಲ್ಲಾ ಘನೀಕರಿಸುತ್ತದೆ. ಕೆಲವೊಮ್ಮೆ ನನಗನಿಸುತ್ತದೆ ನಿಮ್ಮ ಹೆಸರಲ್ಲಿ, ನಿಮ್ಮ ಮೊದಲಿದ್ದವರ ಹೆಸರಿನಲ್ಲಿ ಮತ್ತು ಅಧಿಕೃತ ಮೊಹರಿನಡಿ ನಾನು ಮಾಡಿದ್ದನ್ನು ತೊಳೆಯಲು ಇಡೀ ಜಗತ್ತಿನ ಸಾಬೂನು ಸಾಲಲಿಕ್ಕಿಲ್ಲ. ಆದರ ನಾನು ನಿರೀಕ್ಷೆಯಿಟ್ಟುಕೊಳ್ಳಬಹುದು, ಅಲ್ಲವೇ? ಖಂಡಿತವಾಗಿಯೂ ನಾನು ನಿರೀಕ್ಷೆ ಇಟ್ಟುಕೊಳ್ಳಬಹುದು. ನನ್ನ ವಿಶ್ವದ ಹೃದಯದಲ್ಲಿ ಸಹಾನುಭೂತಿ ಮತ್ತು ಕ್ರೋಧ ಇದೆಯೆಂದು ನಾನು ನಿರೀಕ್ಷೆಯಿಟ್ಟುಕೊಳ್ಳಬಹುದು. ಜನ ಖಂಡಿತಾ ಎದ್ದು ನಿಲ್ಲುತ್ತಾರೆ-ನಾನು ಏನು ಹೇಳಬೇಕೆಂದಿದ್ದೇನೆ ಎಂದು ಕೇಳಲು, ಗಮನಿಸಲು ಹಾಗೂ ನಿಮ್ಮ ಉತ್ತರಕ್ಕೆ ಕಿವಿಕೊಡಲು. ನೀವು ಉತ್ತರಿಸಲೇ ಬೇಕು. ಏಕೆಂದರೆ ನಾನು ಮಾಡುವ ಆಪಾದನೆಗಳು, ಹಗುರವಾದದ್ದೇನಲ್ಲ. ಅವು ಪಾಶ್ಚಿಮಾತ್ಯ ಸಮಾಜದ ಹೃದಯವನ್ನೇ, ಪಾಶ್ಚೀಮಾತ್ಯ ನೈತಿಕತೆಯನ್ನು ಮತ್ತು ಯುದ್ಧದ ನಂತರದ ಸರಕಾರಗಳ ನಡುವಿನ ಸಾಂಸ್ಥಿಕತೆಯನ್ನು ತಟ್ಟುವಂತಹ ಆಪಾದನೆಗಳು. ಇವೆಲ್ಲಾ ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಮತ್ತು ಜಾಗತಿಕ ದಕ್ಷತೆಯನ್ನು ಸ್ಥಾಪಿಸುವ ಮತ್ತು ಉಳಿಸಿಕೊಳ್ಳುವ ಹೆಸರಲ್ಲಿ ಮೋಸಗಳ, ಮುಖವಾಡಗಳ ಮಟ್ಟಕ್ಕೆ ಇಳಿದಂತವುಗಳು.

ಕೃಪೆ: ಸಿ. ಆರ್. ಭಟ್‌ರವರ 'ಜಾಗತೀಕರಣದ ಹತ್ತು ವರ್ಷಗಳು ಪುಸ್ತಕ

ಜಾಗತೀಕರಣ, ಪ್ರವಾಸೋದ್ಯಮ ಮತ್ತು ವೇಶ್ಯಾವೃತ್ತಿ

ಪೂರ್ವ ಏಷ್ಯಾದಲ್ಲಿ ಬಹುರಾಷ್ಟ್ರೀಯ ಉದ್ಯಮಗಳ ಬೆಳವಣಿಗೆಯು ನೇರವಾಗಿ ಪ್ರವಾಸೋದ್ಯಮದ ಹುಟ್ಟು ಮತ್ತು ಸಾವಿರಾರು ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ವ್ಯವಸ್ಥಿತವಾದ ವೇಶ್ಯಾವೃತ್ತಿಗೆ ಇನ್ನೊಂದು ಹೆಸರಾದ 'ಆತಿಥ್ಯ ಉದ್ಯಮ' (Hospitality Industry)ಗಳಿಗೆ ಸಂಬಂಧಿಸಿದೆ. ಥಾಯ್‌ಲೆಂಡಿನ ರೋಸಿ ಟ್ರಾವಲ್ ಕಂಪನಿಯ ಜಾಹೀರಾತೊಂದು ಹೀಗಿದೆ :

"ಥಾಯ್‌ಲೆಂಡ್ ವೈಪರೀತ್ಯಗಳೇ ತುಂಬಿರುವ ಒಂದು ಪ್ರಪಂಚ. ಇಲ್ಲಿ ಸಾಧ್ಯತೆಗಳಿಗೆ ಮಿತಿಯೇ ಇಲ್ಲ.

ಈ ರೋಮಾಂಚಕ ದೇಶದಲ್ಲಿ ಏನಾದರೂ-ಅದರಲ್ಲೂ ವಿಶೇಷವಾಗಿ ಹುಡುಗಿಯರ ವಿಷಯಕ್ಕೆ ಬಂದಾಗ-ನಡೆಯುತ್ತದೆ. ಆದರೂ ಥಾಯಲೆಂಡಿಗೆ ಭೇಟಿ ನೀಡುವವರು ಯಾರಿಗೂ ತಿಳಿಯದಂತೆ ಸುಖಭೋಗಗಳಲ್ಲಿ ತೊಡಗಬಹುದಾದಂಥ ಸ್ಥಳಗಳನ್ನು ಕಂಡುಕೊಳ್ಳುವುದೊಂದು ಸಮಸ್ಯೆಯಾದಂತೆ ಕಾಣುತ್ತದೆ. ಇದಕ್ಕೆ ಸಂಬಂಧಿಸಿದಂತೆ ರೋಸಿ ಏನನ್ನೋ ಮಾಡಿದ್ದಾಳೆ. ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಬೆಲೆ ಪಟ್ಟಿಯಲ್ಲಿರುವಂತೆ ಲೈಂಗಿಕ ಭೋಗಗಳನ್ನು (erotic plesures) ಪಡೆಯಲು ಥಾಯ್ಲೆಂಡಿಗೆ ಪ್ರವಾಸವನ್ನು ನಿಗದಿ ಪಡಿಸಿಕೊಳ್ಳಿ."

-ಇಲ್ಸೆಲೆಂಜ್ 'Tourism Prostitution in Asia', ISIS International Bulletin No. 13 (1979), p.7

ಇಪ್ಪತ್ತು ವರ್ಷ ವಯಸ್ಸಿನ ನಾಯ್ ಥಾಯ್ಲೆಂಡಿನವಳು. ಇವಳಿಗೆ ಅತ್ಯಗತ್ಯವಾದ ಎರಡನೇ ಆದಾಯ ವೇಶ್ಯಾವೃತ್ತಿಯಿಂದ ದೊರೆಯುತ್ತದೆ. ಇವಳು ಬ್ಯಾಟರಿ ಕಾರ್ಖಾನೆಯೊಂದರಲ್ಲಿ ಕಾರ್ಮಿಕಳಾಗಿದ್ದಾಳೆ. "ನನಗೆ ದಿನವೊಂದಕ್ಕೆ 25 ಬಹ್ತ್ (60 ರಿಂದ 65 ರೂ.ಗಳು) ಸಿಗುತ್ತವೆ. ಆದರೆ ಅದು ನನ್ನ ಖರ್ಚು ವೆಚ್ಚಗಳಿಗೆ ಸಾಕಾಗುವುದಿಲ್ಲ. ನನ್ನ ಆಹಾರ, ಬಸ್ ಟಿಕೆಟ್ ಮತ್ತಿತರ ಖರ್ಚುಗಳಿಗೆ ಅದು ಹೇಗೆ ಸಾಕಾಗುತ್ತದೆ? ನಾನು ಖರ್ಚು ಮಾಡುವ ಸ್ವಭಾವದವಳು. ನಾನು ನನ್ನ ತಂದೆ ತಾಯಿಗಳಿಗೆ ಹಣ ಕಳುಹಿಸಲು ರಾತ್ರಿಯೂ ದುಡಿಯ ಬೇಕು." ಎನ್ನುತ್ತಾಳೆ.

-Onze wereld : Sex Tourism to Thailand : International Bulletin No. 13 (1979), p. 9.

ಇಲ್ಲಿ ವೇಶ್ಯಾವೃತ್ತಿಯಲ್ಲಿರುವವರಲ್ಲಿ ಅನೇಕರು ಮೊದಲಿಗೆ ಕಾರ್ಖಾನೆಗಳಲ್ಲಿ ದುಡಿದವರು, ಉದ್ಯೋಗದ ಅನಿವಾರ್ಯತೆ ಇದ್ದವರು. ಅಥವಾ ಕಾರ್ಖಾನೆಗಳಲ್ಲಿ ಉದ್ಯೋಗಗಳನ್ನು ಹುಡುಕಿಕೊಂಡು ನಗರಗಳಿಗೆ ಬಂದ ಚಿಕ್ಕ ವಯಸ್ಸಿನ ಗ್ರಾಮೀಣ ಹೆಣ್ಣುಮಕ್ಕಳು.

ಫಿಲಿಪೈನ್ಸ್‌ನಲ್ಲಿ ಪ್ರವಾಸೋದ್ಯಮವೆಂದರೆ, ಸರಕಾರದ ಅಭಿವೃದ್ಧಿಗಾಗಿ ಇರುವ ಕಾರ್ಯಯೋಜನೆಯ ಒಂದು ಭಾಗ. ಏಕೆಂದರೆ, ಇಲ್ಲಿ ಪ್ರವಾಸೋದ್ಯಮ ವಿದೇಶಿ ವಿನಿಮಯದ ಸಂಪನ್ಮೂಲದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿದೆ. ಅದರ ಯಶಸ್ಸು ಮುಖ್ಯವಾಗಿ ಜಪಾನಿನಿಂದ ಬರುವ ಪುರುಷ ಪ್ರವಾಸಿಗಳಿಗೆ ಒದಗಿಸುವ 'ಆತಿಥ್ಯ ಉದ್ಯಮ'ದಲ್ಲಿದೆ. ಅಧಿಕೃತವಾಗಿ ಇಲ್ಲಿ ಸುಮಾರು ಒಂದು ಲಕ್ಷ "ಆತಿಥೇಯ ಮಹಿಳೆಯರು" ಇದ್ದಾರೆ. ಇವರೆಲ್ಲಾ ಬಾರುಗಳು, ಕೆಫೆಗಳು ಮುಂತಾದ ಪರವಾನಗಿ ಹೊಂದಿರುವ ವ್ಯಾಪಾರೋದ್ಯಮಗಳಲ್ಲಿ ದುಡಿಯಲು ಸರಕಾರದಿಂದ ಹೊಂದಿರುವ ವ್ಯಾಪಾರೋದ್ಯಮ ಗಳಲ್ಲಿ ದುಡಿಯಲು ಸರಕಾರದಿಂದ ಅನುಮತಿ ಪಡೆದಿರುವವರು. ಆದರೆ ನಿರ್ದಿಷ್ಟ ಅಂಕಿ ಅಂಶಗಳಲ್ಲಿ ಹೇಳಬೇಕೆಂದರೆ, ಬೀದಿ ಬದಿಯ ವೇಶ್ಯೆಯರು, ಕರೆವೆಣ್ಣು (ಕಾಲ್‌ಗರ್ಲ್)ಗಳು ಮತ್ತು ವೇಶ್ಯಾವಾಟಿಕೆಯಲ್ಲಿ ದುಡಿಯುವ ಮಹಿಳೆಯರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಆದರೆ ಇವರಲ್ಲಿ ಯಾರೂ ಸರಕಾರದಲ್ಲಿ ನೋಂದಾಯಿಸಿರುವುದಿಲ್ಲ.

ಜಪಾನ್ ಮತ್ತು ಫಿಲಿಪೈನ್ಸಿನ ಪ್ರವಾಸಿ ಸಂಸ್ಥೆಗಳು ಮನಿಲಾಗೆ ಪ್ರವಾಸವನ್ನು ಏರ್ಪಡಿಸುತ್ತವೆ. ಇದರಲ್ಲಿ ವಸತಿ ವ್ಯವಸ್ಥೆಯಿಂದ ಹಿಡಿದು ಮಾರುಕಟ್ಟೆಯಲ್ಲಿ ಖರೀದಿಸುವ ಮತ್ತು ರಾತ್ರಿ ಕ್ಲಬ್ಬುಗಳು ಮತ್ತು ಕ್ಯಾಬರೆ ನಡೆಯುವ ಸ್ಥಳಗಳಲ್ಲಿ ಕಂಡುಬರುವ ಮಹಿಳೆಯರಲ್ಲಿ ಆಯ್ಕೆಯಾದವರನ್ನು ಪ್ರವಾಸಿಗರ ಜೊತೆಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನೂ ಮಾಡುತ್ತವೆ. ಒಬ್ಬ ಮಹಿಳೆಯನ್ನು ಒಂದು ರಾತ್ರಿಗೆ 60 ಡಾಲರಿಗೆ ಪುರುಷನೊಬ್ಬ ಕೊಂಡುಕೊಳ್ಳಬಹುದು. ಆ ವೊತ್ತದಲ್ಲಿ ಕ್ಲಬ್ ಮಾಲೀಕ ಮತ್ತು ಪ್ರವಾಸೀ ಮಾರ್ಗದರ್ಶಿಗಳು ತಮ್ಮ ಪಾಲುಗಳನ್ನು ತೆಗೆದುಕೊಂಡ ಮೇಲೆ ಉಳಿದ 6 ಡಾಲರುಗಳಷ್ಟು ಹಣ ಆ ಮಹಿಳೆಗೆ ದೊರಕುತ್ತದೆ. 1976ರಲ್ಲಿ ಮನಿಲಾದಲ್ಲಿ ಐಎಂಎಫ್, ವಿಶ್ವಬ್ಯಾಂಕಿನ ಸಮ್ಮೇಳನಕ್ಕೆಂದು ಕಟ್ಟಿದ ಕೆಲವು ಅತ್ಯುತ್ತಮ ಹೋಟೆಲ್ಲುಗಳು

ತಮ್ಮ ಅಗ್ಗದ ವಸತಿ ದರಗಳನ್ನು ಹೆಚ್ಚಿಸಲು ವೇಶ್ಯಾವೃತ್ತಿಯನ್ನು ಅವಲಂಬಿಸಿವೆ.

-ಎ. ಲಿನ್ ನ್ಯೂಮನ್ : 'ಹಾಸ್ಪಿಟಾಲಿಟಿ ಗರ್ಲ್ಸ್ ಇನ್ ದಿ ಫಿಲಿಪೈನ್ಸ್'; ಸೌತ್ ಈಸ್ಟ್ ಏಷ್ಯಾ ಕ್ರಾನಿಕಲ್, ಜನವರಿ-ಫೆಬ್ರವರಿ : 1979, ಪು. 18

ದಕ್ಷಿಣ ಕೊರಿಯಾ

ದಕ್ಷಿಣ ಕೊರಿಯಾದಲ್ಲಿ ಕೂಡ ಪ್ರವಾಸೋದ್ಯಮ ಒಂದು ಬೃಹತ್ ಉದ್ಯಮ ಎನ್ನಬಹುದು. ಇದರಿಂದ ದೇಶಕ್ಕೆ ಬರುವ ವಾರ್ಷಿಕ ಆದಾಯ ಸುಮಾರು 270 ದಶಲಕ್ಷ ಡಾಲರುಗಳು. ಇದರ ಯಶಸ್ಸಿಗೆ 'ಕಿಯಾಸೆಂಗ' (ವೇಶ್ಯೆಯ)ರೇ ಕಾರಣ. ಇಲ್ಲಿ ವೇಶ್ಯಾವೃತ್ತಿ ವಿರೋಧಿ ಕಾನೂನು ಇದೆಯಾದರೂ, ಸರಕಾರ ಗುರುತಿನ ಕಾರ್ಡುಗಳನ್ನು ನಿಯಮಿತವಾಗಿ ನೀಡುವ ಮೂಲಕ 'ಕಿಯಾಸೆಂಗ'ರು ಪ್ರವಾಸೀ ಸ್ಥಳಗಳಲ್ಲಿ ಕೆಲಸ ಮಾಡಲು ಅನುಮತಿ ದೊರೆಯುವಂತೆ ನೋಡಿಕೊಳ್ಳುತ್ತದೆ. ಜಪಾನಿನ ಪ್ರವಾಸೀ ಸಂಸ್ಥೆಗಳು ದಕ್ಷಿಣ ಕೊರಿಯಾ ಒಂದು "ಪುರುಷರ ಸ್ವರ್ಗ" ಎಂದು ತಮ್ಮ ಜಾಹೀರಾತುಗಳಲ್ಲಿ ಬಣ್ಣಿಸುತ್ತವೆ. ಇವು ಕಿಯಾಸೆಂಗ್ ಪಾರ್ಟಿಗಳು, ಕಿಯಾಸೆಂಗ್ ಹೋಟೆಲ್ಲುಗಳು ಮತ್ತು ಕಿಯಾಸೆಂಗ್ ಮನೆಗಳನ್ನು ಒಳಗೊಂಡ ಪ್ರವಾಸವನ್ನು ವ್ಯವಸ್ಥೆಗೊಳಿಸುವ ಆಶ್ವಾಸನೆಯನ್ನು ನೀಡುತ್ತವೆ. ಪ್ರವಾಸಿಯೊಬ್ಬ ದಕ್ಷಿಣ ಕೊರಿಯಾದ ಮಹಿಳೆಯೊಬ್ಬಳನ್ನು ಒಂದು ರಾತ್ರಿಗೆ 75 ಡಾಲರ್‌ಗಳನ್ನು ಕೊಟ್ಟು ಕೊಂಡುಕೊಳ್ಳಬಹುದು. ಅವಳು ತನ್ನ ಖುಷಿಗಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧಳಾಗಿರಬೇಕೆಂದು ಅವನು ನಿರೀಕ್ಷಿಸುತ್ತಾನೆ. ಉದ್ಯಮ ಕೂಡ ಅದನ್ನು ಪ್ರೋತ್ಸಾಹಿಸುತ್ತದೆ. ಈ 'ಪುರುಷರ ಸ್ವರ್ಗ' ಬಹುರಾಷ್ಟ್ರೀಯ ವಾಣಿಜ್ಯೋದ್ಯಮಿಗಳು, ಅಮೆರಿಕದ ಸೈನಿಕ ಸಿಬ್ಬಂದಿಗಳು ಮತ್ತು ಸರಕಾರಿ ಅಧಿಕಾರಿಗಳಿಗೆ ಈ ಸೇವೆಯನ್ನು ನೀಡುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ಮತ್ತು ಬ್ಯಾಂಕುಗಳು 'ಕಿಯಾಸೆಂಗ್' ಹೋಟೆಲ್ಲುಗಳು, ಸಂಸ್ಥೆಗಳು ಮತ್ತು ಸಾರಿಗೆ ವ್ಯವಸ್ಥೆಗಳ ಮೇಲೆ ಭಾರೀ ಬಂಡವಾಳವನ್ನು ಹೂಡುತ್ತವೆ.

-Takahashi Kikue : "Kiasaeng Tourism", ISIS, International Bulletin
No. 13 (1979), p. 23

ಸಂಗ್ರಹ : ವೇಧ, ವನಜ

ಜಾಗತಿಕ ಸಮಾವೇಶಗಳಲ್ಲಿ ಪ್ರತಿರೋಧ

ಎಸ್.ಎ.ಪಿ./ಎಲ್.ಪಿ.ಜಿ. (Liberalisation, Privatisation, Globalization) ತ್ವರಿತವಾಗಿ ಜಾರಿಗೊಳಿಸುತ್ತಿರುವ ಶ್ರೀಮಂತ ಜಿ-7 ರಾಷ್ಟ್ರಗಳಾದ ಅಮೇರಿಕಾದ ಮತ್ತು ಯುರೋಪ್ ಮಧ್ಯೆ, ಅಮೇರಿಕಾ ಮತ್ತು ಜಪಾನ ಮಧ್ಯೆ ಜಾಗತಿಕ ವ್ಯಾಪಾರ ವ್ಯವಹಾರಗಳಲ್ಲಿ ಪಾಲುಪಡೆಯುವ ಕುರಿತು ಬಿಕ್ಕಟ್ಟು ತಲೆದೋರುತ್ತಿವೆ. ಶ್ರೀಮಂತ ರಾಷ್ಟ್ರಗಳ ಒಳಗೆ ಉದ್ಯೋಗ ಇಲ್ಲದ ಅಭಿವೃದ್ಧಿಯ ಈ ಆರ್ಥಿಕ ನೀತಿಯ ಕುರಿತು, ಮುಖ್ಯವಾಗಿ ಕಾರ್ಮಿಕರಿಂದ ಭಾರೀ ವಿರೋಧ ಸಿಡಿದೆದ್ದಿದೆ. 1999ರ ಡಿಸೆಂಬರ್‌ನಲ್ಲಿ ಅಮೇರಿಕದ ಸೀಟ್ಲ್ ನಗರದಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಮೊದಲ ಶೃಂಗ ಸಭೆ ನಡೆಯುತ್ತಿರುವಾಗ, ಅಮೇರಿಕಾದ ಕಾರ್ಮಿಕ ಸಂಘಟನೆಗಳು, ಪರಿಸರವಾದಿಗಳು, ಮೂರನೇ ಜಗತ್ತಿನ ಕೆಲವು ಸಂಘಟನೆಗಳು, ಅನೇಕ ಜಾಗತಿಕ ಸರಕಾರೇತರ ಸಂಘಟನೆಗಳು (NGOs) ನಡೆಸಿದ ಭಾರೀ ಪ್ರತಿಭಟನೆಗಳಿಂದ ಸಮ್ಮೇಳನದ ಕಾರ್ಯಕ್ರಮಗಳು ಮೊಟಕುಗೊಂಡವು. ಮುಂದಿನ ಸುತ್ತಿನ ಒಪ್ಪಂದಗಳಿಗೆ ಬರಲಾಗಲಿಲ್ಲ. ಹಿಂದಿನ ಸುತ್ತಿನ ಒಪ್ಪಂದಗಳನ್ನೇ ಶ್ರೀಮಂತ ರಾಷ್ಟ್ರಗಳು ಜಾರಿಗೊಳಿಸದೇ ಇರುವದನ್ನು ಕೆಲವು ಅಭಿವೃದ್ಧಿಶೀಲ ದೇಶಗಳ ಪ್ರತಿನಿಧಿಗಳು ತರಾಟೆಗೆ ತೆಗೆದುಕೊಂಡರು.

ಕೃಪೆ : ಸಿ. ಆರ್. ಭಟ್‌ರವರ 'ಜಾಗತೀಕರಣದ ಹತ್ತು ವರ್ಷಗಳು ಪುಸ್ತಕ

"ಹೀಗ್ಯಾಕೆ ಆಯ್ತೋ ಅರ್ಥಾನೇ ಆಗಲ್ಲ"

○ ಚಿತ್ರ ಎಸ್.



ಕೇರಳದ ಒಂದು ಹಳ್ಳಿಗೆ ಹೋಗಿದ್ದೆವು. ಗುಡ್ಡ ಬೆಟ್ಟಗಳಿಂದ ಸುತ್ತುವರೆದ ಕಣಿವೆ ಊರು ಅದು. ಬೆಂಗಳೂರಿಂದ 4-5 ಗೆಳತಿಯರು ಸೇರಿ ಹೋಗಿದ್ದೆವು. ಅಲ್ಲಿಯ ಒಂದು ಸಂಸ್ಥೆ 'ವೈಜ್ಞಾನಿಕ ಮನೋಭಾವ ಮತ್ತು ಮೂಢನಂಬಿಕೆ' ಬಗ್ಗೆ ಒಂದು ಕಾರ್ಯಾಗಾರ ನಡೆಸಿದ್ದರು. ಅದಕ್ಕಾಗಿ ನಮ್ಮಲ್ಲಿ ಒಬ್ಬಬ್ಬರು ರಿಸೋರ್ಸ್ ಜನರಾಗಿ ಹೋಗಿದ್ದೆವು. ಗುಂಪಿನಲ್ಲಿ ಸುಮಾರು 25 ಜನರಿದ್ದೆವು. ನಮ್ಮ ಹೊರತು ಮಿಕ್ಕೆಲ್ಲರೂ ಸುತ್ತ ಮುತ್ತಲ ಗ್ರಾಮದವರು, ಸಿಟಿಯವರು. ಎರಡು ದಿನಗಳ ಕೊರೆತದ ನಂತರ ಊರಾಚೆಯ ಬೆಟ್ಟಕ್ಕೆಂದು picnic ಹೊರಟೆವು. ಪಂಚೆ ಶರಟು ತೊಟ್ಟ ಗಂಡಸರಾಗಲಿ, ದಾವಣಿ, ಸೀರೆ ಉಟ್ಟ ಹೆಂಗಸರಾಗಲಿ ಎಲ್ಲರೂ ಖುಷಿಯಲ್ಲಿದ್ದೆವು. ಹಾಡು ಹರಟೆ ಊಟದ ನಂತರ ಏನಾದರೂ ಆಟ ಆಡೋಣ ಎಂದು ಯಾರೋ ಬಾಯ್ಬಿಟ್ಟರು.

ಕಾರ್ಡು, ಚೆಸ್‌ಬೋರ್ಡ್, ಕೇರಂಬೋರ್ಡ್, ಬ್ಯಾಟ್, ವಿಕೆಟ್, ನೆಟ್, ರ್‍ಯಾಕೆಟ್, ಕಾಕ್ ಏನಂದ್ರೆ ಏನೂ ಇಲ್ಲ-ಏನಾಟ ಆಡೋದು ಎಂದು ನಾವು (ಬೆಂಗಳೂರಿನವರು) ಗೊಣಗಿದೆವು. ಥಟ್ಟನೆ ಗೋಪಾಲ್ suggest ಮಾಡಿದ. 'ಐದು ನಿಮಿಷಗಳ ಅವಧಿಯಲ್ಲಿ ಈ ಬೆಟ್ಟವನ್ನು ಯಾರು ಹತ್ತಿ ಇಳಿಯುತ್ತಾರೋ ಅವರಿಗೆ 10 ರೂಪಾಯಿಯ ತಿಂಡಿ!ಎಂದು declare ಮಾಡಿದ. ನಾವು ಅಯ್ಯೋ ಜೀನ್ಸ್ ತರಲೇ ಇಲ್ಲ ಎಂದು ತಲೆ ಚಚ್ಚಿಕೊಂಡವು. ಸರಿ ಶೂ ಲೇಸ್ ಬಿಗಿದು ಸ್ವಲ್ಪ warm up ವ್ಯಾಯಾಮ ಮಾಡಿ 'ರೆಡಿ' ಎಂದೆವು. ಲಂಗವನ್ನೋ, ಸೀರೆಯನ್ನೋ ಮೊಣಕಾಲ ತನಕ ಎತ್ತಿ ಸೊಂಟಕ್ಕೆ ಸಿಕ್ಕಿಸಿದ ಆ ಹಳ್ಳಿ ಹುಡುಗಿಯರು. ಹೇಂ! ಬನ್ನಿ ಬನ್ನಿ ಎಂದು ಕಿಚಾಯಿಸಿದರು.

1....2....3.... ಹತ್ತಿ! ಓಡಿ! ಕಮಾನ್! ...ಸರಳಾ. ರವಿ, ಚಂದ್ರಿಕಾ, ರೋಜಾರಿಯೋ, ಸರಸ, ಚೆನ್ನಮ್ಮ, ಪೌಲೀನ್, ಗೋಪಾಲದಾಸ್ ಭರ ಭರ ಏರತೊಡಗಿದರು. ನಾವು (ಬೆಂಗಳೂರಿನವರು) ಇನ್ನೂ ಅರ್ಧ ಫರ್ಲಾಂಗು ಹತ್ತಿಲ್ಲ. ಬೆಟ್ಟದ ತುದಿಗೆ ನಿಂತ ಹುಡುಗ ಹುಡಿಗಿಯರು ನಮ್ಮನ್ನು ನೋಡಿ ಕಿಸಿ ಕಿಸಿ ನಗುತ್ತಿದ್ದರು. ಕೆಲವರು ಆಗಲೇ ಕೆಳಗೂ ಇಳಿದು ಬಂದಿದ್ದರು. ನಮಗೆ ಸರಿಯಾದ ಮಂಗಳಾರತಿ ಆಗಿತ್ತು.

ನಾವು (ಬೆಂಗಳೂರಿನವರು) ಎಜುಕೇಟೆಡ್, ಆದ್ದರಿಂದ ಜ್ಞಾನ ಹೆಚ್ಚು, ಆದ್ದರಿಂದ ಶುಚಿಯಾದ ಪೌಷ್ಟಿಕರವಾದ ಆಹಾರವನ್ನೇ ತಿನ್ನುತ್ತೇವೆ. ಪಾಶ್ಚೀಕರಿಸಿದ ಹಾಲು, ಛಾಂಪಿಯನ್ ಆಗುವ ಪೇಯಗಳು, ಮೊಸರು, ದಿನಕ್ಕೊಂದು ಮೊಟ್ಟೆ, ಗೋಧಿ, ತುಪ್ಪ, ಮೀನು, ತರಕಾರಿಗಳು, ಊಟವಾದ ನಂತರ ಹಣ್ಣು ಇತ್ಯಾದಿ ಇತ್ಯಾದಿ. ದಿನವೂ ಶುಚಿಯಾಗಿ ಸ್ನಾನ ಮಾಡುತ್ತೇವೆ. ಫಿಲ್ಟರ್ ನೀರನ್ನೇ ಕುಡಿಯುತ್ತೇವೆ. ಹತ್ತು ನಿಮಿಷಗಳಷ್ಟು ಧ್ಯಾನ, ಯೋಗ, warm up ವ್ಯಾಯಾಮ, ಎಲ್ಲವೂ ಮಾಡುತ್ತೇವೆ. ಕುಂಗ್ ಫು ಕೋರ್ಸ್‌ಗೆಂದು costume ಸಹ ಹೊಲೆಸಿದ್ದೇವೆ. ನಮಗೆ ಶಕ್ತಿ ಜಾಸ್ತಿ ಇರಬೇಕಲ್ಲವೇ?.

ಬರೀ ಗಂಜಿ, ಒಣ ಮೀನು, ಚಟ್ನಿ, infection, allergy ಆಗುವ ಕಾಯಿಗಳನ್ನು ತಿನ್ನುವ ಅವರೇ Prize ಹೊಡೆದು ಕೊಂಡರಲ್ಲ ಹೀಗ್ಯಾಕೆ ಆಯ್ತೋ! ಅರ್ಥಾನೇ ಆಗಲ್ಲ.

ಬದಲಾವಣೆ ಬರುವುದು ಹೇಗೆ ?

○ ಪುಷ್ಪ


ಆಕೆಯ ಜೀವನ ಪುಟ್ಟದೊಂದು ದ್ವಿಚಕ್ರ ವಾಹನಗಳಿಗೆ ಬಿಡಿಭಾಗಗಳನ್ನು ಮಾಡುವ ಮಾಡುವ ಕಂಪೆನಿಯಲ್ಲಿ. ಮುದ್ದಾದ ಇಬ್ಬರು ಮಕ್ಕಳು. ಆದರೆ ಜೀವನದ ದುರಂತ- ಹೊಡೆಯುವ ಬಾಯಿಗೆ ಬಂದಂತೆ ದುಷ್ಟ ಪದಗಳೊಂದಿಗೆ ಬೈಯುವ ಸಲಗ (ಗಂಡ).

ಆಕೆ ಆ ಪುಟ್ಟ ಕಂಪೆನಿಯಲ್ಲಿ ಕೆಲಸಮಾಡುತ್ತಾ ತವರುಮನೆಯಿಂದ ಅರಿಶಿನ ಕುಂಕುಮಕ್ಕೆಂದು ಬಳುವಳಿಯಾಗಿ ಕೊಟ್ಟ ಪುಟ್ಟ ಜಾಗದಲ್ಲಿ ತನ್ನ ಕೈಯಲ್ಲಿ, ಮತ್ತು ಸುತ್ತಲಿನ ಜನರ ಪರಿಚಯ, ಸಹಾಯದಿಂದ ಮನೆಯನ್ನು ಕಟ್ಟಿ, ನಿರಾಂತಕವಾಗಿ ಇರಬಹುದು ಅಂದುಕೊಳ್ತಾಯಿರೋ ಸಮಯದಲ್ಲಿ, ಗಂಡ ಎನ್ನುವವ ಮತ್ತೇನೂ ವ್ಯಾಪಾರ ಮಾಡುತ್ತೇನೆ ಎಂದು ಹೆಂಡತಿ ಹತ್ತಿರ ತೆಗೆದುಕೊಂಡ ಹಣವನ್ನು ಹಾಳುಮಾಡಿದ್ದೂ ಲೆಕ್ಕವೆ ಇಲ್ಲ. ಆಕೆ ಒಳ್ಳೆಯ ವ್ಯವಹಾರಸ್ತೆ ಎಂದು ಎಲ್ಲರೂ ಆಕೆಯ ಜೊತೆಯಲ್ಲಿ ವ್ಯವಹರಿಸುವುದು, ಮಾತುಕತೆ ಮಾಡುವುದು ನೋಡಿ ಅಸೂಯೆ ಪಡುತ್ತಿದ್ದ ಅವನು, ಒಂದು ದಿನ ಹೆಂಡತಿ ಸ್ವಲ್ಪ ತಡವಾಗಿ ಮನೆಗೆ ಬಂದಿದ್ದನ್ನೆ ನೆಪಮಾಡಿ ಸೌದೆಯ ತುಂಡು ತೆಗೆದು ಹೊಡೆದುದೆ ಅಲ್ಲದೆ, ನೀನು ಇನ್ನು ಮುಂದೆ ಯಾರ ಹತ್ತಿರವೂ ಮಾತನಾಡ ಬಾರದೆಂದು, ಏನೂ ಎಲ್ಲರನ್ನೂ ನೋಡಿ ಹಲ್ಲುಗಿಂಜಿತಿಯಾ ಎಂದೋ ಆಕೆಯನ್ನು ಹೀಯಾಳಿಸುವುದು ಅವನ ದಿನಚರಿಯಲ್ಲಿ ಒಂದಾಗಿತ್ತು. ಅದಾಗಿಯೂ ಆಕೆ ತುಂಬ ಸೌಜನ್ಯದಿಂದ ಹೆಣ್ಣಿನ ನೈಜ ಸ್ವಭಾವದಂತೆ ನಾಚಿ ನೀರಾದರೂ ಅವರಿವರಿಗೆ ತಿಳಿಯತ್ತಲ್ಲಾ ಅಂತ. ಇದಾದ ನಂತರ ಅವನು ಬೆಳಗ್ಗೆ ಎದ್ದು ಮನೆಯಿಂದ ಹೋದವನು ಮತ್ತೆ ಹಿಂತಿರುಗಲಿಲ್ಲ.

ಆದರೆ ಸ್ವಲ್ಪ ದಿವಸಗಳ ನಂತರ ಆಕೆಗೆ ಒಂದು ಫೋನ್ ಪಕ್ಕದ ಮನೆಯಲ್ಲಿ ಬಂದಿತ್ತು. ಅಲ್ಲಿ ಮಾತನಾಡುವಾಗ ಗೊತ್ತಾದದ್ದು ಒಬ್ಬ ದಫೇದಾರ್ ನೋಡಮ್ಮ ನೀನು ಇಂಥಾವರ ಹೆಂಡತೀನಾ ಅಂತ ಕೇಳಿ, ನಾನು ಪೋಲೀಸ್ ಸ್ಟೇಷನ್‌ನಿಂದ ದಫೇದಾರ್ ಮಾತನಾಡ್ತಾಯಿದ್ದೀನಿ ನೋಡಮ್ಮ ನಿನ್ನ ಗಂಡ ನನ್ನ ಎದುರಿನಲ್ಲಿ ಕುಳಿತಿದ್ದಾನೆ ಅವನು ಆತ್ಮಹತ್ಯೆ ಮಾಡಕೊಳ್ತಾನಂತೆ, ಅವನು ಸತ್ತು ಹೋಗ್ತಾನಂತೆ ತಕ್ಷಣ ಬಂದು ಕರೆದುಕೊಂಡು ಹೋಗಮ್ಮ ಅಂತ ಹೇಳಿದ ಅಧಿಕಾರದ ಧ್ವನಿಯಲ್ಲಿ. ಆಕೆ ಹೆದರಿ ಏನು ಮಾಡಲು ತೋಚದೆ ಹಾಗೆ ನಿಂತುಬಿಟ್ಟರು. ಆಮೇಲೆ ಅಕ್ಕಪಕ್ಕದವರು ನೀನೇನು ಹೆದರಬೇಡ ಸಾಯುವವನಾಗಿದ್ದರೆ ಸಾಯುತ್ತಿದ್ದ ನಿನ್ನನ್ನು ಹೆದರಿಸಲು ನಾಟಕ ಮಾಡುತ್ತಿದ್ದಾನೆ ನೀನು ಒಬ್ಬಳೇ ಹೋಗಬೇಡ ಬರುವನಾದರೆ ಅವನೇ ಬರುತ್ತಾನೆ ಎಂದು ಹೇಳಿದಾಗ ಹೋಗದೆ ನಿಂತುಬಿಟ್ಟರು. ಇಲ್ಲದಿದ್ದಲ್ಲಿ ಅವಳೇನಾಗುತ್ತಿದ್ದಳೋ ಏನೋ.

ಹೀಗೆ ಹೆದರಿಸಿ ಆದ ಸ್ವಲ್ಪ ದಿನಗಳ ನಂತರವೂ ಆತ ಬರಲಿಲ್ಲ. ಆದರೆ ಮಕ್ಕಳ ಶಾಲೆ ಹತ್ತಿರ ಹೋಗಿ, ಸಿಗರೇಟು ಸೇದಲು ದುಡ್ಡಿಲ್ಲ ಅಮ್ಮನ ಹತ್ತಿರ ನಾಳೆ ಬರುವಾಗ ಐದು ರೂಪಾಯಿ ಇಸುಕೊಂಡುಬಾ ಅಂತ ಹೇಳಿ ಕಳುಹಿಸಿದ್ದ. ಇಂಥಾ ಅಸಹ್ಯದ ಸ್ವಭಾವವುಳ್ಳ ಗಂಡಸರ ಸಹವಾಸದಲ್ಲಿ ಹೆಣ್ಣುಗಳ ಗತಿ ಏನು? ಏನಾಗಿಬಿಡುವುದೂ ಎಂಬ ಚಿಂತೆ, ಭಯ, ಆತಂಕ ಇಷ್ಟೇ ಅಲ್ಲದೆ ಸ್ವಲ್ಪತಡವಾಗಿ ಗೊತ್ತಾದದ್ದು ಆತ ಮತ್ತೊಬ್ಬ ಹುಡುಗಿಯನ್ನು ಮದುವೆಯಾಗಿಯೋ, ಇಲ್ಲ ಹಾಗೆಯೋ ಒಟ್ಟಿನಲ್ಲಿ ಅವಳ ಜೊತೆ ಸುಖವಾಗಿ ಜೀವನ ನಡೆಸುತ್ತಿದ್ದಾನೆ ಅಂತ.

ಇಷ್ಟಾದರೂ ಇಂಥಾ ಹೆಣ್ಣುಮಕ್ಕಳಿಗೆ ಸಮಾಜದ ಭಯ; ಯಾರಾದರೂ ಕೇಳಿದರೆ ಏನು ಹೇಳುವುದೆಂದು, ಎಷ್ಟೇ ತಾಳ್ಮೆಯಿಂದ ಇದ್ದರೂ ಹೊಡೆದು ಬಡೆದು ಸಾಯಿಸುತ್ತಾನಲ್ಲ ಇವನ ಜೊತೆ ಬದುಕುವುದು ಹೇಗೆಂದು, ಒಂಟಿಯಾಗಿ ಮನೆಗಳಲ್ಲಿ ಇರುವ ಭಯ, ಮನೆಗೆ ಹೋಗದಿದ್ದಲ್ಲಿ ಮತ್ತೆಲ್ಲಿ ಹೋಗಬೇಕೆಂಬ ಚಿಂತೆ, ರಾತ್ರಿ ಯಾಕಾಗುತ್ತದೋ ಎಂಬ ಚಿಂತೆ, ಬೆಳಗಾದರೆ ಇದೇನು ಜೀವನವೋ ಯಾಕೆ ಬದುಕಬೇಕೋ ಎಂಬ ನಿರಾಸೆ. ಇಂಥ ನಿರಾಸೆಗಳಲ್ಲಿ ಬದುಕಿನ ಅನುಭವಗಳ ಸತ್ಯಾ ಸತ್ಯತೆಗಳ ಅರಿವು ಇದ್ದಾಗಲೂ ಬದುಕಿನಲ್ಲಿ ಧೈರ್ಯವಿರದೇ ಇರುವ ಹೆಣ್ಣುಗಳೇ ಜಾಸ್ತಿ ಇದ್ದಾರೆ. ಯಾವರೀತಿ ಯಾರಾದರು ಇಂಥವರಿಗೆ ಸಹಾಯ ಮಾಡಬಲ್ಲರು? ಯೋಚಿಸುವ ಬಗೆ ಹೇಗೆ? ಇದಕ್ಕೆ ಕೊನೆ ಎಲ್ಲಿ? ಬದಲಾವಣೆ ಬರುವುದಾದರೇ ಹೇಗೆ? ಇಂಥಾ ಸಮಯಗಳಲ್ಲಿ (ಗಂಡ ತಾನೇ ಮನೆಬಿಟ್ಟು ಓಡಿ ಹೋದಾಗಲೂ) ಯಾವುದಾದರು ತೀರ್ಮಾನಗಳು ತೆಗೆದುಕೊಳ್ಳದಿದ್ದಲ್ಲಿ ಗಂಡಸರ ದಬ್ಬಾಳಿಕೆಗೆ ಕೊನೆಯೇ ಇರುವುದಿಲ್ಲ. ಇದನ್ನು ಅರಿತು ಧೈರ್ಯದಿಂದ ಎದುರಿಸುವುದನ್ನು ಕಲಿಯಬೇಕು. ಬಾಳಿನ ತಿರುವುಗಳು ರೂಪ ಪಡೆಯುವುದು ಹೇಗೆ? ನಮ್ಮ ಪುರುಷರಿಗೆ ನಾವೇ ಬುದ್ಧಿ ಕಲಿಸಬೇಕು. ಮಹಿಳೆಯರಲ್ಲಿ ತಿಳುವಳಿಕೆ, ತಾವು ಶೋಷಣೆಗೆ ಒಳಗಾಗುತ್ತಿದ್ದೇವೆಂಬ ಜಾಗೃತಿ ಮೂಡಬೇಕಾಗಿದೆ.



REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067